ಮಾನಸಿ

ಮೇ 2003 ತಿಂಗಳ ಪತ್ರಿಕೆ

"ದಿ ಆಫೀಸರ್ಸ್ ವುಮನ್"





- ಆತ್ಮ ಗೌರವದ ಕನಸು
- ಬಹುರಾಷ್ಟ್ರೀಯ ಕಂಪನಿಗಳಲ್ಲಿ ಮಹಿಳೆಯರು
- ಬೇಬಿ ಹಲ್ದಾರಳ ಡೈರಿ....

ಮಾನಸ

ತಿಂಗಳ ಪತ್ರಿಕೆ   ಮೇ 2003
ಸಂಪುಟ 18   ಸಂಚಿಕೆ : 4

ಸಂಪಾದಕೀಯ ಮಂಡಳಿ :
ರಾಜೇಶ್ವರಿ ಎಚ್.ಎಸ್.,
ಚಂಪಾವತಿ ಎಚ್.ಎಸ್., ಸರಸ್ವತಿ ದು.,
ಸವಿತಾ ಎ., ಗೀತಾ, ವೆಂ. ವನಜಾ, ನೀಲಾಂಜನ
ಶ್ಯಾಮಲ. ಬಿ.ಎನ್.ಶಾರದ
ಹೆಚ್.ಎಸ್.ಪುಷ್ಪಾ., ಜಿ.ವಿ.ವೇದವಲ್ಲಿ,
ಲಕ್ಷ್ಮಿ ಎ., ವತ್ಸಲಾ ವೈ. ಎಸ್.

ಸಲಹೆ - ಸಹಕಾರ :
ಇಳಾ ವಿಜಯ

ವಿಳಾಸ
" **ಮಾನಸ** " ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ : ಸೂಚನೆ: ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಮಾನಸ ಪ್ರತಿಗಳಿಗಾಗಿ

ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : *2329, 12ನೇ ಮೇನ್, 2 ನೇ ಹಂತ ವಿಜಯನಗರ, ಮೈಸೂರು - 570 017*

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ವೇಶ್ಯಾವೃತ್ತಿಯ ಸಮಸ್ಯೆಯನ್ನು ವಿವಿಧ ಸಾಮಾಜಿಕ, ರಾಜಕೀಯ, ಆರ್ಥಿಕ ಸನ್ನಿವೇಶದಲ್ಲಿ ವಿಭಿನ್ನ ದೃಷ್ಟಿಕೋನದಲ್ಲಿ ನೋಡಲಾಗಿದೆ. ಪ್ರಗತಿ ಪರ ಸಾಹಿತ್ಯದ ಸಂದರ್ಭದಲ್ಲಿ ಆಕೆಯನ್ನು ಸೂಳೆಯಂತಲೂ, ಪ್ರಪಾತಕ್ಕೆ ಬಿದ್ದವಳು ಎಂಬಂತೆ ಚಿತ್ರಿಸಲಾಗಿದೆ. ಆಕೆಯನ್ನು ಪ್ರಪಾತದಿಂದ ಮೇಲೆತ್ತುವ ಗೃಹಣಿಪಟ್ಟವನ್ನು ನೀಡುವ ಮಾನವೀಯ ಅನುಕಂಪದಿಂದ ನೋಡುವ ಉದಾರವಾದಿ ಮನೋಭಾವವನ್ನೂ ಹಲವಾರು ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಸನ್ನಿವೇಶದ ಒತ್ತಡಕ್ಕೆ ಸಿಲುಕಿ, ಹೊರಗೆ ಬರಲಾರದೆ, ಅಂತಹ ಸನ್ನಿವೇಶವನ್ನ ಅನಿವಾರ್ಯ ಕಾರಣಗಳಿಗೆ ಒಪ್ಪಿಕೊಳ್ಳುವ, ದುರಂತಕ್ಕೆ ಒಳಗಾಗುವ ಹೆಣ್ಣು ಮಕ್ಕಳ ಕತೆಗಳು ನಮ್ಮ ಮುಂದಿವೆ.

ಆದರೆ ಇಂದು ಮಹಿಳಾ ಚಳುವಳಿ ವೇಶ್ಯಾ ಸಮಸ್ಯೆಯನ್ನು ವಿಭಿನ್ನ ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡುತ್ತದೆ. ವೇಶ್ಯೆಯರ ಬದುಕಿಗೆ ಅಂಟಿರುವ ನೈತಿಕ ದೃಷ್ಠಿಕೋನವನ್ನು ಮೂಲಭೂತವಾಗಿ ಪ್ರಶ್ನಿಸಲಾಗುತ್ತಿದೆ. ಅವರ ವೃತ್ತಿಯನ್ನು ಶ್ರಮವೆಂದು ಅರ್ಥೈಸುವ ಹಾಗೂ ಅದನ್ನು ಕಾನೂನು ಸಮ್ಮತಗೊಳಿಸುವಲ್ಲಿ ವೇಶ್ಯೆಯರು ಸಂಘಟಿತರಾಗುತ್ತಿದ್ದಾರೆ. ಇಂತಹ ಸಂಘಟನೆಯ ಪ್ರಯತ್ನದಿಂದಾಗಿ, ಅವರನ್ನು ಸಮಾಜ ನೋಡುವ ದೃಷ್ಠಿ ಕೋನದಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಹಾಗೂ ಈ ಬದಲಾವಣೆಯನ್ನು ಅವರು ತಮ್ಮ ಹಕ್ಕೆಂದು ಹೋರಾಡುತ್ತಿದ್ದಾರೆ. ಈ ಸಂಘಟನಾ ಪ್ರಯತ್ನದ ಮೂಲಕ, ರೌಡಿಗಳಿಂದ ಹಾಗೂ ಪೋಲೀಸರಿಂದ ನಡೆಯುವ ಕಿರುಕುಳ ಹಿಂಸೆಯನ್ನು ಎದುರಿಸುವಲ್ಲಿ ಸಶಕ್ತರಾಗಿದ್ದಾರೆ. ತಮ್ಮ ಮೇಲೆ ನಡೆಯುವ ದೌರ್ಜನ್ಯವನ್ನೂ ಎದುರಿಸಲು ದನಿ ಎತ್ತುತ್ತಿದ್ದಾರೆ.

ಆದರೆ ಜಾಗತೀಕರಣ ಹಿನ್ನೆಲೆಯಲ್ಲಿ ಹಾಗೂ ಪುರುಷ ಪ್ರಧಾನ ಕಲ್ಪನೆಯಿಂದಾಗಿ ಇಂದು ಈ ಸಮಸ್ಯೆ ಸಂಕೀರ್ಣ ಹಾಗೂ ಗಂಭೀರ ಸ್ವರೂಪವನ್ನು ಪಡೆಯುತ್ತಿದೆ. ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ ಕಾಣೆಯಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಅಪ್ರಾಪ್ತ ವಯಸ್ಸಿನ ಬಾಲಕಿಯರನ್ನು ಅವರಿಗೆ ಅರಿವಿಲ್ಲದಂತೆ ಈ ವೃತ್ತಿಗೆ ತಳ್ಳಲಾಗುತ್ತಿದೆ. ಟೂರಿಸಂ ನೆಪದಲ್ಲಿ ಸರ್ಕಾರಗಳು. ರೆಸಾರ್ಟ್ ಸಂಸ್ಕೃತಿಯನ್ನು ಹುಟ್ಟು ಹಾಕಿ, ಇದಕ್ಕೆ ನೀರೆರೆಯುತ್ತಿದೆ.

ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರನ್ನು ರಕ್ಷಿಸುವಲ್ಲಿ ಅಥವಾ ಅವರ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿದೆ. ದೈಹಿಕ ಹಿಂಸೆಯಿಂದ ರಕ್ಷಣೆ ಆರೋಗ್ಯ ಸವಲತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸ, ರೇಶನ್ ಕಾರ್ಡ್ ಮುಂತಾದ ಮೂಲಭೂತ ಸಮಸ್ಯೆಗಳತ್ತ ಮೊದಲು ಗಮನಕೊಡಬೇಕಾಗಿದೆ.

ಸಂ. ಮಂಡಳಿ

‘ದಿ ಆಫೀಸರ್ಸ್ ವುಮನ್’

ಈ ಕಾದಂಬರಿಯ ವಸ್ತು ಎಲಿಜಬೆತ್ ಎಂಬ ಹೆಣ್ಣು ಮಗಳನ್ನು ಕೇಂದ್ರ ಬಿಂದುವಾಗಿರಿಸಿ, ಯುದ್ಧದ ಹಿನ್ನಲೆಯಲ್ಲಿ ಮಾನವೀಯ ಸಂಬಂಧಗಳನ್ನ, ಗಂಡು, ಹೆಣ್ಣಿನ ಸಂಬಂಧವನ್ನ, ಬಡತನವನ್ನ ಹಾಗೂ ಇಂಗ್ಲೆಂಡಿನ ಸಮಾಜದ ಆಗು-ಹೋಗುಗಳನ್ನು ವಿಶಿಷ್ಟವಾಗಿ ದಾಖಲಿಸಿದೆ. ಹದಿನೆಂಟನೆಯ ಶತಮಾನದ ಕೊನೆಯ ಹಾಗೂ ಹತ್ತೊಂಭತ್ತನೆಯ ಶತಮಾನದ ಆದಿ ಭಾಗದ ಇಂಗ್ಲೆಂಡಿನ ಚಾರಿತ್ರಿಕ ಹಿನ್ನೆಲೆ ಹೊಂದಿರುವ ಈ ಕಾದಂಬರಿಯು ಎಲಿಜಬೆತ್ ಎಂಬ ‘demi-monde’ ಮೂಲಕ, (ಅಂದರೆ ಒಂದು ಅರ್ಥದಲ್ಲಿ - ಒಪ್ಪಂದದ ಮೂಲಕ ಇಟ್ಟುಕೊಂಡವಳು) ಆಕೆಯ ಕಣ್ಣುಗಳಲ್ಲಿ ಇಂಗ್ಲೆಂಡಿನ ಬದುಕು, ಯುದ್ಧ, ಕುಟುಂಬ, ಮದುವೆ, ಪ್ರೀತಿ, ಭದ್ರತೆ, ಸಾವು, ನೋವುಗಳನ್ನು ಸೆರೆ ಹಿಡಿಯುತ್ತಾ ಹೋಗುತ್ತದೆ. ಕಾದಂಬರಿಯ ಅಂತ್ಯದಲ್ಲಿ ಓದುಗರಿಗೆ ಆಘಾತ ಉಂಟು ಮಾಡುವ ಅಂಶವೊಂದು ಗೋಚರವಾಗುತ್ತದೆ. ಕಾದಂಬರಿಯ ನಾಯಕಿ ಎಲಿಜಬೆತ್‌ಳ ಮಗನ ನಿವೇದನೆಯಿಂದ ಇಡಿಯ ಕಾದಂಬರಿ ಒಂದು ನಿಜವಾದ ಬದುಕಿನ ದಾಖಲೆ ಎನ್ನುವ ವಿಚಾರ ನಮ್ಮನ್ನು ಗೊಂದಲಕ್ಕೀಡು ಮಾಡುವುದಲ್ಲದೇ ಎಲಿಜಬೆತ್‌ಳ ಪ್ರಾಮಾಣಿಕತೆ ನಮ್ಮನ್ನು ಬೆಚ್ಚಿಸುತ್ತದೆ. ಆಕೆಯ ಮಗ ಆರ್ಥರ್ ಎಡ್ವರ್ಡ್ ಸ್ಪೇಹೌಸ್ 1837 ರಲ್ಲಿ ತನ್ನ ತಾಯಿ ಸತ್ತ ನಂತರ ಆಕೆಯ ಕೈ ಬರಹದ ಪ್ರತಿಯನ್ನು ಕಂಡದ್ದಾಗಿ ಬರೆಯುತ್ತಾನೆ. ಈ ಬರಹವನ್ನು ಓದಿದಾಗ ಅವನಿಗೆ ಅವನ ಹುಟ್ಟು, ಬದುಕಿನ ಬಗ್ಗೆ ಅವನಲ್ಲೇ ಗೊಂದಲ ಹುಟ್ಟುತ್ತದೆ. ತಾನು ಪಡೆದಿರುವ ಆಸ್ತಿಗೆ ತಾನು ಭಾಧ್ಯಸ್ಥನಹುದೋ, ಅಲ್ಲವೋ ಎನ್ನುವ ಅನುಮಾನಕ್ಕೊಳಗಾದುದಾಗಿ ಆತ ತಿಳಿಸುತ್ತಾನೆ. ತನ್ನ ಹುಟ್ಟಿನ ಚರಿತ್ರೆಯನ್ನು ಹುಡುಕಿಕೊಂಡು ಹೋಗುತ್ತಾನೆ. ನಿಜ ತಿಳಿಯುವಲ್ಲಿ ವಿಫಲನಾಗಿ ನಿರಾಶನಾಗುತ್ತಾನೆ. ತನ್ನ ತಾಯಿಯ ಈ ಬದುಕಿನ ದಾಖಲೆಯನ್ನು ಏನು ಮಾಡುವುದೆಂದು ಮಲ-ತಂಗಿ ಕ್ಯಾರೋಲೈನ್ ಬಳಿ ಚರ್ಚಿಸುತ್ತಾನೆ. ಈ ಇಡೀ ದಾಖಲೆ ಆರ್ಥರ್‌ಗೆ ನೋವಿನದ್ದಾದರೂ ಇದನ್ನು ಜೋಪಾನವಾಗಿಡಬೇಕೆಂದು ಇಬ್ಬರೂ ನಿರ್ಧರಿಸುತ್ತಾರೆ.

ಕಾದಂಬರಿಯ ಲೇಖಕಿ ಮಾರ್ಗ್ಗಾಟ್ ಆರ್ನಾಲ್ಡ್ 1972 ರಲ್ಲಿ ಈ ಕಾದಂಬರಿಯನ್ನು ಪ್ರಕಟಿಸಿರುತ್ತಾರೆ. ನಿಜ ಜೀವನದ ದಾಖಲೆಯೊಂದನ್ನು ಸೂಕ್ಷ್ಮವಾಗಿ, ಸ್ತ್ರೀವಾದಿ ದೃಷ್ಟಿಕೋನದಿಂದ ವೀಕ್ಷಿಸಿ ಬರೆದ ರೀತಿ ಬೆರಗು ಹುಟ್ಟಿಸುವಂತಹದು. ಲೇಖಕಿ ನಿರೂಪಿಸಿರುವ ಎಲಿಜಬೆತ್ ಎತ್ತುವ ಪ್ರಶ್ನೆಗಳು ಇಂದಿಗೂ ಪ್ರಸ್ತುತ. ಬದುಕು ಹಾಗೂ ಬರಹದ ಮಧ್ಯದ ಗೆರೆಯನ್ನು ಅಳಿಸಿ ಹಾಕಿದಂತಹ ಪ್ರಯತ್ನವಾಗಿ ‘ದಿ ಆಫೀಸರ್ ವುಮನ್’ ಕಾದಂಬರಿ ನಮಗೆ ಕಾಣಿಸುತ್ತದೆ. ಇದೊಂದು ಸ್ಫೂರ್ತಿದಾಯಕ ಕಾದಂಬರಿ ಎನಿಸಿದ್ದರಿಂದ ಇದರ ಒಂದು ಕಿರು ಪರಿಚಯವನ್ನು ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಅಪರೂಪದ ಕಾದಂಬರಿಯನ್ನು ಓದಿದ ಮಾನಸದ ಗೆಳತಿ ಸವಿತ ಮಾನಸದ ಗೆಳತಿಯರೆಲ್ಲರಿಗೂ ಇದನ್ನು ಓದಿ ಎಂದು ನೀಡಿದ ಪ್ರೇರಣೆಯ ಅಭಿವ್ಯಕ್ತಿಯೇ ಈ ಲೇಖನ.

ಎಲಿಜಬೆತ್ ಲಂಡನ್ನಿನ ಫಿಶ್ ಸ್ಟ್ರೀಟಿನ ಹುಡುಗಿ. 8 ಮಕ್ಕಳಲ್ಲಿ ಓರ್ವಳಾದ ಇವರ ಕುಟುಂಬದ ಬದುಕು ಕಷ್ಟಮಯವಾದದ್ದು. ಯುರೋಪಿನ ಯುದ್ಧಗಳು ಬಡವರ ಬದುಕನ್ನು ದುರ್ಭರಗೊಳಿಸಿದಂತಹ ಸಮಯ. ತಂದೆ ಪೀಟರ್ ಕಾಲವರ್ ಒಬ್ಬ ಬಡ ಬಡಗಿ. ಇಬ್ಬರು ಮಕ್ಕಳ ಮರಣದ ತರುವಾಯಿ ರೋಗ ಪೀಡಿತ ಹೆಂಡತಿ ಹಾಗೂ ಆರು ಮಕ್ಕಳ ಹೊಟ್ಟೆ ಹೊರೆಯಲು ಬೆಳಗಿನಿಂದ ಸಂಜೆಯತನಕ ದುಡಿಯುವುದು ಆತನಿಗೆ ಅನಿವಾರ್ಯ. ನೆರೆ ಹೊರೆಯ ಬಡವರಲ್ಲಿ ಅತ್ಯಂತ ಕಡು ಬಡವರೆಂದರೆ ಎಲಿಜಬೆತ್ ಕುಟುಂಬದವರು. ಕೊನೆಯ ಮಗುವಿನ ಜನನದ ನಂತರದ ಎರಡು ವರ್ಷಗಳಲ್ಲಿ ಸುಸ್ತಿನಿಂದ ಚೇತರಿಸಿಕೊಳ್ಳಲಾರದ ತಾಯಿ ಸತ್ತಾಗ ಎಲಿಜಬೆತ್‌ಳಿಗೆ 15 ವರುಷ.

ಫಿಶ್ ಸ್ಟ್ರೀಟ್‌ನ ಇವರ ಪಕ್ಕದ ಮನೆಯ ಹೆಂಗಸಿನ ಸಹೋದರಿ ಬೆಲ್ಲೆ ಡೇವೀಸ್. ಈಕೆ ಎಲಿಜಬೆತ್‌ಳ ಬದುಕಿಗೆ ಬೇರೊಂದು ತಿರುವನ್ನೆ ನೀಡಿ ಬಿಡುತ್ತಾಳೆ. ಬೆಲ್ಲೆ ಡೇವೀಸ್ ಫಿಶ್ ಸ್ಟ್ರೀಟ್‌ಗೆ ಕುದುರೆಗಾಡಿಯಲ್ಲಿ ಬಂದಿಳಿಯುವುದನ್ನು ನೋಡುವುದೇ ಅಲ್ಲಿದ್ದವರ ದಾರಿದ್ರ್ಯದ ಬದುಕಿಗೊಂದು ಸಂಭ್ರಮ. ಆಕೆ ಚಂದಾದ, ರಂಗು-ರಂಗಿನ ಉಡುಗೆಯಲ್ಲಿ ಕುದುರೆಗಾಡಿಯಲ್ಲಿ ಬಂದು, ಅಲ್ಲಿದ್ದವರ ಕುತೂಹಲದ ಕಣ್ಣುಗಳ ವೀಕ್ಷಿಸದೇ ಸಹೋದರಿಯ ಮನೆಗೆ ನುಗ್ಗುತ್ತಾಳೆ.

ಕಾತರದಿಂದ ಕಾಯುವ ಆಕೆಯ ಸಹೋದರಿಯ ಕೈಯಲ್ಲಿ ಹಣದ ಪರ್ಸವೊಂದನ್ನು ತುರುಕಿ, ಹೊರಗೆ ಬಂದು, ನೋಡಲೆಂದು ಗುಂಪಾಗಿ ನೆರೆದಿರುವ ಜನರಿಗೆ ತಲೆಬಾಗುತ್ತಾ ತನ್ನ ಕುದುರೆಗಾಡಿಯಲ್ಲಿ ಹೊರಟು ಹೋಗುತ್ತಾಳೆ.

ಎಲಿಜಬತ್‌ಳ ಬಾಲ್ಯದ ಕಣ್ಣುಗಳಿಗೆ ಬೆಲ್ಲೆ ಡೇವೀಸ್ ಇನ್ನೊಂದು ಪ್ರಪಂಚದ ದೇವತೆಯಂತೆ ಕಾಣುತ್ತಾಳೆ. ಬಡತನ, ಹಸಿವು, ದಾರಿದ್ರ್ಯದ ಮಧ್ಯದಲ್ಲಿ ಆಕೆ ಒಂದು ಕೋರೈಸುವ ಮಿಂಚು. ಎಲಿಜಬೆತ್ ತಾಯಿ ಬದುಕಿರುವವರೆಗೂ ಆಕೆ ಬೆಲ್ಲೆ ಡೇವೀಸಳ ಅಸ್ತಿತ್ವವನ್ನು ಒಪ್ಪಿಕೊಂಡವಳೇ ಅಲ್ಲ. ಆಕೆಯ ಪ್ರಕಾರ ಬೆಲ್ಲೆ ಒಬ್ಬ ಸೂಳೆ, ದಾರಿತಪ್ಪಿದವಳು, ನೀತಿಗೆಟ್ಟವಳು. ಹೀಗೆ ಬಯ್ಯುತ್ತಲೇ ತಾವು ಬಡವರಾದರೂ ಪ್ರಾಮಾಣಿಕರು. ಆದರೆ ಬೆಲ್ಲೆ ಸೂಳೆಯೇ, ಒಂದಲ್ಲ ಒಂದು ದಿನ ಆಕೆ ಬೀದಿಗೆ ಬಂದೇ ಬರುತ್ತಾಳೆ. ತಾಯಿಯ ಈ ಮಾತು ಕೇಳಿದ ಎಲಿಜಬೆತ್ ಬೆಲ್ಲೆ ಡೇವೀಸ್ ಹರಿದ ಬಟ್ಟೆಗಳಲ್ಲಿ ಯಾವಾಗ ಆ ಬೀದಿಯಲ್ಲಿ ಕಾಣಸಿಕೊಂಡು ಭಿಕ್ಷೆ ಬೇಡಿಯಾಳು ಎಂದು ಕಾಯುತ್ತಿರುತ್ತಾಳೆ. ಆದರೆ ಬೆಲ್ಲೆ ಬೀದಿಗೆ ಬರುವುದಿಲ್ಲ. ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತಾ, ಮಾತನಾಡುತ್ತಾ ಬಡತನ, ದಾರಿದ್ರ್ಯದಲ್ಲಿಯೇ ತಾಯಿ ಸತ್ತ ನಿಜ ಮಾತ್ರ ಎಲಿಜಬೆತ್‌ಳ ಹೃದಯದಲ್ಲಿ ನಿಲ್ಲುತ್ತದೆ.

ಈ ಬೆಲ್ಲೆ ಡೇವೀಸ್ ನಂತರದಲ್ಲಿ ಎಲಿಜಬತ್‌ಳ ಬದುಕಿನಲ್ಲಿ ಬಹು ಮುಖ್ಯವಾದ ಪಾತ್ರ ವಹಿಸುತ್ತಾಳೆ. ಎಲಿಜಬತ್‌ಳ ತಂದೆ ಹಾಗೂ ಬೆಲ್ಲೆ ಡೇವೀಸ್ ಆಕೆಯ ಮುಂದಿನ ಬದುಕನ್ನು ನಿರ್ಧರಿಸುತ್ತಾರೆ. ಎಲಿಜಬತ್ 16 ವರುಷದವಳಿರುವಾಗ ಆಕೆಯನ್ನು ಬೆಲ್ಲೆ ಡೇವೀಸ್ ಜೊತೆ ಕಳಿಸುವ ನಿರ್ಧಾರವಾಗುತ್ತದೆ. ತನ್ನ ಬಾಲ್ಯದ ಪುಟ್ಟ ಪುಟ್ಟ ಕನಸುಗಳನ್ನೆಲ್ಲ ಎಲಿಜಬೆತ್ ತನ್ನ ತಂದೆಗಾಗಿ, ತನ್ನ ಬಡತನಕ್ಕಾಗಿ, ತನ್ನ ಕುಟುಂಬದವರ ಹೊಟ್ಟೆಗಾಗಿ ಮಾರಬೇಕಾಗುತ್ತದೆ. ಜೊತೆಗೆ ಆರು ಮಕ್ಕಳಲ್ಲಿ ಒಂದು ಮಗುವಿನ ಹೊಟ್ಟೆಯ ಪ್ರಶ್ನೆ ದೂರವಾಗುತ್ತದೆ ಎಂದು ದೂರಾಲೋಚನೆ ಮಾಡುವ ತಂದೆ, ಚಿಕ್ಕಮ್ಮ, ಸಹೋದರಿಯರ ನಿರ್ಧಾರದಲ್ಲಿ ಎಲಿಜಬೆತ್ ಬೆಲ್ಲೆ ಜೊತೆ ಹೋಗಲೇ ಬೇಕಾಗುತ್ತದೆ. ಆದಾಗ್ಯೂ ಸೂಳೆಯಾಗಲು ಇಷ್ಟಪಡದ ಎಲಿಜಬೆತ್ ಒಂದು ವರ್ಷ-ಅಂದರೆ ಬೆಲ್ಲೆ ಡೇವೀಸಳ ಉದ್ಯೋಗಕ್ಕೆ ಬೇಕಾದ ಡ್ಯಾನ್ಸ್, ಹಾಡು, ಮಾತನಾಡುವುದನ್ನು ಕಲಿಯುವತನಕ ತಾನು ಅವಳ ಜೊತೆ ಇರುವುದಾಗಿ, ನಂತರ ವಾಪಸ್ಸು ಬರುವುದಾಗಿ ನುಡಿಯುತ್ತಾಳೆ. ಎಲಿಜಬೆತ್‌ಳ ಅಣ್ಣ-ಬರುವ ವರ್ಷದಲ್ಲಿ ಕೆಲಸಕ್ಕೆ ಸೇರಿ ದುಡಿಯುವುದಾಗಿ, ಆಗ ಎಲಿಜಬೆತ್ ವಾಪಸ್ಸು ಮನೆಗೆ ಬರಬಹುದೆಂದೂ ನುಡಿಯುತ್ತಾನೆ. ಒಂದು ವರುಷದ ನಂತರ ಈ ಬಗ್ಗೆ ಮಾತನಾಡಬಹುದು ಎಂದು ಹೇಳುವ ಡೇವೀಸ್ ಬೆಲ್ಲೆ ಫಿಶ್ ಸ್ಟ್ರೀಟ್‌ನ ಬಡತನದಿಂದ, ದಾರಿದ್ರ್ಯದಿಂದ, ಸಂಕಟದಿಂದ ಎಲಿಜಬೆತ್‌ಳನ್ನು *1774*ರಲ್ಲಿ ಒಬ್ಬ ಯಶಸ್ವೀ ಸೂಳೆಯಾಗಲು ಅಲ್ಲಿಂದ ಕರೆದೊಯ್ಯುತ್ತಾಳೆ.

ಹೀಗೆ 16ರ ಹರೆಯದಲ್ಲಿ ಬೆಲ್ಲೆ ಡೇವೀಸ್ ಜೊತೆಗೆ ಹೆಜ್ಜೆ ಇಟ್ಟು ಹೊರ ನಡೆದ ಎಲಿಜಬೆತ್‌ಳ ಬದುಕು ಕಾಣುವ ಏಳು-ಬೀಳುಗಳು ಹಲವು. ಅವಳನ್ನು demi monde ಯಾಗಿಸಲು ಬೆಲ್ಲೆ ಡೇವೀಸ್ ಎಲ್ಲಾ ರೀತಿಯ ತರಬೇತಿಗಳನ್ನು ಕೊಡುತ್ತಾಳೆ. ಇವರು ಕೆಲಸ ಮಾಡುವುದು ಸೈನಿಕ ಪಡೆಯ ಅಧಿಕಾರಿಗಳಿಗಾಗಿ, ಕುಟುಂಬಗಳನ್ನು ಎಲ್ಲಿಯೋ ಬಿಟ್ಟು ಬರುವ ಈ ಅಧಿಕಾರಿಗಳು ಬೆಲ್ಲೆ ಡೇವೀಸ್, ಎಲಿಜಬೆತ್ ಅಂತವರನ್ನು ಒಪ್ಪಂದದ ಮೂಲಕ ಇಟ್ಟುಕೊಳ್ಳುತ್ತಾರೆ. ಈ ಒಪ್ಪಂದ ನಡೆಯುವುದೂ ವಕೀಲನೊಬ್ಬನ ಮೂಲಕ. ಒಪ್ಪಂದದಂತೆ ಇಬ್ಬರೂ ನಡೆದುಕೊಳ್ಳಬೇಕು. ಒಪ್ಪಂದ ತಪ್ಪಿ ನಡೆದಲ್ಲಿ, ತಪ್ಪಿದವರು ದಂಡ ತೆರಬೇಕಾಗುತ್ತದೆ. ಇಲ್ಲಿ ಗಂಡಸು ಆಕೆಗಾಗಿ ಹಣ, ಮನೆ, ಆಳು, ಕಾಳು ಎಲ್ಲವನ್ನೂ ಹೊಂದಿಸಿಕೊಡ ಬೇಕಾಗುತ್ತದೆ. ಹಾಗೆಯೇ ಆಕೆಯೂ ಕೂಡ ಒಪ್ಪಂದವಿರುವ ಕಾಲದವರೆಗೆ ಆತನೊಡನೆಯೇ ಇರಬೇಕಾಗುತ್ತದೆ. ಇಟ್ಟುಕೊಳ್ಳುವವಳಿಗೆ ಮನೆ, ಹಣ, ಆಳು-ಕಾಳು ಒದಗಿಸುವುದು ಸಾಮಾನ್ಯ ಸೈನಿಕನಿಗೆ ಸಾಧ್ಯವಾಗದುದರಿಂದ ಸಾಮಾನ್ಯ ಸೈನಿಕ ಇಂತಹ ಫೈನೆಸ್ಟ್ ಹೆಂಗಸರನ್ನು ಆಶಿಸುವುದಿಲ್ಲ. ಎಲಿಜಬೆತ್‌ಳನ್ನು ಬೆಲ್ಲೆ ಡೇವಿಸ್ ಉಡುಪು, ಮಾತು, ನೃತ್ಯಗಳಿಂದ ಹಾಗೂ ಒಳ್ಳೆಯ ಆಹಾರ, ಬಟ್ಟೆಗಳಿಂದ ತಯಾರು ಮಾಡುವುದು ಇಂತಹ ಸೈನಿಕ ಪಡೆಯ ಅಧಿಕಾರಿಗಳಿಗಾಗಿ. ಎಲಿಜಬೆತ್‌ಳ ಬಾಳಿನಲ್ಲಿ ಹೀಗೆ ಮೊದಲು ಪ್ರವೇಶಿಸುವವನೆಂದರೆ ಕ್ಯಾನ್ ಕಾರ್ಟರ್. 'ಬಾಲ್' ಎಂದು ಕರೆಯುವ ಸಾಮಾಜಿಕ ಸಂಭ್ರಮದ ಸಂದರ್ಭದಲ್ಲಿ ಎಲಿಜಬೆತಳ ಹತ್ತಿರ ತಮ್ಮ ಉದ್ಯೋಗದ ಬಗ್ಗೆ ಎಲಿಜಬೆತ್‌ಳಿಗೆ ಈ ಕ್ಯಾನ್ ಕಾರ್ಟರ್ ಪರಿಚಯವಾಗುತ್ತಾನೆ. ಬೆಲ್ಲೆ ಡೇವಿಸ್ ಮಾತನಾಡುತ್ತಾಳೆ. ಹಾಸಿಗೆಯಲ್ಲಿ ತಾವು ಅವರಿಗೆ ಕೊಡಬೇಕಾದ ಸಂತೋಷದ ಬಗ್ಗೆ ಮಾತನಾಡುತ್ತಾಳೆ. ಹಣದ ವ್ಯಾಮೋಹ, ಗೌರವ, ಸ್ಥಾನದ ವ್ಯಾಮೋಹ, ಮನೆಯಲ್ಲಿ ವಯಸ್ಸಾದ ಹೆಂಡತಿಯರಿಂದ ಸಿಗದ ಉದ್ರೇಕದ ಆನಂದ, ಪ್ರೀತಿಯ ಆನಂದ ಇಂತಹ ಅನೇಕ ಕಾರಣಗಳಿಂದಾಗಿ ಬರುವ ಅಧಿಕಾರಿಗಳಿಗೆ ತಾವು ಕಾಮದ ಮೂಲಕ ತಣಿಸಿದರೆ ಅವರಿಂದ ಅನೇಕ ಲಾಭಗಳು ಸಿಗುತ್ತವೆ ಎಂದು ತಮ್ಮ ಉದ್ಯೋಗದ ಗುಟ್ಟುಗಳನ್ನು ಬೆಲ್ಲೆ ಡೇವೀಸ್-ಮೊದಲ ಬಾರಿಗೆ ಎಲಿಜಬೆತ್‌ಗೆ ಹೇಳಿದಾಗ ತಣ್ಣನೆಯ ಭಾವನೆಯೊಂದು ಎಲಿಜಬೆತ್‌ಳ ಮೈಯಲ್ಲಿ ಹರಿದಾಡುತ್ತದೆ. ಪ್ರಾಚೀನ ರೋಮ್‌ನಲ್ಲಿ ಗುಲಾಮರನ್ನು ಹರಾಜಿನಲ್ಲಿ ಮಾರಿದ ಹಾಗೆ ತಾನು ಮಾರಲ್ಪಡುತ್ತಿದ್ದೇನೆ ಎನ್ನಿಸಿದಾಗ ಎಲಿಜಬೆತ್ ಬೆಲ್ಲೆ ಡೇವೀಸ್‌ಗೆ ಛೀಮಾರಿ ಹಾಕುತ್ತಾಳೆ. ಹೆಚ್ಚು ಹಣ ಕೊಡುವವನಿಗೆ ನನ್ನನ್ನು ಮಾರುತ್ತೀಯ? ಎಂದು ಕೂಗುತ್ತಾಳೆ.

ಒಂದು ವರ್ಷ ಮಾತ್ರ ನಿನ್ನ ಜೊತೆಗಿರುತ್ತೇನೆ ಎಂದು ತಾನು ಬರುವಾಗ ಹೇಳಿದ ಮಾತನ್ನು ನೆನಪಿಸುತ್ತಾಳೆ. ತಾನು ಫಿಶ್ ಸ್ಟ್ರೀಟ್‌ಗೆ, ಮನೆಗೆ ವಾಪಸ್ಸು ಹೋಗಲೇ ಬೇಕೆಂದು ಹಟ ಹಿಡಿಯುತ್ತಾಳೆ. ನೀನು ಹೋದರೂ ಖಂಡಿತಾ ವಾಪಸ್ಸು ಬಂದೇ ಬರುತ್ತೀಯ ಎಂದು ಎಲಿಜಬೆತ್‌ಳ ಬಗ್ಗೆ ಕರುಣೆ ತೋರಿಸುತ್ತಲೇ ಬೆಲ್ಲೆ ಡೇವೀಸ್ ಆಕೆಯನ್ನು ಫಿಶ್ ಸ್ಟ್ರೀಟ್‌ಗೆ ಕಳಿಸುತ್ತಾಳೆ.

ಫಿಶ್‌ಸ್ಟ್ರೀಟ್‌ನಲ್ಲಿ ಆಕೆ ಕುದುರೆಗಾಡಿಯಿಂದ ಇಳಿದಾಗ ಹರಕಲು ಬಟ್ಟೆಯ ಮಕ್ಕಳು ಆಕೆಯನ್ನು ಮುತ್ತಿಕೊಳ್ಳುತ್ತಾರೆ. ಆ ಬೀದಿಯ ವಾಸನೆ ಆಕೆಯ ಮುಖಕ್ಕೆ ರಾಚುತ್ತದೆ. ಆ ವಾಸನೆ ಆಕೆಗೆ ಮರೆತು ಹೋಗಿಲ್ಲ. ಆದರೂ ಗಂಟಲು ಸಿಕ್ಕಿ ಹಾಕಿಕೊಂಡ ಭಾವನೆ ಆಕೆಗೆ, ಕಿಟಕಿಯಿಂದ ಹಾದು ಬಂದ ಕಿರು ಬೆಳಕಿನಲ್ಲಿ ಮನೆಯವರನ್ನ, ಮನೆಯನ್ನು ವೀಕ್ಷಿಸುತ್ತಾಳೆ. ಮನೆಯ ನೆಲದ ಮೇಲೆ ಆಕೆಯ ಕೊನೆಯ ತಂಗಿ ಕೊಳಕು ಮೈ, ಕೊಳಕು ಉಡುಗೆಯಲ್ಲಿ ತೆವಳುತ್ತಿರುತ್ತಾಳೆ. ಆಕೆಯ ಅಣ್ಣ ಆಕೆಯ ಭುಜದ ಮೇಲೆ ಕೈ ಇಟ್ಟು ಆಕೆಯನ್ನು ಮುದ್ದಿಸುತ್ತಾನೆ. ಆತನ ಮೈ ಹಳೆಯ ಮಾಂಸ, ಈರುಳ್ಳಿ ವಾಸನೆಯಿಂದ ಕೂಡಿರುವಂತೆ ಆಕೆಗೆ ಭಾಸವಾಗುತ್ತದೆ. ಮತ್ತೊಬ್ಬ ತಂಗಿ ತನ್ನ ಕೈಗಳಿಂದ ಎಲಿಜಬೆತ್‌ಳ ಅಂದವಾದ ಫ್ರಾಕ್‌ನ್ನು ಮುಟ್ಟಿ ನೋಡುತ್ತಾಳೆ. ತನ್ನ ಪರ್ಸಿನಿಂದ ಎಲಿಜಬೆತ್ ಆಕೆಗೆ ಒಂದು ಶಿಲ್ಲಿಂಗ್ ನೀಡಿದಾಗ ಹಣವನ್ನೇ ನೋಡಿರದ ಆ ಹುಡುಗಿ ಬೆಕ್ಕಸ ಬೆರಗಾಗುತ್ತಾಳೆ. ಆ ದುಡ್ಡನ್ನು ಎದೆಗೊತ್ತಿಕೊಂಡು ಆ ಹುಡುಗಿ ದೂರವಾಗಾಗ ಎಲಿಜಬೆತ್‌ಗೆ ಸಂಕಟವಾಗುತ್ತದೆ. ಎಲಿಜಬೆತ್ ತನ್ನ ಅಣ್ಣ ಒಂದು ವರ್ಷದ ನಂತರ ಆಕೆಗೆ ಸಲಹುತ್ತೇನೆ ಎಂದು ಹೇಳಿದ ಮಾತನ್ನು ನೆನಪಿಸುತ್ತಾಳೆ. ಒಂದು ಹುಡುಗಿಯೊಡನೆ ಪ್ರೀತಿಗೆ ಬಿದ್ದ ಆತ ತಾವಿಬ್ಬರೂ '**settle**' ಆದ ಒಡನೆಯೇ ತಂಗಿಗೆ ಕೆಲಸ ಹುಡುಕುವುದಾಗಿ ಹೇಳುತ್ತಾನೆ. ಈ ಅಣ್ಣನ ನಯವಾದ, ಬೆಚ್ಚನೆಯ ಮಾತುಗಳು, ಆತ್ಮೀಯತೆ ಎಲಿಜಬೆತಳ ಹೃದಯದಲ್ಲಿ ಕೊನೆಯವರೆಗೂ ಆತನ ಬಗ್ಗೆ ಮಧುರವಾದ ಭಾವನೆ ಉಳಿಯುವಂತೆ ಮಾಡುತ್ತವೆ. ತಂದೆಯ ಹತ್ತಿರ ಎಲಿಜಬೆತ್ ನಯವಾಗಿಯೇ ಮಾತು ಪ್ರಾರಂಭಿಸುತ್ತಾಳೆ. ನಿನಗೆ ನಿನ್ನ ಬದುಕು ಕಷ್ಟವಾದಾಗ ನಾವೆಲ್ಲರೂ ಜೊತೆಯಲ್ಲಿರುತ್ತೇವೆ ಎಂದು ತಂದೆ ಹೇಳಿದಾಗ ತಿಂದು ಬಿಟ್ಟಿದ್ದ ತಿಂಡಿಯ ತುಣುಕು, ಹರಿದು ಹೋದ ಕಿಟಕಿಯ ಪರದೆಗಳು, ಸುರುಟಿ ಹೋದ ಕುಟುಂಬದವರ ಮುಖಗಳು, ಹಳೆಯ ಹಾಸಿಗೆಯ ಮೇಲೆ ಕೊಳಕಾದ ಚಿಂದಿಗಳು, - ಇವುಗಳ ನೆನಪು, ವಾಸ್ತವ ಆಕೆಗೆ ನುಗ್ಗಿ ಬರುತ್ತದೆ. ಬೆಲ್ಲೆ ಕಳಿಸಿದ್ದಾಳೆಂದು 5 ಬಂಗಾರದ ಸಾವರಿನ್ ಎಲಿಜಬೆತ್ ನೀಡುತ್ತಾಳೆ. ಅದರಲ್ಲಿ ಒಂದು ಸಾವರಿನ್ ತೆಗೆದುಕೊಂಡು ಆಕೆಗೆ ಒಳ್ಳೆಯ ಊಟ ತರುವುದಾಗಿ ಆಕೆಯ ಸಹೋದರಿ ಓಡುತ್ತಾಳೆ.

ಬರುವಾಗ ತಾನು ಫಿಶ್ ಸ್ಟ್ರೀಟ್‌ನಲ್ಲಿ ಉಳಿಯುತ್ತೇನೆ ಎಂದುಕೊಂಡುಬಂದ ಎಲಿಜಬೆತ್‌ಗೆ ಕತ್ತಲಾಗುವ ಮುಂಚೆ ಅಲ್ಲಿಂದ ಓಡಿ ಹೋಗಬೇಕು ಅನಿಸುತ್ತದೆ. ಬೆಲ್ಲೆ ಜೊತೆಗೆ ತನಗೆ ಅಗತ್ಯವಾದ ಕೆಲಸವಿದೆ, ಹಿಂತಿರುಗಲೇ ಬೇಕೆಂದು ಕುದುರೆಗಾಡಿ ಹತ್ತುತ್ತಾಳೆ. ಆಕೆಯ ಮಾತುಗಳನ್ನು ಆಕೆಗೇ ನಂಬಲು ಸಾಧ್ಯವಾಗುವುದಿಲ್ಲ. ವಾಪಸ್ಸು ಬೆಲ್ಲೆ ಡೇವಿಸ್ ಹುಡುಕಿಕೊಂಡು ಹೊರಟಾಗ, ಫಿಶ್ ಸ್ಟ್ರೀಟ್‌ನಿಂದ ತಪ್ಪಿಸಿಕೊಂಡರೆ ಸಾಕು ಎನ್ನುವ ಭಾವ ಅವಳಲ್ಲಿ ಮನೆ ಮಾಡಿಕೊಂಡಿರುತ್ತದೆ. ವಾಪಸ್ಸು ಹೋದಾಗ ಬೆಲ್ಲೆ ಡೇವೀಸ್‌ಗೆ ಆಶ್ಚರ್ಯವಾಗುವುದಿಲ್ಲ. ನನಗೆ ಗೊತ್ತಿತ್ತು ಎನ್ನುತ್ತಾಳೆ. ಆ ರಾತ್ರಿ ಆಕೆ ಉಡುಪು ಬಿಚ್ಚಿದಾಗ ಅದರಲ್ಲಿ ಫಿಶ್ ಸ್ಟ್ರೀಟ್‌ನ ವಾಸನೆ, ತಂದೆ, ತಂಗಿ, ಅಣ್ಣಂದಿರ ಕೊಳೆಯಾದ ಕೈಗಳ ಗುರುತುಗಳು ಕಾಣಿಸುತ್ತವೆ. ಅವರೆಲ್ಲ ಪ್ರಾಮಾಣಿಕರು ಕೊಳಕು, ಬಡತನದಲ್ಲಿ ಬದುಕುತ್ತಾರೆ, ಆದಾಗ್ಯೂ ಪ್ರಾಮಾಣಿಕ ಬಡವರು. ಹಾಸಿಗೆಯಲ್ಲಿ ಮಲಗಿದಾಗ ಆಕೆಗೆ ಅರಿವಾಗುವ ದುಃಖದ ಸಂಗತಿಯೆಂದರೆ ತಾನು ಈಗ ಅವರಲ್ಲಿ ಒಬ್ಬಳಾಗಿ ಉಳಿದಿಲ್ಲ ಎಂಬುದು.

ಬೆಲ್ಲೆ ಡೇವೀಸ್ ಆಕೆಯನ್ನು ಜರೆಮಿ ಎನ್ನುವ ವಕೀಲರೊಬ್ಬರ ಹತ್ತಿರ ಕರೆದೊಯ್ಯುತ್ತಾಳೆ. ತನ್ನ ಬದುಕಲ್ಲಿ ಅತ್ಯಂತ ಮಹತ್ವದ ಇಬ್ಬರು ಪುರುಷರೆಂದರೆ ಅವರು-ಜರೆಮಿ ಹಾಗೂ ನೆಪೋಲಿಯನ್ ಎಂದು ಎಲಿಜಬೆತ್ ಒಂದು ಕಡೆ ಹೇಳುತ್ತಾಳೆ. ಸಣ್ಣ ಸಣ್ಣ ಹುಡುಗರ ಬಗ್ಗೆ ಜರೆಮಿಗೆ ಆಸಕ್ತಿ ಇದೆ, ಆತನೊಬ್ಬ ಸಲಿಂಗರತಿ ಎನ್ನುವ ಗುಮಾನಿಗಳಿದ್ದರೂ, ಎಲಿಜಬೆತ್‌ಳ ಬದುಕಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸುವ ವ್ಯಕ್ತಿ ಈತ. ಈಕೆಯ ಮೊದಲಿನ ಒಪ್ಪಂದ, ಬದುಕು ಪ್ರಾರಂಭವಾಗುವುದು ಕ್ರ್ಯಾನ್ ಕಾರ್‌ಟರ್ ಎಂಬ 50 ವರುಷದ ಮಧ್ಯವಯಸ್ಕ ಆಫೀಸರ್ ಜೊತೆಗೆ. ಎಲಿಜಬೆತ್‌ಗೆ 17 ವರುಷ. ಜೆರೆಮಿ ಆಕೆಗೆ ಒಪ್ಪಂದಗಳನ್ನೆಲ್ಲ ಓದಿ ಹೇಳುತ್ತಾನೆ. ಬೆಲ್ಲೆ ಡೇವೀಸ್ ಆಕೆಯ ಇಲ್ಲಿವರೆಗಿನ ಬದುಕು ನೋಡಿಕೊಂಡಿದ್ದಕ್ಕೋಸ್ಕರ 1000 ಪೌಂಡು ಪಡೆಯುತ್ತಾಳೆ. ಕಲೊನಲ್ ಕಾರ್‌ಟರ್ 1500 ಪೌಂಡ್, ಒಪ್ಪಂದ ಮುಗಿಯುವವರೆಗೆ ವಾರಕ್ಕೆ 7 ಪೌಂಡು, ವಸತಿ ಗೃಹ, ಬಳಕೆ ವಸ್ತುಗಳು, ಸೇವಕರು ಸೌಂದರ್ಯ ವರ್ಧಕ ಹಾಗೂ ಉಡುಗೆಯ ಬಿಲ್ ಕೊಡಲು ಒಪ್ಪಿಕೊಂಡಿರುವುದಾಗಿ ತಿಳಿಸುತ್ತಾನೆ. ಎಲಿಜಬೆತ್ ಹಲವಾರು ಕಾರಣಗಳಿಗಾಗಿ ಕಲೋನಲ್ ಕ್ರ್ಯಾನ್ ಕಾರ್ಟರ್ ಜೊತೆ-ಅವನ demi-monde ಆಗಿರುವುದಕ್ಕೆ ಒಪ್ಪಿಕೊಳ್ಳುತ್ತಾಳೆ.

ಈ ಕಲೊನಲ್ ಕ್ರ್ಯಾನ್ ಕಾರ್ಟರ್ ಎಲಿಜಬೆತ್‌ಳ ಬದುಕಿನಲ್ಲಿ ಕಾಮದ ಬಗ್ಗೆ, ಪ್ರೀತಿಯ ಬಗ್ಗೆ ಹೇಳಿಕೊಡುತ್ತಾನೆ. ಆಕೆಯ ಕನ್ಯತ್ವ ಮುರಿದ ಸಂದರ್ಭದಲ್ಲಿ ಪಶುವಾಗಿ ವರ್ತಿಸಿದಂತೆ, ಬರಿಯ ಗಂಡಸಾಗಿ ಕಂಡಂತೆ ಅನಿಸಿದರೂ

ನಂತರದ ಕ್ಷಣದಲ್ಲಿ ಸಂಗಾತಿಯಂತೆ ಆತ ವರ್ತಿಸಿದ್ದೂ ಕೂಡಾ ಆಕೆಯ ಗಮನಕ್ಕೆ ಬರುತ್ತದೆ. ಆಕೆಯನ್ನು ಸಂತೋಷವಾಗಿಡಲು ಅನೇಕ ಕಡೆ ಸಹಾ ಕಲೋನಲ್ ಕ್ರ್ಯಾನ್ ಕಾರ್ಟರ್ ಕರೆದೊಯ್ಯುತ್ತಾನೆ. ಆತನ ಬೆಚ್ಚನೆಯ ಪ್ರೀತಿಯಲ್ಲಿ ಎಲಿಜಬೆತ್ ತನ್ನ ಮುಜುಗರ, ಸಂಕೋಚ ಕಳೆದುಕೊಂಡು ತಾನೂ ಕೂಡಾ ಲೈಂಗಿಕತೆಯಲ್ಲಿ ಬರಿಯ object ಅಲ್ಲ, assertive ಆಗಿ ಇರಬಲ್ಲೆ ಎಂದು - ಆತ್ಮ ವಿಶ್ವಾಸ ಹೊಂದುತ್ತಾಳೆ.

ಈ ರೀತಿ ಕ್ರ್ಯಾನ್ ಕಾರ್ಟರೆ ಜೊತೆ ಚನ್ನಾಗಿರುವಾಗ ಜರಮಿಯ ಹತ್ತಿರ ಒಂದು ಹುಡುಗಿಗೆ ಆಕೆಯ ಬಟ್ಟೆ, ಆಹಾರ, ಇತರೇ ಖರ್ಚು ಸೇರಿದಂತೆ ವರ್ಷಕ್ಕೆ ಎಷ್ಟು ಖರ್ಚಾಗುತ್ತದೆ ಹಾಗೂ 16 ವರುಷಗಳಿಗೆ ಎಷ್ಟಾಗುತ್ತದೆ ಎಂದು ಕೇಳುತ್ತಾಳೆ. ಯಾವುದಾದರೂ ಅನಾಥ ಮಗುವನ್ನು ಸಾಕುತ್ತಾಳಾ ಎಂದು ಜರಮಿ ಆಶ್ಚರ್ಯಪಡುತ್ತಾನೆ. ಆದರೆ ತನ್ನ ಕುಟುಂಬಕ್ಕೆ ಅಷ್ಟು ಹಣ ಕೊಡುವುದಾಗಿ ನುಡಿಯುತ್ತಾಳೆ. 270 ಪೌಂಡ್ ಹಣ ತೆಗೆದುಕೊಂಡು ಕ್ರ್ಯಾನ್‌ನ ಕುದುರೆಗಾಡಿಗೆ ತೆದುಕೊಂಡು ಫಿಶ್‌ಸ್ಟ್ರೀಟ್‌ಗೆ ಹೋಗುತ್ತಾಳೆ. ಅದೇ ಹಾದಿ, ಅದೇ ರಸ್ತೆ, ಅದೇ ಹರಕಲು ಬಟ್ಟೆಯ ಮಕ್ಕಳು, ಅದೇ ವಾಸನೆ. ಸೀದಾ ಮನೆಯೊಳಕ್ಕೆ ಹೋಗುತ್ತಾಳೆ. ತಂದೆಯ ಹತ್ತಿರ ಹಣದ ಚೀಲ ಇಡುತ್ತಾ ಆತ ತನಗಾಗಿ ಖರ್ಚು ಮಾಡಿದ ಹಣವೆಲ್ಲವನ್ನು ವಾಪಸ್ಸು ಕೊಡುತ್ತಿದ್ದೇನೆಂದು ಹೇಳುತ್ತಾಳೆ. ಇನ್ನು ಆತ ತನಗೆ ಒಬ್ಬ ಮಗಳಿದ್ದಳೆಂಬುದನ್ನೇ ಮರೆತು ಬಿಡಬೇಕು ಎನ್ನುತ್ತಾಳೆ. ಹಾಗೆಯೇ ತಾನೂ ಕೂಡಾ ತನಗೆ ಕುಟುಂಬವಿತ್ತು ಎಂಬುದನ್ನೇ ಮರೆಯುತ್ತೇನೆ ಎನ್ನುತ್ತಾಳೆ. ತಂದೆ ತಾಯಿಯ 'ಪ್ರಾಮಾಣಿಕತೆ'ಯ ಬಗ್ಗೆ, ಅದರೊಳಗಿರುವ 'ಮೋಸದ' ಬಗ್ಗೆ ಕರುಣೆಯಿಲ್ಲದೇ ಮಾತನಾಡುತ್ತಾಳೆ. ತಾನು ಕೊಟ್ಟಿರುವ ಒಂದೊಂದಾಣೆ ಕಾಸು ತನ್ನ ದೇಹವನ್ನು ಮಾರಾಟ ಮಾಡಿದ್ದರಿಂದ ಬಂದದ್ದು ಎನ್ನುತ್ತಾಳೆ. ನಂತರ ತಂದೆ ತನ್ನನ್ನು ಸೂಳೆ ಮಾಡಿದ್ದಕ್ಕಾಗಿ ಬಯ್ಯುತ್ತಾ ಹೋಗುತ್ತಾಳೆ. ತಂದೆ ಕುರ್ಚಿಯ ಮೇಲೆ ಕುಸಿದು ಬೀಳುವವರೆಗೆ ಬಯ್ಯುತ್ತಲೇ ಇರುತ್ತಾಳೆ, ಉಳಿದವರೆಲ್ಲ ಭಯದಿಂದ ಒಬ್ಬರಿಗೊಬ್ಬರು ಅಂಟಿಕೊಂಡು ನಿಂತಿರುತ್ತಾರೆ. ಅವರೆಲ್ಲರನ್ನು ಗಮನಿಸದೇ ಆಕೆ ತಂದೆಯ ಮೇಲೆ ತನಗಿರುವ ಸಿಟ್ಟನ್ನು ತೀರಿಸಿಕೊಳ್ಳುವಂತೆ ಸೇಡಿನಿಂದ ಬಯ್ಯುತ್ತಲೇ ಹೋಗುತ್ತಾಳೆ. ತಂದೆಗೆ ಅರೆ-ಬರೆ ಎಚ್ಚರ. ಮಕ್ಕಳು ಅಳುತ್ತಿರುತ್ತಾರೆ. ತಂದೆಯ ಆತ್ಮವನ್ನು ಕೊಲ್ಲುವ ಕೆಲಸವನ್ನು ತಾನು ಮಾಡಿದೆ ಎಂದು ಎಲಿಜಬೆತ್ ಹೇಳುತ್ತಾಳೆ. ತನ್ನನ್ನು ಅವರು ನೋಡುವ ಪ್ರಯತ್ನ ಮಾಡಬಾರದು, ಹಸಿವಿನಿಂದ ನರಳಿ ಸತ್ತರೂ-ತನ್ನನ್ನು 'ಹಾಗೆ' ಮಾಡಿದ್ದಕ್ಕಾಗಿ ಅವರು ನರಳಿ ಸತ್ತೇ ಸಾಯುತ್ತಾರೆ - ಎಂದು ಹೇಳುತ್ತಾ -ತನ್ನನ್ನು ನೋಡಬಾರದು ಎಂದು ಅಲ್ಲಿಂದ ಹೊರ ನಡೆಯುವ ಎಲಿಜಬೆತ್ ಮತ್ತೆ ಬದುಕಿದ್ದಾಗ ತಂದೆಯನ್ನು ನೋಡುವುದೇ ಇಲ್ಲ.

ಕ್ರ್ಯಾನ್ ಕಾರ್ಟರ್ ಜೊತೆಗಿನ ಲೈಂಗಿಕ ಸಂಬಂಧದಲ್ಲಿ ಆಕೆಗೆ ಏನೋ ಕೊರತೆ ಎನಿಸಿದರೂ, ಒಟ್ಟಾರೆಯಾಗಿ ಒಂದು ರೀತಿಯ ಆನಂದದ ಜೀವನವನ್ನು ಆಕೆ ಅವನೊಡನೆ ಹಂಚಿಕೊಳ್ಳುತ್ತಾಳೆ. ನಂತರದ ದಿನಗಳಲ್ಲಿ ಯೋಚಿಸುವಾಗ ಬಹುಶಃ ಕ್ರ್ಯಾನ್ ಜೊತೆಗಿರುವಾಗ ತನ್ನ ದೇಹ matured ಆಗಿರಲಿಲ್ಲವೇನೋ? ಅಥವಾ ನಿಜವಾದ ಪ್ರೀತಿಯನ್ನು ತಾನು ಶೋಧಿಸಿರಲಿಲ್ಲವೇನೋ ಎನ್ನುವ ಎಲಿಜಬೆತ್ ಕ್ರ್ಯಾನ್ ಕಾರ್ಟರ್ ಆಕೆಯ ಬಗ್ಗೆ ತೋರಿಸಿದ ಕಾಳಜಿ, ಮನುಷ್ಯತ್ವಗಳಿಗಾಗಿ ಕೊನೆಯವರೆಗೂ, ಆಕೆಯ ಇತರ ಸಂಬಂಧಗಳ ಸ್ತರದಲ್ಲಿಯೂ ಅವನನ್ನು ನೆನಪಿಸಿಕೊಳ್ಳುತ್ತಲೇ ಹೋಗುತ್ತಾಳೆ. ಕ್ರ್ಯಾನ್ ಆತನ ಹೆಂಡತಿಯ ಬಗ್ಗೆ ಅವಳೊಡನೆ ಚರ್ಚಿಸಲು ಇಷ್ಟಪಡದಿದ್ದಾಗ, ಇಟ್ಟುಕೊಂಡವಳು ಹೆಂಡತಿಯ ವಿಷಯ ಮಾತನಾಡಬಾರದೇನೋ ಎನ್ನುವ ನೋವಿನ ಗೆರೆಯೊಂದು ಎಲಿಜಬೆತ್‌ಳ ಮನಸ್ಸಿನಲ್ಲಿ ಹಾದು ಹೋಗುತ್ತದೆ. ಆದರೆ ಕ್ರ್ಯಾನ್‌ಗೆ ಆತನ ಹೆಂಡತಿಯ ಬಗ್ಗೆಗಿರುವ ಗೌರವವೂ ಆಕೆಗೆ ಅರ್ಥವಾಗುತ್ತದೆ.

ಕ್ರ್ಯಾನ್ ಕಾರ್ಟರ್ ಜೊತೆಗೆ ತಾನು ಸಂತೋಷದಿಂದ ಇರಬಲ್ಲೆ ಎಂಬ ಭಾವನೆ ಎಲಿಜಬೆತ್‌ಳ ಮನಸ್ಸಿನೊಳಗೆ ಆಳವಾಗಿ ಇಳಿಯುವ ಸಮಯಕ್ಕಾಗಲೇ ಆಘಾತಕರವಾದ ಸಂಗತಿಯೊಂದು ನಡೆಯುತ್ತದೆ. ಕಲೋನಲ್ ಕಾರ್ಟರ್‌ನ ಸೈನಿಕ ಪಡೆಯನ್ನು ಇಂಡಿಯಾಕ್ಕೆ ಕಳಿಸಿರುವುದು ಆತ ಇಂಡಿಯಾ-ಕ್ಕೆ ಬರಬೇಕಾಗುತ್ತದೆ. ನೆಪೋಲಿಯನ್ ಸಹಾಯದಿಂದ ಟಿಪ್ಪು ಸುಲ್ತಾನನ ನೇತೃತ್ವದಲ್ಲಿ ಬ್ರಿಟೀಷರ ವಿರುದ್ಧ ಎದ್ದ ದಂಗೆಯನ್ನು ಅಡಗಿಸಲು ತನ್ನ ಸೈನಿಕ ಪಡೆ ಆಗಲೇ ಭಾರತದಲ್ಲಿ ಇರುವುದರಿಂದ ತಾನು ಕೆಲವೇ ಕಾಲಗಳಲ್ಲಿ ಇಂಡಿಯಾಕ್ಕೆ ತೆರಳಬೇಕು ಎಂದು ಕಾರ್ಟರ್ ಹೇಳಿದಾಗ ಎಲಿಜಬೆತ್‌ಳಿಗೆ ಆಕಾಶವೇ ತಲೆಯ ಮೇಲೆ ಬಿದ್ದ ಹಾಗೆ ಆಗುತ್ತದೆ. ನೆಪೋಲಿಯನ್ ಹೆಸರನ್ನು ಮೊದಲಬಾರಿಗೆ ಕೇಳುವ ಎಲಿಜಬೆತ್ ತನ್ನ ಇಡಿಯ ಬದುಕಿನ ಮೇಲೆ ಆತ ಹಿಡಿತ ಹೊಂದಬಹುದೆಂದು ಎಣಿಸಿದವಳೇ ಅಲ್ಲ. ಎಲಿಜಬೆತ್‌ಳ ಭವಿಷ್ಯದ ಬಗ್ಗೆ ಕಾಳಜಿ ವಹಿಸುವ ಕ್ರ್ಯಾನ್ ಆಕೆಗೆ ಒತ್ತಾಯಿಸಿ ಆತನ ಗೆಳೆಯ ಹೆನ್ರಿ ರುಶ್‌ದನ್ ಬಳಿ ಇರುವಂತೆ ಹೇಳುತ್ತಾನೆ. ಹೆಂಡತಿಯನ್ನು ಕಳೆದುಕೊಂಡ ಆತ ಎಲಿಜಬೆತ್‌ಳನ್ನು ಇಷ್ಟಪಡುವುದಾಗಿಯೂ, ಆಕೆಯ ಭವಿಷ್ಯಕ್ಕೆ ತೊಂದರೆಯಿಲ್ಲವೆಂದು ಹೇಳಿ ಒಪ್ಪಿಸಿ - ಆಕೆಯನ್ನು ಅಗಲಿ ಕ್ರ್ಯಾನ್ ಕಾರ್ಟರ್ ಯುದ್ಧಕ್ಕೆ ತೆರಳುತ್ತಾನೆ. ಹೋಗುವಾಗ ನಿನ್ನನ್ನು ಬೇರೆಯವರ ಜೊತೆ ಕಳಿಸಲು ನನಗಿಷ್ಟವಿಲ್ಲ ಆದರೆ ನೀನು ಭವಿಷ್ಯದ ಭದ್ರತೆಗೆ ನೀನು ಹೆನ್ರಿಯ ಜೊತೆ ಇರಬೇಕು ಎನ್ನುತ್ತಾನೆ. ಎಲಿಜಬೆತ್ ತನ್ನ ಬದುಕಿನ ಪ್ರವಾಸದಲ್ಲಿ ಎಷ್ಟೋ ದೂರ ಸಾಗಿದ ಮೇಲೆ ಮಾತ್ರ ಆಕೆಗೆ ಆತನ ಸಾವಿನ ಸುದ್ದಿ ಇತರದಿಂದ ತಿಳಿಯುತ್ತದೆ. ಆಕೆಯ ಕಣ್ಣಾಲಿಗಳು ತುಂಬ ಬರುತ್ತವೆ. ಕ್ರ್ಯಾನ್ ಕಾರ್ಟರ ಆಕೆಯ

ಹೃದಯದ ಆಳದಲ್ಲಿ ಬಿಟ್ಟು ಹೋದ ಬೆಚ್ಚನೆಯ ಭಾವನೆಯೊಂದು ಆಕೆಯ ಹೃದಯದಲ್ಲಿ ಸದಾ ಹಸಿರಾಗಿರುತ್ತದೆ.

ಕ್ಯಾನ್ ಕಾರ್ಟ್ನರ್ ಇಷ್ಟದಂತೆ ಹೆನ್ರಿಯ ಜೊತೆ ಒಪ್ಪಂದ ಮಾಡಿಕೊಳ್ಳಲು ಎಲಿಜಬೆತ್ ಜರಮಿ-ವಕೀಲನ ನೆರವು ಕೋರುತ್ತಾಳೆ. ಲಾಯರ್ ಒಪ್ಪಂದ ಮುಗಿಸಿದ ಮೇಲೆ ಹೆನ್ರಿಯ ಜೊತೆ ಎಲಿಜಬೆತ್ ಬಾಳಲು ಪ್ರಾರಂಭಿಸುತ್ತಾಳೆ. ಮೇ-1978ರಲ್ಲಿ ಆಕೆ ಹೆನ್ರಿಯ ಜೊತೆಗೆ ಬದುಕಲು ಪ್ರಾರಂಭಿಸಿದಾಗ ಆಕೆಗೆ 20 ವರ್ಷ, ಆತನಿಗೆ 57 ವರ್ಷ ಲೈಂಗಿಕತೆಯಲ್ಲಿ ತಾನು ಸುಖಿಸಿದ್ದು ಏನೂ ಇಲ್ಲ ಎನ್ನುವ ಎಲಿಜಬೆತ್ ಆತನ ಮುದಿ ಚರ್ಮದ ಬಗ್ಗೆ, ಆತನ ಅಸಹಾಯಕತೆಯ ಬಗ್ಗೆ ಅಸಹ್ಯಪಟ್ಟ ಕ್ಷಣಗಳೂ ಇವೆ ಎನ್ನುತ್ತಾಳೆ. ತಾನು ಆತನೊಡನೆ ಬಹಳ ದಿನ ಬದುಕಲಾರೆನೇನೋ ಎಂದು ಆಕೆಗೇ ಅನಿಸತೊಡಗುತ್ತದೆ.

ಹೆನ್ರಿ ಒಮ್ಮೆ ಆಕೆಯೊಡನೆ ಮನಬಿಚ್ಚಿ ಮಾತನಾಡುತ್ತಾನೆ. ಕ್ಯಾನ್ ಕಾರ್ಟ್ನರ ತರಹ ದೇಹದ ಬಯಕೆಗಳನ್ನು ತೀರಿಸಲು ತಾನು ಅಶಕ್ತ ಎಂದೇ ಪ್ರಾರಂಭಿಸುವ ಈತ ಆಕೆಗೆ ಮನಸ್ಸಿನ ಸಂತೋಷಕ್ಕೆ ಬೇಕಾಗುವ ಜ್ಞಾನವನ್ನು ಕಲಿಸುವುದಾಗಿ ತಿಳಿಸುತ್ತಾನೆ. ಹೆಣ್ಣು ಮಕ್ಕಳು ಕಲಿಯಬಾರದು ಎಂಬ ವಿಚಾರಗಳನ್ನು, ಯೋಚನೆಗಳನ್ನು, ಓದುವುದನ್ನು, ಜ್ಞಾನವನ್ನು ತಾನು ಕಲಿಸುತ್ತೇನೆ ಎಂದು ಹೇಳುವ ಹೆನ್ರಿ ಆತನ ಮಾತಿಗೆ ಬದ್ಧವಾಗಿ ನಿಲ್ಲುತ್ತಾನೆ. ನಿತ್ಯ ರಾತ್ರಿ ಆಕೆ ತನ್ನ ಪಕ್ಕಗಲ್ಲಿ ಬೆತ್ತಲೆಯಾಗಿ ಮಲಗಬೇಕು ಎನ್ನುವ ಆತ, ವಾರಕ್ಕೆ ಮೂರು ಬಾರಿ ಮಾತ್ರ ಆಕೆಯನ್ನು ಸಂಭೋಗಿಸುವುದಾಗಿ ಹೇಳುತ್ತಾನೆ. ತಮ್ಮಿಬ್ಬರ ಸಂಬಂಧದಲ್ಲಿ ಎಲ್ಲವೂ ಸ್ಪಷ್ಟವಾಗಿರಬೇಕು ಎನ್ನುವ ಹೆನ್ರಿ ಒಂದು ರೀತಿಯ ಸಮಾನತೆಯ ನೆಲೆಯ ಮೇಲೆ ತನ್ನ ಹತ್ತಿರ ಮಾತನಾಡಿದನೇನೋ ಎಂದು ಎಲಿಜಬೆತ್‌ಳಿಗೆ ಭಾಸವಾಗುತ್ತದೆ. ಆದಕ್ಕಾಗಿ ಆಕೆ ಕೃತಜ್ಞತೆ ವ್ಯಕ್ತಪಡಿಸಿ ಕ್ಯಾನ್ ಬಗ್ಗೆ ತನಗಿದ್ದ ಭಾವನೆಗಳನ್ನು ಮುಕ್ತವಾಗಿ ಅವನೊಡನೆ ಹಂಚಿಕೊಳ್ಳುತ್ತಾಳೆ. ಅವನು ಹೇಳಿದ ಹಾಗೆ ಅವನೊಡನೆ ಇರಲು ಪ್ರಯತ್ನಿಸುವುದಾಗಿ ಹೇಳುತ್ತಾಳೆ. ಹೀಗೆ ಹೆನ್ರಿಯ ಜೊತೆ ಬದುಕಲು ಪ್ರಾರಂಭಿಸಿದ ಮೇಲೆ ಎಲಿಜಬೆತ್ ಸಂಗೀತ ಕಲಿಯಲು ಒಬ್ಬ ಗುರುವನ್ನು ನೇಮಿಸಿಕೊಳ್ಳುತ್ತಾಳೆ, ಹೆನ್ರಿಯ ಸಹಾಯದಿಂದ ಇಂಗ್ಲಿಷ ಸಾಹಿತ್ಯ ಓದಲು ಪ್ರಾರಂಭಿಸುತ್ತಾಳೆ, ಲ್ಯಾಟಿನ ಕಲಿಕೆ ಪ್ರಾರಂಭವಾಗುತ್ತದೆ, ಹೀಗೆ ಹೆನ್ರಿಯ ನೆರಳಿನಲ್ಲಿ ಎಲಿಜಬೆತ್ ತನಗೆ ಎಟುಕದಿದ್ದ ಜ್ಞಾನದ ಶಾಖೆಗಳತ್ತ ಕಣ್ಣು ಹಾಯಿಸುವುದು ಆಕೆಯ ಪ್ರಬುದ್ಧತೆಯನ್ನು ಹೆಚ್ಚಿಸುತ್ತದೆ. ಹೆನ್ರಿ ವಾರಕ್ಕೆ ಒಂದು ಬಾರಿ ಅಧಿಕಾರಿಗಳಿಗೋಸ್ಕರ 'ಓಪನ್ ಹೌಸ್' ನಡೆಸಿ, ಅನೇಕರನ್ನು ಬರಮಾಡಿಕೊಳ್ಳುತ್ತಿರುತ್ತಾನೆ. ಕುಡಿತ, ಡ್ಯಾನ್ಸ್, ಚರ್ಚೆ ಇಂತಹ ಕಾರ್ಯಕ್ರಮಗಳಲ್ಲಿ ಎಲಿಜಬೆತ್-ಬರುವವರ ಬೇಕು, ಬೇಡಗಳನ್ನು ಗಮನಿಸುವ ಕೆಲಸವಷ್ಟೇ, ಮಾಡುತ್ತಿರುತ್ತಾಳೆ. ಇಲ್ಲಿಗೆ ಬರುವವರಲ್ಲಿ ಒಬ್ಬ ಯಾವಾಗಲೂ ತನ್ನನ್ನೇ ಗಮನಿಸುವುದನ್ನು ಎಲಿಜಬೆತ್ ಗಮನಿಸುತ್ತಾಳೆ. ಬೇಡವೆಂದರೂ ಸುಂದರ ಮೈ ಕಟ್ಟಿನ ಯುವಕನ ಕಡೆ ಆಕೆಯ ಕಣ್ಣುಗಳೂ ತಿರುಗತೊಡಗಿದಾಗ ಅವನ ಬಗ್ಗೆ ಕುತೂಹಲ ಉಂಟಾಗುತ್ತದೆ. ಒಂದು ಸಂದರ್ಭದಲ್ಲಿ ಆತ ತಾನು ಡೇವೀಸ್ ಪ್ರೆಸ್ ಕೋಟ್, ಕ್ಯಾಪ್ಟನ್ ಎಂದೂ ಕೂಡಾ ಆಕೆಗೆ ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾನೆ. ಲಾ ಬೆಲ್ಲೆ ಎಲಿಜಬತ್‌ಳ ಬಗ್ಗೆ ಕೇಳದವರಾರು ಎಂದು ಹೇಳಿ ಆಕೆಯನ್ನು ದಂಗು ಬಡಿಸುತ್ತಾನೆ. ಗೊಂದಲಕ್ಕೊಳಗಾಗುವ ಎಲಿಜಬೆತ್ ತಾನು ಹೆನ್ರಿಯ ಮನೆ ನೋಡಿಕೊಳ್ಳುವವಳು ಎಂದು ಆತನಿಂದ ಆ ಕ್ಷಣದಲ್ಲಿ ದೂರ ಸರಿದರೂ, ಆ ಯುವಕನ ಚಿತ್ರ ಆಕೆಯ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಲ್ಲುತ್ತದೆ.

ಹೆನ್ರಿಯ ಮನೆ ಮೌಂಟ್ ಮೆನನ್‌ನಲ್ಲಿ ಆಕೆಯ ದಾಸಿಯಾಗಿ ಬರುವ ಮಾರ್ಥಾ ಎನ್ನುವ ಹೆಂಗಸಿನ ಜೊತೆ ಎಲಿಜಬೆತ್‌ಗೆ ನಿಕಟ ಸಂಬಂಧ ಬೆಳೆಯುತ್ತದೆ. ಆಕೆ ಎಲಿಜಬೆತ್‌ಳ ಸುಖ ದುಃಖದಲ್ಲಿ ಭಾಗಿಯಾಗಿರುವುದಾಗಿ ಹೇಳಿ, ನಂತರದಲ್ಲಿ ಕೊನೆಯ ಕ್ಷಣದವರೆಗೆ ಎಲಿಜಬೆತ್‌ಳ ಜೊತೆಗೇ ಇರುತ್ತಾಳೆ. ಈಕೆ ಹೆನ್ರಿಯ ಜೊತೆಗಿರುವಾಗಲೇ ಈಕೆಯ ಅಪ್ಪ ಸತ್ತು ಹೋಗುತ್ತಾನೆ. ಆತನ ಶವವನ್ನು ನೋಡಿದಾಗ ಎಲಿಜಬೆತ್‌ಗೆ ದುಃಖವಾಗುತ್ತದೆ. 50 ರ ವಯಸ್ಸಿನಲ್ಲಿ ಸತ್ತ ಅಪ್ಪನ ಬದುಕು ಬಡತನದಲ್ಲಿ ಕ್ಷುಲ್ಲಕವಾಗಿ ಕಳೆದು ಹೋಗಿತ್ತು. ಜೊತೆಗೆ ತಾನು ಆತನನ್ನು ಅವಮಾನಿಸಿದ್ದು ತಪ್ಪಾಯಿತೇನೋ ಎಂದು ಆಕೆಯ ಮನಸ್ಸಿಗೆ ಭಾಸವಾಗುತ್ತದೆ. ಕ್ಷಮೆ ಕೇಳುವಷ್ಟರಲ್ಲಿ ಅಪ್ಪ ಸತ್ತೇ ಹೋಗಿದ್ದ. ನಂತರದ ದಿನಗಳಲ್ಲಿ ಆಕೆಯ ಅಣ್ಣ ಜಾಕ್ ಮನೆಯ ಜವಾಬ್ದಾರಿ ತೆಗೆದುಕೊಳ್ಳುತ್ತಾನೆ. ಜಾಕ್ 35 ರ ವಯಸ್ಸಿನಲ್ಲಿ ಆ್ಯಕ್ಸಿಡೆಂಟ್‌ನಲ್ಲಿ ಸತ್ತು ಹೋಗುತ್ತಾನೆ. ಆತನ ಮಗನ ವಿದ್ಯಾಭ್ಯಾಸಕ್ಕೆ ಎಲಿಜಬೆತ್ ಹಣ ಕೊಡುತ್ತಾಳೆ. 13 ವರ್ಷದವಳಿರುವಾಗ ಆಕೆಯ ತಂಗಿ ಡಿಫ್ತೀರಿಯ ಆಗಿ ಸತ್ತು ಹೋಗುತ್ತಾಳೆ. ಆಕೆಯ ಮತ್ತೊಬ್ಬ ತಂಗಿ ಅನೇಕ ಚಿಕ್ಕ ಮಕ್ಕಳಿರುವ ಒಬ್ಬನನ್ನು ಮದುವೆಯಾಗುತ್ತಾಳೆ. ಹೀಗೆ ಎಲಿಜಬತ್‌ಳ ಕುಟುಂಬದ ಸಂಪರ್ಕ, ನೆನಪುಗಳು ಸದಸ್ಯರು ಲಂಡನ್ನಿನ ಆಕೆಯ ಬದುಕಿನಲ್ಲಿ, ಲಂಡನ್ನಿನ ನೂರಾರು ಹೆಸರಿಲ್ಲದ, ಅಪರಿಚಿತ ಬಡವರ ಹಾಗೆ ಕಳೆದು ಹೋಗುತ್ತಾರೆ. ಹೆನ್ರಿಯ ಮಗ ಜಾನ್ ರಶದನ್ ಫ್ರೆಂಚರ ಜೊತೆಗಿನ ಕಾಳಗದಲ್ಲಿ ಮಡಿದ ಸುದ್ದಿ ಬಂದಾಗ ಹೆನ್ರಿ-ದುಃಖವನ್ನು ತಡೆದುಕೊಳ್ಳಲಾರದೇ ಕೊನೆಯುಸಿರೆಳೆಯುತ್ತಾನೆ. ಕೊನೆಯುಸಿರೆಳೆಯುವ ಮೊದಲು ತನ್ನ ಮಗನ ಹೆಂಡತಿಗೆಂದು ಇಟ್ಟುಕೊಂಡಿದ್ದ ಒಡವೆಗಳನ್ನೆಲ್ಲ ಎಲಿಜಬೆತ್‌ಗೆ ಕೊಟ್ಟು ಸಾಯುತ್ತಾನೆ.

ಹೀಗೆ ಮತ್ತೆ ಒಂಟಿಯಾಗುವ ಎಲಿಜಬೆತ್‌ಳ ಭವಿಷ್ಯಕ್ಕಾಗಿ ಜರಮಿ ಆಕೆಯದೇ ಒಂದು ಮನೆ ಕೊಡಿಸುವ ಪ್ರಯತ್ನದಲ್ಲಿದ್ದಾಗ ಜಾನ್ ಚಾರ್‌ಟರೀಸ್ ಆಕೆಯನ್ನು demi monde *ಯನ್ನಾಗಿ ಮಾಡಿಕೊಳ್ಳುವುದಾಗಿ ಲಾಯರ್ ಜರಮಿ ಹತ್ತಿರ ಹೇಳುತ್ತಾನೆ. 40 ವರ್ಷದ ಜಾನ್ ಚಾರ್‌ಟರೀಸ್‌ನ ಸ್ಯಾಡಿಸ್ಟ್ ವರ್ತನೆಯ ಬಗ್ಗೆ, ವಿಕೃತ ಕಾಮದ ಬಗ್ಗೆ ಹಲವಾರು ಗಾಳಿಸುದ್ದಿಗಳು ಇದ್ದುದರಿಂದ ಜರಮಿ ಹಾಗೂ ಎಲಿಜಬತ್ ಇಬ್ಬರೂ ಒಂದು ಕ್ಷಣ ಹಿಂಜರಿಯುತ್ತಾರೆ. ಎಲಿಜಬತ್‌ಗೆ ಬೇರೆ ದಾರಿಯಿಲ್ಲದ ಕಾರಣ ಹಾಗೂ ಜಾನ್ ಬಾರ್‌ಟರೀಸ್ 2000 ಪೌಂಡ್ ಕೊಡುವ ಸಲಹೆ ಇಟ್ಟಿದ್ದರಿಂದ ಈ ಸಂಬಂಧ ಒಪ್ಪಿಕೊಳ್ಳುವುದಾಗಿ ಹೇಳುತ್ತಾಳೆ. ವಕೀಲ ಜರಮಿ ಆಕೆಯನ್ನು ರಕ್ಷಿಸಲು ತುಂಬಾ ಯೋಚನೆ ಮಾಡಿ ಒಪ್ಪಂದಗಳನ್ನು ರೂಪಿಸಿಕೊಡುತ್ತಾನೆ. ಅದರಲ್ಲಿ 'ವೈಯಕ್ತಿಕ ತೊಂದರೆ' ಯ ಕ್ಲಾಜ್ ಒಂದನ್ನು ಸೇರಿಸುತ್ತಾನೆ. ಅದು ಹೊಡೆಯುವುದಕ್ಕೆ ಹಾಗೂ ಯಾವುದೇ ರೋಗಕ್ಕೆ ವಿರುದ್ಧವಾದುದು. ಆಕೆ ಅಲ್ಲಿರುವಾಗ ಇನ್ನೊಬ್ಬ 'ಸೂಳೆ' - ಆ ಮನೆಗೆ ಕರೆತರಬಾರದು ಎನ್ನುವ ಕ್ಲಾಜ್ ಒಂದು ಸೇರಿಸುತ್ತಾನೆ. ಜೊತೆಗೆ ಇನ್ನೊಬ್ಬರೆದುರಿಗೆ ಎಲಿಜಬೆತ್‌ಳ ಸೇವೆಯನ್ನು ಬೇಡದಿರುವುದು. ಜೊತೆಗೆ ಕೇವಲ ಆರು ತಿಂಗಳು ಆವನೊಡನೆ ಇರುವ ಒಪ್ಪಂದವನ್ನು ಮಾಡಿಕೊಡುತ್ತಾನೆ. ಜರಮಿಯ ಬುದ್ಧಿವಂತಿಕೆ ಹಾಗೂ ಕಾಳಜಿಗೆ ಎಲಿಜಬೆತ್ ತಲೆದೂಗುತ್ತಾಳೆ. ಜಾನ್ ಚಾರ್‌ಟರೀಸ್ ಯಾವುದಾದರೂ ಒಪ್ಪಂದ ಮುರಿದು ಎಲಿಜಬೆತ್‌ಗೆ ಹಾನಿಯಾದಲ್ಲಿ ಆಕೆ ತನ್ನ ಬಳಿಗೆ ಬರಬೇಕೆಂದು ಜರಮಿ ಹೇಳುತ್ತಾನೆ. ಮಾರ್ಥಾಳ ಬಗ್ಗೆ ಒಪ್ಪಂದದ ಪತ್ರದಲ್ಲಿ ಬರೆಯದ ಕಾರಣ, ಎಲಿಜಬೆತ್‌ಳ ಸ್ವಂತ ಮನೆ ತಯಾರಾಗುವವರೆಗೆ ಮಾರ್ಥಾ ಜರಮಿಯ ಬಳಿ ಇರುವುದು, ನಂತರ ಎಲಿಜಬೆತ್‌ಳ ಸ್ವಂತ ಮನೆಗೆ ಹೋಗುವುದೆಂದು ತೀರ್ಮಾನವಾಗುತ್ತದೆ.*

ಜಾನ್ ಚಾರಟರೀಸ್‌ನ ಜೊತೆಗೆ, ಅವನ ವಿಕೃತ ಕಾಮದ ಜೊತೆಗೆ ಎಲಿಜಬೆತ್ ಬದುಕಲು ಪ್ರಾರಂಭಿಸುತ್ತಾಳೆ. ತನ್ನ ವಿಕೃತತೆಯ ಮೂಲಕ ಆಕೆಯ ಸ್ವಾಭಿಮಾನ, ಗೌರವಗಳ ಮೇಲೆ ಪೆಟ್ಟು ಹಾಕಲು ಪ್ರಯತ್ನಿಸುತ್ತಾನೆ. ಆತ ತನ್ನನ್ನು, ತನ್ನ ದೇಹವನ್ನು ನಾಶ ಮಾಡಲು ಪ್ರಯತ್ನಿಸಿ, ರಂಜನೆ ಪಡೆಯುವಾಗಲೆಲ್ಲಾ, ಎಲಿಜಬೆತ್ ಸಂಯಮದಿಂದ ವರ್ತಿಸುತ್ತಾಳೆ. ಮುಖದಲ್ಲಿ ಏನೂ ಭಾವ ವ್ಯಕ್ತಪಡಿಸದೇ ಆತ ಹೇಳಿದಂತೆ ಕೇಳಲು ಪ್ರಯತ್ನಿಸುತ್ತಾಳೆ. ಆತ ಲೈಂಗಿಕ ಸುಖ ಪಡೆದು ಹೊರಗೆ ನಡೆದಾಗ ಆಕೆಯ ದೇಹ, ಮನಸ್ಸಿಗೆ ಕಾಯಿಲೆ ಬಂದಂತೆ ತಣ್ಣಗಾಗಿ, ವಾಂತಿ ಬಂದಂತೆ ಭಾಸವಾಗಿ ಇಡೀ ಮೈ ನಡಗುತ್ತದೆ. ಜಾನ್ ಚಾರಟರೀಸನ ಲೈಂಗಿಕ ವಿಕೃತತೆಯ ಕ್ರೂರತನ ಆಕೆಗೆ ಭೀಕರವಾಗಿ ಕಾಣುತ್ತದೆ. ಕ್ರ್ಯಾನ್ ಕಾರ್ಟರ್ ಜೊತೆಗೆ ಲೈಂಗಿಕ ಕ್ರಿಯೆಗಳು, ಸಂತಸದ್ದಲ್ಲದಿದ್ದರೂ, ಸಾಹಸಮಹವಾಗಿಯಾದರೂ ಕಾಣಿಸುತ್ತಿತ್ತು. ಆದರೆ ಜಾನ್ ಚಾರ್‌ಟರೀಸನ ಸಂಬಂಧದಲ್ಲಿ ಲೈಂಗಿಕತೆಗೆ ಎಂತಹ ಕೊಳಕು ಮುಖ ಇದೆ ಎಂಬುದನ್ನು ಎಲಿಜಬೆತ್ ಅರ್ಥ ಮಾಡಿಕೊಂಡು ನಡುಗುತ್ತಾಳೆ. ಆತನ ಆಸೆಯಲ್ಲಿ ಇನ್ನೊಬ್ಬರನ್ನು ಪತನಗೊಳಿಸುವ ಇಚ್ಛೆ ಎದ್ದು ಕಾಣುತ್ತಿತ್ತು. ಅವನ ಜೊತೆಗಿನ ಸಂಬಂಧ ಬೆಕ್ಕು- ಇಲಿಯ ಆಟ ಎಂದು ಕಂಡುಕೊಳ್ಳುವ ಎಲಿಜಬೆತ್ ತಾನು ಹೇಗೆ ಆತನ ಜೊತೆ ಪ್ರತಿಕ್ರಿಯೆ ತೋರಿಸುವುದು ಎಂದು ಆಲೋಚಿಸಿ ಹೆಜ್ಜೆ ಇಡುತ್ತಾಳೆ. ಒಂದು ವರ್ಷಕ್ಕಾಗುವಷ್ಟು ಬಟ್ಟೆ-ಬರೆ ತೆಗೆದುಕೊಂಡು ಬಿಲ್ಲನ್ನು ಜಾನ್ ಚಾರ್‌ಟರೀಸ್ ಬಳಿ ಕೊಡಿಸುತ್ತಾಳೆ. ಅವನು ಆಕೆಯನ್ನು ಕರೆದುಕೊಂಡು ಹೊರಗೆ ಹೋದಾಗ ಆಕೆಯನ್ನು ಎಲ್ಲಿಯೋ ಒಂಟಿಯಾಗಿ ನಿಲ್ಲುವಂತೆ ಮಾಡಿದರೆ ಆಕೆ ಅಲ್ಲಿರುವವರ ಜೊತೆ ಹೊಂದಿಕೊಂಡು ತನ್ನನ್ನು ತಾನೇ ಖುಷಿಯಾಗಿರುವಂತೆ ನೋಡಿಕೊಳ್ಳುತ್ತಾಳೆ. ಹಾಗೆ ಆಕೆ ಖುಷಿಯಾಗಿದ್ದರೆ ಆತ ಸಹಿಸಲಾರ, ಎಲಿಜಬೆತ್ ಜಾನ್ ಚಾರ್‌ಟರೀಸನ ದೌರ್ಬಲ್ಯಗಳನ್ನು ಅಭ್ಯಾಸ ಮಾಡುತ್ತಾ ಹೋಗುತ್ತಾಳೆ. ಮೊದಲನೆಯದಾಗಿ ಆತನ ದೌಹಿಕ ದೌರ್ಬಲ್ಯ, ಹೆದರಿಕೆ, ಹಿಂಜರಿಕೆ ಆಕೆಗೆ ಅರ್ಥವಾದಾಗ ಅದನ್ನೇ ಬಳಸಿಕೊಳ್ಳಲು ಯೋಚಿಸುತ್ತಾಳೆ. ಅವನು ದುರ್ಬಲ ವೀರ್ಯತ್ವ ಹೊಂದಿರುವ ಮನುಷ್ಯ, ಹಾಗೂ ಅರೆ ಹುಚ್ಚ ಎಂಬುದೂ ಆಕೆಗೆ ಅರ್ಥವಾಗುತ್ತದೆ. ಆಕೆಗೆ ಕೋಪ ಅಥವಾ ಅಸಹನೆ, ಅಸಹ್ಯ ಭರಿಸಲು ಸಾಧ್ಯವಾಗದಿದ್ದಾಗ ಜಾನ್ ಚಾರ್‌ಟರೀಸ್ ಬೇರೆ ರೀತಿಯಲ್ಲಿ ಆಕೆಗೆ ಹಿಂಸೆ ಕೊಡಲು ಪ್ರಯತ್ನಿಸುತ್ತಾನೆ. ಯಾವುದ್ಯಾವುದೋ ಸಮಯದಲ್ಲಿ ಲೈಂಗಿಕ ಬೇಡಿಕೆಗಳನ್ನು ಇಡಲು ಪ್ರಾರಂಭಿಸುತ್ತಾನೆ. ಯಾವುದ್ಯಾವುದೋ ಸಮಯದಲ್ಲಿ ಬಟ್ಟೆ ಕಳಚಿ ನಿಲ್ಲುವಂತೆ ಆದೇಶಿಸುತ್ತಾನೆ. ಹಾಗೆಯೇ ಘಂಟೆಗಟ್ಟಲೆ ಆಕೆ ನಿಲ್ಲಬೇಕಾಗುತ್ತದೆ. ಹೀಗೇ ಚಿತ್ರ ವಿಚಿತ್ರವಾಗಿ ಆಕೆಗೆ ಹಿಂಸೆ ಕೊಡಲು ಪ್ರಯತ್ನಿಸಿದಾಗ ಹೃದಯದ ಒಳಗೆ ರೋಸಿಹೋದರೂ ಮುಖದಲ್ಲಿ ಶಾಂತಭಾವದಿಂದ ಇರಲು ಆಕೆ ಪ್ರಯತ್ನಿಸುತ್ತಾಳೆ. 'ನೀನು ನನ್ನ ನಾಶಮಾಡಲಾರೆ ಎನ್ನುವ ಭಾವ ತೋರಿಸಲು ಪ್ರಯತ್ನಿಸುತ್ತಾಳೆ. ಈ ನಡುವೆ ಜರಮಿ ಆಕೆಗೋಸ್ಕರ ಒಂದು ಮನೆಯನ್ನು ಕೊಂಡುಕೊಡುತ್ತಾನೆ. ಎಲಿಜಬೆತ್‌ಗೆ ಒಂದು ರೀತಿಯ ಸಮಾಧಾನ.

ಒಂದು ದಿನ ಜಾನ್ ಆಕೆಗೆ ಸಿಲ್ಕ ಡ್ರೆಸ್ ಹಾಕಿಕೊಂಡು ಸಿದ್ಧಳಾಗಲು ತಿಳಿಸುತ್ತಾನೆ. ಆಕೆಗೆ ಆಭರಣಗಳನ್ನೂ ಕೊಡುತ್ತಾನೆ. ಆಕೆಯನ್ನು ಹೊರಗೆ ಕರೆದುಕೊಂಡು ಹೋಗುವ ಬದಲು ಡ್ರಾಯಿಂಗ್ ರೂಂಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಅವನ ಹೆಂಡತಿಯನ್ನು ನೋಡಿ ಎಲಿಜಬೆತ್‌ಗೆ ಬೆಚ್ಚುವಂತೆ

ಆಗುತ್ತದೆ. ಯುವತಿಯಾದರೂ - ನಲುಗಿದ ಹಾಗೆ ಕಾಣುವ ಆಕೆಯನ್ನು ನೋಡಿ ಎಲಿಜಬೆತ್‌ಗೆ ಗಲಿಬಿಲಿಯಾಗುತ್ತದೆ. 'ನೀವು ಇಲ್ಲಿರುವುದು ನನಗೆ ಗೊತ್ತಿಲ್ಲ' ಎಂದು ಎಲಿಜಬೆತ್ ತೊದಲುತ್ತಾಳೆ. ಅವನ ಹೆಂಡತಿಗೆ ಸಿಟ್ಟು ಬರುವುದು ಎಲಿಜಬೆತ್‌ಳ ಬಗ್ಗೆ ಅಲ್ಲ. ಜಾನ್ ಬಗ್ಗೆ, ಆಕೆ ಅವನಿಗೆ ಬಯ್ಯುತ್ತಾಳೆ. ಎಲ್ಲದಕ್ಕೂ ಒಂದು ಮಿತಿ ಇದೆ ಎಂದು ಕೂಗುತ್ತಾಳೆ. ತಾನು ಅಲ್ಲಿಂದ ಹೊರಟು ಹೋಗುವುದಾಗಿ ಹೇಳುತ್ತಾಳೆ. ಎಲಿಜಬೆತ್ 'ಹೋಗಬೇಕಾದವಳು ನೀನಲ್ಲ ನಾನು' ಎಂದು ಅಲ್ಲಿಂದ ಹೊರಡುತ್ತಾಳೆ. ಜಾನ್ ಆಕೆಯ ಭುಜವನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾನೆ. 'ನಾನು ಇಲ್ಲಿ ಮಾಸ್ಟರ್' ಎನ್ನುತ್ತಾನೆ. 'ನಾವು ಟೀ ಕುಡಿದೇ ಹೊರಡುವುದು' ಎಂದು ಗತ್ತಿನಿಂದ ನುಡಿಯುತ್ತಾನೆ. ತನಗೆ ಖರ್ಚು ಹೆಚ್ಚಾಗುತ್ತಿರುವುದರಿಂದ ತಮ್ಮ ಮಗಳು ರೋಸಾಮುಂಡೆ ಕುದುರೆ ಸವಾರಿಗೆ ಹೋಗುವುದು ಬೇಡ ಎನ್ನುತ್ತಾನೆ. ಅವನ ಹೆಂಡತಿ ಕುರ್ಚಿಯಲ್ಲಿ ಕುಸಿದು ತನ್ನ ಮುಖ ಮುಚ್ಚಿಕೊಳ್ಳುತ್ತಾಳೆ. ಎಲಿಜಬೆತ್‌ಳನ್ನು ಆಕೆ ಮಾತಾಡಿಸಲೇ ಬೇಕೆಂದು ಅವನು ಒತ್ತಾಯಿಸಿ, ಹಿಂಸೆ ಮಾಡುತ್ತಾನೆ. ಎಲಿಜಬೆತ್‌ಗೆ ಅಲ್ಲಿಂದ ಹೊರಟರೆ ಸಾಕು ಎನಿಸತೊಡಗುತ್ತದೆ.

ಮದುವೆ, ಕುಟುಂಬದ ಬಗ್ಗೆ ಭದ್ರತೆಯ ಬಗ್ಗೆ ಯೋಚಿಸಿದ್ದ, ಕನಸು ಕಂಡಿದ್ದ ಎಲಿಜಬೆತ್ ಕುರ್ಚಿಯಲ್ಲಿ ಕುಸಿದು ಕುಳಿತ ಜಾನ್ ಹೆಂಡತಿಯನ್ನು ದಿಟ್ಟಿಸುತ್ತಾಳೆ. ದೇಹ, ಮನಸ್ಸು ಎರಡೂ ಕುಗ್ಗಿ ಹೋಗಿ ಆಕೆ ಕುಸಿದಿದ್ದಳು. ಇದ್ಯಾವ ರೀತಿಯ ಭಯ ಆತಂಕದ ಭದ್ರತೆ ಎಂದು ಎಲಿಜಬೆತ್‌ಳಿಗೆ ಪ್ರಶ್ನೆಯಾಗಿ ಕಾಡತೊಡಗುತ್ತದೆ. ಅವನ ಹೆಂಡತಿಯ ಮುಂದೆಯೇ ಜಾನ್ ಎಲಿಜಬೆತ್‌ಳ ಜೊತೆಗೆ ಚಕ್ಕಂದವಾಡಲು ಪ್ರಯತ್ನಿಸಿದಾಗ ಎಲಿಜಬತ್‌ಳಿಗೆ ಕೋಪ ಬರುತ್ತದೆ. ಅಲ್ಲಿಂದ ಧಿಡೀರ್ ಎಂದು ಹೊರಡುವ ಆತನ ಹೆಂಡತಿ ಎಲಿಜಬೆತ್‌ಳ ಹತ್ತಿರ ಬಂದು ಆಕೆ ತೊಟ್ಟಿರುವ ಒಡವೆಯಲ್ಲಾ ಆಕೆಯದೇ ಎಂದು ಕೇಳುತ್ತಾಳೆ. ಎಲಿಜಬತ್ 'ಅಲ್ಲ, ಆತ ತಾನು ತೊಟ್ಟುಕೊಳ್ಳಬೇಕೆಂದು ಆದೇಶಿಸಿದ' ಎಂದು ನುಡಿಯುತ್ತಾಳೆ. 'ಆ ವಡವೆ ತನ್ನ ತಾಯಿಯದು' ಎಂದು ಆಕೆ ನುಡಿದು ಹೊರ ನಡೆದಾಗ ಎಲಿಜಬತ್‌ಗೆ ಬೇಸರವಾಗುತ್ತದೆ. ನಂತರದ ದಿನಗಳಲ್ಲಿ ಜಾನ್ ಆ ವಡವೆಗಳನ್ನು ಆಕೆಗೆ ಕೊಟ್ಟಾಗ ಜಾನ್‌ಗೆ ಗೊತ್ತಾಗದ ಹಾಗೆ ಗುಟ್ಟಾಗಿ ಆ ವಡವೆಗಳನ್ನು ಅವನ ಹೆಂಡತಿಗೆ ಕಳುಹಿಸಿಕೊಡುತ್ತಾಳೆ.

ಇನ್ನೊಮ್ಮೆ ಜರ್ಮನ್ ಒಬ್ಬನನ್ನು ಕರೆತಂದು ಆತನ ಮುಂದೆ ಬಟ್ಟೆ ಬಿಚ್ಚು ಎಂದಾಗ ಎಲಿಜಬತ್ ಒಪ್ಪಂದದ ಕ್ಲಾಜ್ ನೆನಪಿಸುತ್ತಾಳೆ. ಆದಾಗ್ಯೂ ಇಬ್ಬರೂ ಸೇರಿ ಆಕೆಯನ್ನು ಬೆತ್ತಲೆಯಾಗಿಸಲು ಮುಂದಾದಾಗ ಅಲ್ಲಿ ಪತ್ರ ಬಿಡಸಲೆಂದು ಇಟ್ಟಿದ್ದ ಚಾಕುವೊಂದನ್ನು ಕೈಗೆ ತೆಗೆದುಕೊಂಡು ಎಲಿಜಬೆತ್ ಜೋರಾಗಿ ಹೆದರಿಸುತ್ತಾಳೆ. ಯಾರಾದರೂ ಆಕೆಯ ದೇಹವನ್ನು ಮುಟ್ಟಿದರೆ ಅವರು ರೆಜಿಮೆಂಟ್‌ಗಳಿಂದ ಕೆಲಸ ಕಳೆದುಕೊಂಡು ಹೊರಗೆ ಹೋಗುವುದಷ್ಟೇ ಅಲ್ಲ, ಲಂಡನ್ನ್‌ನ ಜನರು ಅವರನ್ನು ನೋಡಿ ನಗುವಂತೆ ಮಾಡುತ್ತೇನೆ ಎನ್ನುತ್ತಾಳೆ. ಅವಳ ಒರಟುತನ, ಅಧಿಕಾರದ ಧ್ವನಿ ಅವರನ್ನು ನಿಜಕ್ಕೂ ಹೆದರಿಸುತ್ತದೆ. ಜಾನ್ ಚಾರ್ಟರೀಸಗೆ ಇನ್ನೂ ದಿಗಿಲು ಹುಟ್ಟಿಸುತ್ತಾಳೆ. ಅವಳಿಗೆ ಏನಾದರೂ ಆದಲ್ಲಿ, ಆಕೆಯ ಗೆಳೆಯರೇ ಅವನ ಕತ್ತು ಸಿಗಿಯುವುದಾಗಿ ಹೇಳುತ್ತಾಳೆ. ಆ ರಾತ್ರಿ ಅವರ ಪೈಶಾಚಿಕ ಆಸೆಗೆ ಬಲಿಯಾಗುವ ಸೇವಕಿಯನ್ನು ಕಂಡು ಆಕೆಗೆ ಕರುಣೆ, ಮರುಕ, ಸಿಟ್ಟು ಎಲ್ಲವೂ ಒಟ್ಟಿಗೇ ಬರುತ್ತದೆ. ಮರುದಿನ ಜರಮಿಯನ್ನು ಕರೆತರುತ್ತಾಳೆ. ಕಾರ್ಪೆಟನ ಮೇಲೆ ಹರಡಿದ ರಕ್ತದ ಕಲೆಯನ್ನೆಲ್ಲ ನೋಡಿ ಅವರ ಪೈಶಾಚಿಕ ವರ್ತನೆಗೆ ಬಲಿಯಾದ ಸೇವಕಿಗೆ ಸಹಾಯ ಮಾಡಬೇಕು ಎನಿಸುತ್ತದೆ. ವಿಚಾರಿಸಿದಾಗ ಆ ಜರ್ಮನ್ ಆಕೆಯನ್ನು ಕರೆದುಕೊಂಡು ಹೋಗಿದುದಾಗಿ ತಿಳಿದು ಬರುತ್ತದೆ. ಜರಮಿ - ವಕೀಲನು ಎಲಿಜಬೆತ್ ಜೊತೆ ಜಾನ್ ಚಾರ್ಟರೀಸ್ ಹಾಗೆ ವರ್ತಿಸಿದ್ದಕ್ಕೆ ಛೀಮಾರಿ ಹಾಕುತ್ತಾನೆ. ಹಾಗಾಗಿ ಆ ರೀತಿಯ ಅಪಾಯದಿಂದ ಎಲಿಜಬೆತ್ ಪಾರಾಗುತ್ತಾಳೆ.

ಎಲಿಜಬತ್‌ಳ ಆರು ತಿಂಗಳ ಅವಧಿ-ಮುಗಿಯುತ್ತಾ ಬಂದಾಗ ಜಾನ್ ಚಾರಟರೀಸ್ ಲಂಡನ್ನಿನಿಂದ ಹೊರಗೆ-ಬರ್ನ ಬ್ರಿಜ್ಡ್ ವೆಲ್ಸ್ - ನಲ್ಲಿ ತಾನು ಎಲಿಜಬೆತಳಿಂದ ದೂರವಾಗುವುದಾಗಿ ಹೇಳುತ್ತಾನೆ. ಆಕೆಯ ಒಪ್ಪಂದ ಶನಿವಾರ ಮುಗಿದರೆ ಆತ ಸೋಮವಾರದ ವರೆಗೆ ಲಂಡನ್ನಿಗೆ ಹಿಂತಿರುಗುವುದಿಲ್ಲ ಎಂಬ ಅನುಮಾನ ಜರಮಿಗೆ ಬರುತ್ತದೆ. ಅಂದರೆ ಕಾನೂನಿನ ಒಪ್ಪಂದದ ರಕ್ಷಣೆಯಿಲ್ಲದೇ ಎಲಿಜಬೆತ್ ಭಾನುವಾರ, ಸೋಮವಾರ ಎರೆಡು ದಿನ ಅವನೊಡನೆ ಕಳೆಯಬೇಕಾಗುತ್ತದೆ. ಜರಮಿ ತುಂಬಾ ಜಾಗ್ರತಿಯಾಗಿ ಇರಬೇಕೆಂದು ಆಕೆಗೆ ಹೇಳುತ್ತಾನೆ. ಆದರೂ ಆಕೆ ಹೊರಡುವಾಗ - ಬರ್ನ ಬ್ರಿಜ್ಡ್‌ಗೆ ಆಕೆಗೆಂದೇ ಕೊಂಡು ಕೊಂಡ ಕುದುರೆ ಗಾಡಿ ಕಳಿಸುವುದಾಗಿ, ಎಲಿಜಬೆತ್ ಯಾವುದೇ ಕ್ಷಣದಲ್ಲಿ ಹೊರಡಲು ನಿರ್ಧರಿಸಿದರೂ, ಇಂತಹ ಕಡೆ ಕುದುರೆಗಾಡಿ ಸಂಪರ್ಕಿಸ ಬೇಕೆಂದು ಆಕೆಗೆ ಒಂದು ಪತ್ರ ಕಳಿಸುತ್ತಾನೆ.

ಜರಮಿ ಹಾಗೂ ಎಲಿಜಬೆತ್‌ಳ ಭಯ ಬರ್ನ ಬ್ರಿಜ್ಡ್‌ನಲ್ಲಿ ನಿಜವಾಗುತ್ತದೆ. ಲಾಜ್ಡಿಂಗ್‌ನಲ್ಲಿ ಒಬ್ಬಳೇ ಇರುವಾಗ ಜಾನ್ ಚಾರ್ಟರೀಸನ ಬ್ಯಾಗನಲ್ಲಿ ಕುದುರೆ ಹೊಡೆಯುವ ಬಾರಿ ಕೋಲನ್ನು ನೋಡುತ್ತಾಳೆ. ಒಂದು ಚಿಕ್ಕ ಸೀಸೆಯನ್ನು ನೋಡುತ್ತಾಳೆ. ಆ ಸೀಸೆಯಲ್ಲಿ ಆ್ಯಸಿಡ್ ಇರುವುದು ಆಕೆಯ ಗಮನಕ್ಕೆ ಬರುತ್ತದೆ. ಬಹುಶಃ ಒಪ್ಪಂದ ಮುಗಿದ ಕ್ಷಣವೇ ಆಕೆಯನ್ನು ವಿಕಾರಗೊಳಿಸುವ ಪ್ರಯತ್ನವಿರಬಹುದು. ಆಕೆ ಓಡಿ ಹೋಗಲೇ ಎಂದು ಯೋಚಿಸುತ್ತಾಳೆ. ಆದರೆ ಒಪ್ಪಂದ

ಮುಗಿದಿಲ್ಲ. ಹಾಗಾಗಿ ಯೋಚಿಸಿ ಸೀಸೆಯಲ್ಲಿ ರುವುದನ್ನೆಲ್ಲ ಖಾಲಿ ಮಾಡಿ ಚೆನ್ನಾಗಿ ತೊಳೆಯುತ್ತಾಳೆ. ನಂತರ ಬಾಟಲಿಗೆ ನೀರು ತುಂಬಿ ಆ್ಯಸಿಡ್ ವಾಸನೆ ಬರುವ ದ್ರವವೊಂದನ್ನು ಸೇರಿಸುತ್ತಾಳೆ.

ಶನಿವಾರ ಒಪ್ಪಂದದ ಕೊನೆಯ ದಿನ ಜಾನ್ ಜೊತೆ ಡ್ಯಾನ್ಸ್‌ಗೆ ಹೋಗುತ್ತಾಳೆ. ಊಟದ ತನಕ ಜೊತೆಗಿರುತ್ತಾಳೆ. ರಾತ್ರಿ ಊಟ ಮುಗಿದ ನಂತರ ಅವನು ಅಲ್ಲಿಯ ಸೇವಕಿಯರಿಂದ ಸುತ್ತುವರೆದಾಗ ಹೊರಗೆ ಬರುತ್ತಾಳೆ. ತನ್ನ ಕುದುರೆಗಾಡಿಗೆ ಹೇಗೆ ಹೇಳಿ ಕಳಿಸುವುದೆಂದು ಕಾಯುತ್ತಿದ್ದಾಗ ಡೇವಿಡ್ ಪ್ರೆಸ್‌ಕೋಟ್ 'ಸಹಾಯಿಸಲೇ' ಎಂದು ಆಕೆಯನ್ನು ಹುಡುಕಿಕೊಂಡು ಬರುತ್ತಾನೆ. ಆಕೆಯ ಮನದಾಳದಲ್ಲಿ ಹುದುಗಿದ ವ್ಯಕ್ತಿ ಸಹಾಯಕ್ಕೆಂದು ಸ್ವರ್ಗದಿಂದ ಧಾವಿಸಿ ಬಂದ ಹಾಗೆ ಆಕೆಗೆ ಭಾಸವಾಗುತ್ತದೆ. ಅವನ ಸೆಳೆತಕ್ಕೆ ಒಳಗಾಗುವ ಎಲಿಜಬೆತ್ ಅವನ ಸಹಾಯದಿಂದ ಜಾನ್ ಚಾರ್‌ಟರೀಸನ ಹಿಡಿತದಿಂದ ತಪ್ಪಿಸಿಕೊಂಡು ಲಂಡನ್‌ಗೆ ಬರುತ್ತಾಳೆ. ಡೇವಿಡ್ ಪ್ರೆಸ್ ಕೋಟ್ ತಾನೊಬ್ಬ ಗನ್ನರ್ ಕ್ಯಾಪ್ಟನ್, ಆಕೆಗೆ ತಾನೇನೂ ಕೊಡಲಾರೆ. ಆದಾಗ್ಯೂ ಆಕೆಯನ್ನು ಮತ್ತೆ ಭೇಟಿಯಾಗುವುದಾಗಿ ಹೇಳಿ ಆಕೆಯಿಂದ ಬೀಳ್ಕೊಡುತ್ತಾನೆ, ಮೊಟ್ಟ ಮೊದಲ ಬಾರಿಗೆ ಎಲಿಜಬೆತ್ ತನ್ನ ಮನೆಗೆ ಹಿಂತಿರುಗುತ್ತಾಳೆ. ಆಕೆಯದೇ ಮನೆ, ಆಕೆಯದೇ ಹಣ, ಆಕೆಯದೇ ಬದುಕು.

ನಂತರದಲ್ಲಿ ಎಲಿಜಬೆತ್ ಲ್ಯೂಸಿ ಬಾರ್ಲೋ ಎನ್ನುವವಳ ಜೊತೆ ಹ್ಯಾಟ್ ಬಿಸಿನೆಸ್ ಪ್ರಾರಂಭಿಸುತ್ತಾಳೆ. ಮನೆಯನ್ನು open house ಆಗಿ ರೂಪಿಸುತ್ತಾಳೆ. ಚಂದಾ ಹಣ ಕೊಡುವ ಮೂಲಕ ಇಲ್ಲಿಗೆ ಜನರು ಸಂಗೀತ, ಡ್ಯಾನ್ಸ್, ಒಳ್ಳೆಯ ಆಹಾರ, ಚರ್ಚೆ, ಹಾಗೂ ಹೆಣ್ಣಿನ ಜೊತೆ ಬಯಸಿ ಬರಬಹುದು ಎನ್ನುವುದು ಆಕೆಯ ಆಶಯ. ಜರಮಿ ಈ ಬಗ್ಗೆ ಉತ್ಸಾಹ ತೋರಿಸದಿದ್ದರೂ ಎಲಿಜಬೆತ್ ತನ್ನ ಯೋಜನೆಯ ಪ್ರಕಾರ ಮುಂದುವರಿಯುತ್ತಾಳೆ. ಜಾನ್ ಚಾರ್‌ಟರೀಸ್ ಆಕೆಗೆ ಅಂಟಿಸಿದ ಲೈಂಗಿಕ ರೋಗ ಸ್ವಲ್ಪ ದಿನ ಆಕೆಯನ್ನು ಆತಂಕಕ್ಕೆ ತಳ್ಳುತ್ತದೆ. ಮಾರ್ಥಾ, ಬೆಲ್ಲೆ ಸಹಾಯದಿಂದ ಡಾಕ್ಟರರ ಸಹಾಯದಿಂದ ಆಕೆ ರೋಗ ವಿಮುಕ್ತಳಾದಾಗ, ಜಾನ್ ಚಾರ್‌ಟರೀಸ್‌ಗೆ ತನ್ನನ್ನು, ತನ್ನ ದೇಹವನ್ನು, ತನ್ನ ಆತ್ಮವನ್ನು ನಶಿಸಲು ಬಿಡಲಿಲ್ಲ ಎನ್ನುವ ಸಮಾಧಾನ ಆಕೆಯ ಮನಸ್ಸಿನಲ್ಲಿ ಉಳಿಯುತ್ತದೆ. ನಂತರ ಪೇಪರ್ ಒಂದರಲ್ಲಿ ಜಾನ್ ಚಾರಟರೀಸ್‌ನನ್ನು ಇಬ್ಬರು ಯುವಕರು ದಾರಿಯಲ್ಲಿ ಸಾಯುವ ಹಾಗೆ ಹೊಡೆದದ್ದು ಆತ ಕೆಲಸದಿಂದ ನಿವೃತ್ತನಾಗಬೇಕಾದ ಬಗ್ಗೆ ಪ್ರಕಟವಾಗಿರುತ್ತದೆ. ಎಲಿಜಬತ್‌ಗೆ ನಂತರ ಇದು ಮಾರ್ಥಾಳ ಮಕ್ಕಳು ಮಾಡಿದ ಕೆಲಸ ಎಂದು ಗೊತ್ತಾಗುತ್ತದೆ. ಹೀಗೆ ಚಾರ್‌ಟರೀಸ್ ಆಕೆಯ ಬದುಕು, ಮನಸ್ಸಿನಿಂದ ದೂರವಾಗುತ್ತಾನೆ.

ನಂತರದ ಎಲಿಜಬೆತ್‌ಳ ಜೀವನದಲ್ಲಿ ಆಕೆಯ ಇಡಿಯ ಬದುಕನ್ನು ಆವರಿಸಿಕೊಳ್ಳುವವನೆಂದರೆ ಡೇವಿಡ್ ಪ್ರೆಸ್ ಕೋಟ್. ಆತ ಆಕೆಗೆ ಮನೆ, ಆಳು-ಕಾಳು ಇತ್ಯಾದಿ ಒದಗಿಸಿಲಾರ. ಆದರೂ ಎಲಿಜಬೆತ್‌ಳ ಹೃದಯದಲ್ಲಿ ಪ್ರೀತಿಯ ಮೊಳಕೆ ಹುಟ್ಟು ಹಾಕಿದವನು. ಅವನಿಗೋಸ್ಕರ ಜೀವವಾದರೂ ಕೊಟ್ಟೇನು ಎನ್ನುವ ಹಟ ಎಲಿಜಬೆತಳಲ್ಲಿ ಬೆಳೆಯುತ್ತದೆ. ಹೇಗೂ ತನಗೆ ಮನೆ ಇದೆ, ದುಡ್ಡೂ ಇದೆ, ಹಾಗಾಗಿ ಡೇವಿಡ್‌ನಿಂದ ಏನನ್ನೂ ಆರ್ಥಿಕವಾಗಿ ಬಯಸದೇ ಅವನ ಜೊತೆ ಸುಂದರವಾಗಿ ಕಾಲ ಕಳೆಯಬೇಕೆಂಬ ಹಂಬಲ ಎಲಿಜಬೆತ್‌ಳಲ್ಲಿ ಆಗಾಧವಾಗಿ ಬೆಳೆಯುತ್ತದೆ. ಹಾಗಾಗಿ ಆಕೆ ಅವನು ಸಂಜೆಯ ಸಭೆಗಳಿಗೆ ತನ್ನ ಮನೆಗೆ ಬಂದಾಗ ಅವನ ಬದುಕಿನ ಇತಿಹಾಸವನ್ನು ತಿಳಿಯುತ್ತಾಳೆ. ಅವನಿಗೆ ಮದುವೆಯಾಗಿರುವುದೆಂದು ತಿಳಿದಾಗ ಆಕೆಗೆ ನಿರಾಸೆ -ಯಾಗುತ್ತದೆ. ಹಣ, ಹಾಗೂ ಪ್ರಭಾವ ಇರುದುದಕ್ಕಾಗಿ ಅವನು ಕ್ಯಾಪ್ಟನ್ ಸ್ಥಾನದಿಂದ ಮೇಲೆರಲು ಸಾಧ್ಯವಾಗುತಿಲ್ಲ ಎಂದು ತಿಳಿದಾಗ ಆಕೆಯ ಹೃದಯ ಅವನಿಗಾಗಿ ಮರುಗುತ್ತದೆ. ಅವನ ಹತ್ತಿರ ತನ್ನ ಎಲ್ಲಾ ಕಥೆಯನ್ನೂ ಹೇಳುತ್ತಾಳೆ. ಹೀಗೆ ಒಬ್ಬರಿಗೊಬ್ಬರು ಹತ್ತಿರವಾದಾಗ ಎಲಿಜಬೆತ್ ಡೇವಿಡ್ ಪ್ರೆಸ್ ಕೋಟ್ ಜೊತೆಗೇ ತನ್ನ ಬದುಕನ್ನೆಲ್ಲ ಕಳೆದು ಬಿಡುವ ಹಂಬಲವನ್ನು ಜರಮಿಯಲ್ಲಿ ವ್ಯಕ್ತಪಡಿಸುತ್ತಾಳೆ. ಆದರೆ ಆಕೆಗೆ ಹಣ ಕೊಡಲಾರದ ಆಕೆಗೆ ಆರ್ಥಿಕವಾಗಿ ಸಹಾಯ ಮಾಡಲಾಗದ ಡೇವಿಡ್ ಬಳಿ ಆಕೆ ಯಾಕೆ ಬದುಕಬೇಕೆಂಬುದು ಜರಮಿಗೆ ಅರ್ಥವಾಗದ ಪ್ರಶ್ನೆ. ಆದರೂ ಡೇವಿಡ್‌ನನ್ನು ರಾಯಲ್ ಆರ್ಟಿಲರಿಯ ಮೇಜರ್ ಮಾಡಬೇಕೆಂಬ ಎಲಿಜಬೆತ್‌ಳ ಬೇಡಿಕೆಯನ್ನು ಆತ ತಿರಸ್ಕರಿಸದೇ ಆಕೆಗೆ ಸಹಾಯವೆಸಗುತ್ತಾನೆ.

ಈ ಹಂತದಲ್ಲಿಯೇ ಆಕೆಗೆ ಎಡ್ಗರ್ ಸ್ಪ್ರೈ ಹೌಸ್‌ನ ಪರಿಚಯವಾಗುತ್ತದೆ. ಆಕ್ಸಫರ್ಡ್‌ಶೈರ್ ಕುಟುಂಬದವನಾದ ಈತ ಅತ್ಯಂತ ಶ್ರೀಮಂತ. ಡೇವಿಡ್‌ನನ್ನು ಮೇಜರ್ ಮಾಡುವ ಅಧಿಕಾರ ಎಡ್ಗರ್ ಸ್ಪ್ರೈ ಹೌಸ್‌ಗೆ ಇದೆ. ಆದರೆ ಆತ ಆತನ ಹೆಂಡತಿಯ ಅಡಿಯಾಳು. ಡೇವಿಡ್ ಮೇಜರ್ ಆಗಲು ಅರ್ಹನಾದರೂ ಕೂಡಾ ಎಡ್ಗರ್ ತನ್ನ ಹೆಂಡತಿಗೆ ಹೆದರಿ ದುಡ್ಡು ಕೊಡುವವನಿಗೆ ಮೇಜರ್ ಸ್ಥಾನ ನೀಡಲು ಮುಂದಾಗಿರುತ್ತಾನೆ. ಎಲಿಜಬತ್ ವೈಯಕ್ತಿಕವಾಗಿ ಎಡ್ಗರ್‌ನನ್ನು ಭೇಟಿ -ಯಾಗುತ್ತಾಳೆ. ತಾನು ತನ್ನ ಉದ್ಯಮದಲ್ಲಿ ಕಲಿತ ಎಲ್ಲಾ ತಂತ್ರಗಳನ್ನು ಬಳಸಿಕೊಂಡು ಡೇವಿಡ್‌ಗೆ ಮೇಜರ್ ಸ್ಥಾನ ಕೊಡುವಂತೆ ಮಾಡಲು ಜಯಶೀಲಳಾಗುತ್ತಾಳೆ. ಮೊದಲು ಅವನ ರಾಕ್ಷಸೀ ಹೆಂಡತಿಗೆ ಹೆದರಿ ದೂರವಿದ್ದರೂ, ಎಲಿಜಬೆತ್ ಪ್ರೀತಿ ಅವನನ್ನು ಮೋಡಿಗೊಳಿಸುತ್ತದೆ. ಆದರೂ ಆತ ಬಾಯಿ ಬಿಟ್ಟು ಹೇಳಲಾರ. ಜರಮಿಯ ಹತ್ತಿರ ಎಲಿಜಬೆತ್ ಈ ಬಗ್ಗೆ ಮತ್ತೆ ಮಾತನಾಡುತ್ತಾಳೆ. ಜರಮಿ ಎಡ್ಗರ್ ಸ್ಪ್ರೈ ಹೌಸ್ ಹತ್ತಿರ ಆಕೆಯ ಬಗ್ಗೆ ಮಾತನಾಡುತ್ತಾನೆ. ಎಡ್ಗರ್ ಆಕೆಯ

ಪ್ರೀತಿಯ ದ್ಯೋತಕವಾಗಿ ಈಗ ನೀಡಲಿರುವ ಮೇಜರ್ ಸ್ಥಾನವನ್ನು ಅತ್ಯಂತ ಯೋಗ್ಯ ಹಾಗೂ ಅರ್ಹನಾದವನಿಗೆ ನೀಡಬೇಕು ಎಂದ ಹೇಳುತ್ತಾನೆ. ಹಾಗಾಗಿ ಡೇವಿಡ್ ಈ ಸ್ಥಾನವನ್ನು ಪಡೆಯುತ್ತಾನೆ. ಎಲಿಜಬೆತ್‌ಳೊಂದಿಗೆ ಮೂರು ತಿಂಗಳ ಒಪ್ಪಂದವನ್ನು ಆತ ಬಯಸುತ್ತಾನೆ. ಎಲಿಜಬೆತ್ ಮೂರು ತಿಂಗಳ ನಂತರದಲ್ಲಿ ಅವನ ಜೊತೆ ಇರುವುದಾಗಿ ಹೇಳುತ್ತಾಳೆ. ಆದರೆ ಎಡ್ಗರ್ ಮೇಜರ್ ಸ್ಥಾನವನ್ನು ಡೇವಿಡ್‌ಗೆ ನೀಡುವ ಆದೇಶಕ್ಕೆ ಸಹಿ ಹಾಕುವ ಮೊದಲು ಎಲಿಜಬೆತ್ ಒಂದು ರಾತ್ರಿ ತನ್ನೊಡನೆ ಕಳೆಯ ಬೇಕೆಂದು ಬಯಸುತ್ತಾನೆ. ಡೇವಿಡ್‌ಗಾಗಿ ಒಪ್ಪಂದವಿಲ್ಲದೇ ಒಂದು ರಾತ್ರಿಯನ್ನು ಎಡ್ಗರ್‌ರೊಡನೆ ಕಳೆಯುವ ಎಲಿಜಬೆತ್ ಅವನನ್ನು ಸಂತೋಷವಾಗಿ ವಾಪಸ್ಸು ಕಳಿಸುತ್ತಾಳೆ. ಹೀಗೆ ಡೇವಿಡ್ ಮೇಜರ್ ಸ್ಥಾನಕ್ಕೆ ಬಡ್ತಿ ಹೊಂದುತ್ತಾನೆ. ಈ ಬಗ್ಗೆ ಜರಮಿಯಾಗಲೀ ಎಲಿಜಬೆತ್ ಆಗಲೀ ಡೇವಿಡ್ ಹತ್ತಿರ ಉಸಿರೇ ಎತ್ತುವುದಿಲ್ಲ.

ಮೂರು ತಿಂಗಳ ನಂತರ ಸ್ಪ್ರೈಹೌಸ್ ಜೊತೆಗೆ ಒಪ್ಪಂದ ಮಾಡಿಕೊಳ್ಳುವುದಾಗಿ ಹೇಳಿ ಎಲಿಜಬೆತ್-ಡೇವಿಡ್ ಇರುವ ಕಡೆ ಒಂದು ಮನೆಯನ್ನು ಮೂರು ತಿಂಗಳುಗಳಿಗಾಗಿ ಕೊಂಡುಕೊಳ್ಳುತ್ತಾಳೆ. ಇಲ್ಲಿ ಎಲಿಜಬೆತ್‌ಳನ್ನು ಡೇವಿಡ್ ಹುಡುಕಿಕೊಂಡು ಬಂದಾಗ ಎಲಿಜಬೆತಳಿಗೆ ತನ್ನ ಬದುಕು ಸಾರ್ಥಕ ಎನಿಸುತ್ತದೆ. ಒಪ್ಪಂದ, ಹಣ ಇಂತಹ ಯಾವುದೋ ಗೊಡವೆಗಳಿಲ್ಲದೇ ಡೇವಿಡ್‌ನ ಸನಿಹದಲ್ಲಿ ತನ್ನ ಹೃದಯದ ಪ್ರೀತಿಯನ್ನು ಕಂಡುಕೊಳ್ಳುವ ಡೇವಿಡ್‌ನ ವ್ಯಕ್ತಿತ್ವದೊಂದಿಗೆ, ದೇಹದೊಂದಿಗೆ, ಆತ್ಮದೊಂದಿಗೆ ಬೆರೆತು ಹೋದ ಅನುಭವ ಅವಳಿಗೆ ಆಗುತ್ತದೆ. ಇಲ್ಲಿಯವರೆಗಿನ ಸಂಬಂಧಗಳಲ್ಲಿ ಆಕೆ ಕುಟುಂಬ ಯೋಜನೆಯ ಜಾಗೃತಿ ವಹಿಸಿದಂತೆ ಡೇವಿಟ್‌ನ ಸಂಬಂಧದಲ್ಲಿ ವಹಿಸುವುದಿಲ್ಲ. ಹಾಗಾಗಿ ಡೇವಿಡ್‌ನಿಂದ ತನಗೆ ಮಗುವಾಗಬಹುದೆಂಬ ಸತ್ಯ ಎಲಿಜಬೆತ್‌ಳಿಗೆ ಅರಿವಿರುತ್ತದೆ. ತನ್ನ-ಹಾಗೂ ಡೇವಿಡ್‌ನ ಪ್ರೀತಿಯ ಕುರುಹಾಗಿ ಆ ಮಗುವನ್ನು ಉಳಿಸಿಕೊಳ್ಳಬೇಕೆಂಬ ಯೋಜನೆಯೂ ಎಲಿಜಬೆತ್‌ಳಿಗೆ ಇರುತ್ತದೆ. ಮೂರು ತಿಂಗಳ ನಂತರ ಆಕೆ ಡೇವಿಡ್‌ನಿಂದ ಆಗಲಿ ವಾಪಸ್ಸು ಬರುತ್ತಾಳೆ. ಮಗುವಿನ ಬಗ್ಗೆಯಾಗಲೀ, ಎಡ್ಗರ್ ಸ್ಪ್ರೈ ಹೌಸ್ ಬಗ್ಗೆಯಾಗಲೀ ಡೇವಿಡ್ ಹತ್ತಿರ ಆಕೆ ಉಸಿರು ಕೂಡಾ ಎತ್ತುವುದಿಲ್ಲ.

ಡೇವಿಡ್‌ನನ್ನು ಆಗಲಿದ ದುಃಖದಿಂದಲೇ ಎಲಿಜಬೆತ್ ಎಡ್ಗರ್-ಸ್ಪ್ರೈ ಹೌಸ್ ಜೊತೆ ಬದುಕಲು ಪ್ರಾರಂಭಿಸುತ್ತಾಳೆ. ದಿನಗಳು ಕಳೆದ ಹಾಗೆ ಆಕೆಯ ಹೊಟ್ಟೆಯಲ್ಲಿ ಮಗು ಬೆಳೆಯತೊಡಗುತ್ತದೆ. ಹಾಗಾಗಿ ಆಕೆ ಸ್ವಲ್ಪ ಹುಶಾರು ತಪ್ಪಿದ ಹಾಗೆ ಕಾಣಿಸತೊಡಗುತ್ತಾಳೆ. ಎಡ್ಗರ್ ಹತ್ತಿರ ತಾನು ಮಗುವಿಗೆ ತಾಯಿಯಾಗಲಿದ್ದೇನೆ ಎಂದು ಹೇಳುತ್ತಾಳೆ. 'ತನ್ನ ಮಗುವಿಗಾ' ಎಂದು ಎಡ್ಗರ್ ಕೇಳಿದಾಗ ಆಕೆ 'ಹೂ' ಎಂದು ಬಿಡುತ್ತಾಳೆ. ಆದರೆ ಎಡ್ಗರ್ ವರ್ತನೆಯಿಂದ ಆಕೆಗೆ ಆಶ್ಚರ್ಯವಾಗುತ್ತದೆ. ಅದು ತನ್ನ ಮಗು ಎಂದು ಎಡ್ಗರ್ ನಂಬುತ್ತಾನೆ. ತನ್ನ ಹೆಂಡತಿ ತನ್ನನ್ನು ಗಂಡಸಲ್ಲ ಎಂದು ಜರಿದುದನ್ನು ಎಲಿಜಬೆತ್‌ಳಲ್ಲಿ ಹೇಳುತ್ತಾನೆ. ತನ್ನ ಮಗುವಿಗೆ ತಾಯಿಯಾಗುವ ಮೂಲಕ ಎಲಿಜಬೆತ್ ತನಗೆ ಹೊಸ ವಿಶ್ವಾಸ, ವ್ಯಕ್ತಿತ್ವ, ಮೂಡಿಸಿರುವಳೆಂಬ ಗೌರವ, ಆದರ ಅವಳ ಬಗ್ಗೆ ಮೂಡುತ್ತದೆ. ಮಗು ಹುಡುಗ, ಆದರೆ ತನ್ನ ಹೆಸರನ್ನೇ ಹೊಂದುತ್ತಾನೆಂದು ಸಂತೋಷ ಪಡುತ್ತಾನೆ. ಎಲಿಜಬೆತ್‌ಳನ್ನು ಮದುವೆಯಾಗುತ್ತೇನೆಂದು ಆಶ್ವಾಸನೆ ನೀಡುತ್ತಾನೆ. ಎಲಿಜಬೆತಳಿಗೆ ಆಕೆಯ ಬಗ್ಗೆ ಆಕೆಗೇ ನಾಚಿಕೆ, ಅಸಹ್ಯ. ಎಡ್ಗರ್ ಸ್ಪ್ರೈಹೌಸಗೆ ತಾನು ಮೋಸ ಮಾಡುತ್ತಿದ್ದೇನೆಂಬ ಅಳುಕು. ಆತ ತನ್ನನ್ನು ಕಳಿಸಿದ್ದರೆ ಚೆನ್ನಾಗಿತ್ತು ಎಂದು ಆಕೆ ಯೋಚಿಸುತ್ತಾಳೆ. ಆತ ಕಳಿಸಿ ಬಿಡಬಹುದೆಂದು ಸುಳ್ಳು ಹೇಳಿದ್ದಳು. ಬದಲಾಗಿ ಆತ ಹೊಸ ವ್ಯಕ್ತಿಯಾಗಿದ್ದ. ಜೀವನದಲ್ಲಿ ಹೊಸ ಅರ್ಥ ಕಂಡುಕೊಂಡಿದ್ದ.

ಈಗ ಆಕೆ ಅವನಿಗೆ ಏನೂ ಹೇಳಲು ಸಾಧ್ಯವಾಗದೇ, ಸುಳ್ಳಿನೊಡನೆಯೇ ಬದುಕಲು ಪ್ರಾರಂಭಿಸುತ್ತಾಳೆ. ತಂದೆಯಾಗುತ್ತೇನೆಂಬ ಆತನ ಸಂತೋಷವನ್ನು ಕಸಿದುಕೊಳ್ಳಲು ಆಕೆಗೆ ಇಷ್ಟವಾಗಲಿಲ್ಲ. ಜೊತೆಗೆ ಮಗುವಿನ ಭವಿಷ್ಯದ ದೃಷ್ಟಿಯಿಂದ ಎಡ್ಗರ್-ಸ್ಪ್ರೈ ಹೌಸ್ ತಂದೆಯಾಗಿದ್ದರೆ ಒಳ್ಳೆಯದು ಎಂಬ ಭಾವನೆ ಬಂದಾಗ ಆಕೆ ಮತ್ತೆ ಮಗುವಿನ ಬಗ್ಗೆ ಏನೂ ಹೇಳುವುದಿಲ್ಲ. ಎಡ್ಗರ್-ತಾನು ಆಕೆಯನ್ನು ಕಾನೂನು ಪ್ರಕಾರ ಮದುವೆಯಾಗದೇ ಸತ್ತರೂ ಮಗುವಿಗೆ ಸ್ಪ್ರೈ-ಹೌಸ್ ಎಸ್ಟೇಟ್ ಬರುವುದು ಎಂದು ಹೇಳುತ್ತಾನೆ. ಆತನಿಗೆ ಬೇರೆ ಮಕ್ಕಳೇ ಇಲ್ಲದ ಕಾರಣ ಅವನ ಆಸ್ತಿಗೆಲ್ಲ ಎಲಿಜಬೆತಳ ಮಗುವೇ ಹಕ್ಕುದಾರನಾಗುತ್ತಾನೆ ಎಂದು ಹೇಳುತ್ತಾನೆ. ಎಡ್ಗರ್‌ನ ಒಳ್ಳೆಯತನಕ್ಕೆ ಎಲಿಜಬೆತ್ ಮಾರು ಹೋಗುತ್ತಾಳೆ. ಅವನನ್ನು ಸಂತೋಷವಾಗಿಡಲು ತನ್ನ ಶಕ್ತಿ ಮೀರಿ ಎಲಿಜಬೆತ್ ಪ್ರಯತ್ನಿಸುತ್ತಾಳೆ.

ಈ ಮಧ್ಯ ಡೇವಿಡ ಆಕೆಯನ್ನು ಹುಡುಕಿಕೊಂಡು ಬರುತ್ತಾನೆ. ಎಡ್ಗರ್ ಯಾವುದೋ ಕೆಲಸದ ಮೇಲೆ ಪ್ರವಾಸ ಹೋಗಿರುತ್ತಾನೆ. ಮಾರ್ಥಾ ಚಿಕ್ಕ ಪುಟ್ಟ ಕೆಲಸದ ಮೇಲೆ ಹೊರಗೆ ಹೋಗಿದ್ದಳು. ಡೇವಿಡ್ ಬಾಗಿಲನ್ನು ದಢಾರನೆ ತಳ್ಳಿಕೊಂಡು ಬಂದವನೇ ಆಕೆಯ ಮುಂದೆ ಹಣದ ಚೀಲವೊಂದನ್ನು ಬಿಸಾಕುತ್ತಾನೆ. 'ನನಗೆ ಮೇಜರ್ ಸ್ಥಾನ ಕೊಡಿಸಲು ನೀನು ಖರ್ಚು ಮಾಡಿದುದು ಇಷ್ಟೇ ತಾನೆ' ಎನ್ನುತ್ತಾನೆ. 'ಯಾಕೆ ಹೀಗೆ ಮಾಡಿದೆ'? ಎನ್ನುತ್ತಾನೆ. 'ನನ್ನ ಯೋಗ್ಯತೆಯಿಂದ ಮೇಜರ್ ಸ್ಥಾನ ಸಿಕ್ಕಿದೆ ಎಂದು ಖುಷಿಯಾಗಿದ್ದೆ, ನಾನು ಇಷ್ಟ ಪಟ್ಟ, ಮುದ್ದಿಸಿದ ದೇಹ ನನಗೋಸ್ಕರ ಮೇಜರ್ ಸ್ಥಾನವನ್ನು ಕೊಂಡುಕೊಂಡಿದೆ ಎಂದು ನನಗೆ ಈಗಲೇ ಗೊತ್ತಾಗಿದ್ದು' - ಹೀಗೆ ಡೇವಿಡ್ ಎತ್ತರದ

ಸ್ವರದಲ್ಲಿ ಕಿರುಚುತ್ತಾನೆ. ಎಲಿಜಬೆತ್ ಹೇಳುವುದನ್ನು ಆತ ಕೇಳಿಸಿಕೊಳ್ಳುವುದೇ ಇಲ್ಲ. ತನ್ನ ಮೇಲೆ ಅವಲಂಬಿತವಾಗಿರುವ ಕುಟುಂಬವೊಂದು ಇಲ್ಲದಿದ್ದರೆ, ಮೇಜರ್ ಸ್ಥಾನವನ್ನು ತಾನು ಬಿಸಾಕಿ ಹೋಗುತ್ತಿದ್ದೆ ಎನ್ನುತ್ತಾನೆ. ಎಲಿಜಬೆತ್ 'ಡೇವಿಡ್ ನಿನ್ನ ಮೇಲಿನ ಪ್ರೀತಿಗಾಗಿ ಇದೆಲ್ಲ ಮಾಡಿದೆ' ಎಂದು ಗೋಗರೆದರೂ ಆತ ಕೇಳಲಾರ. 'ಪ್ರೀತಿ' ಎಂದು ಹೇಳಬೇಡ, ಪ್ರೀತಿ ಇದ್ದಿದ್ದರೆ ನನ್ನನ್ನು ಬಿಟ್ಟು ಎಡ್ಗರ್ ಜೊತೆ ಹೀಗೆ ಬಂದು ಇರುತ್ತಿದ್ದೆಯಾ ಎನ್ನುತ್ತಾನೆ. 'ನೀನೊಬ್ಬಳು ಮೋಸಗಾತಿ' ಎಂದು ಆಕೆಯನ್ನು ಮಾತಿನಿಂದ ಚುಚ್ಚಿ, ಚುಚ್ಚಿ ಕೊಲ್ಲುತ್ತಿರುವಾಗ ಅಲ್ಲಿಗೆ ಮಾರ್ಥಾ ಬರುತ್ತಾಳೆ. ಅಸಹಾಯಕಳಾಗಿ ನೆಲದ ಮೇಲೆ ಬಿದ್ದ ಎಲಿಜಬೆತ್‌ಳನ್ನು, ಹತ್ತಿರದಲ್ಲಿ ಕೋಪದಿಂದ ನಿಂತ ಡೇವಿಡ್‌ನನ್ನು ನೋಡಿ ಆಕೆಗೆ ಕೋಪ ಬರುತ್ತದೆ. ಡೇವಿಡ್ ಆಕೆಯನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾನೆಂದು ತಿಳಿದು 'ನೀನು ಆಕೆಯನ್ನು ಹಾಗೂ ನಿನ್ನ ಮಗುವನ್ನು ಕೊಲ್ಲುತ್ತಿದ್ದೀಯ' ಎಂದು ಕಿರುಚುತ್ತಾಳೆ. ಡೇವಿಡ್ ದಂಗಾಗುತ್ತಾನೆ. ಬಹುಶಃ ಎಡ್ಗರ್ ಸ್ಪೈಹೌಸ್ ತನಗೆ ಬ್ಲ್ಯಾಕ್ ಮೇಲ್ ಮಾಡುತ್ತಾನೆ ಎನ್ನುತ್ತಾನೆ. ಎಲಿಜಬೆತ್ ಆ ಮಗು ತನ್ನದು. ಎಡ್ಗರ್ ಸ್ಪೈಹೌಸ್‌ನ ಮಗನಾಗಿಯೇ ಆತ ಬೆಳೆಯುತ್ತಾನೆ. ಹಾಗಾಗಿ ಡೇವಿಡ್ ಅಲ್ಲಿಂದ ಹೊರಟು ಹೋಗಬೇಕೆಂದು ಕಿರುಚುತ್ತಾಳೆ. ಆಕೆಯನ್ನು ವಂಚಕಿ ಎಂದು ಬೈಯುತ್ತಾ ಡೇವಿಡ್ ಬಾಗಿಲನ್ನು ಬಡಿದುಕೊಂಡು ಹೊರಟು ಹೋಗುತ್ತಾನೆ. ಸಾವು ಬದುಕಿನ ನಡುವೆ ಮಾನಸಿಕ ಘರ್ಷಣೆಯಿಂದ ನರಳುವ ಎಲಿಜಬೆತ್ ಜರಮಿ ಹಾಗೂ ಮಾರ್ಥಾಳ ಸಹಾಯದಿಂದ ಬದುಕುಳಿಯುತ್ತಾಳೆ.

ಮಗು ಹುಟ್ಟಿದಾಗ ಇಡಿಯ ಪ್ರಪಂಚದ ಸಂತೋಷವನ್ನೆಲ್ಲ ಎಡ್ಗರನ ಮುಖದಲ್ಲಿ ಎಲಿಜಬೆತ್ ಕಾಣುತ್ತಾಳೆ. ಮಗುವನ್ನು ಬಿಟ್ಟು ಆತ ಅರೆಕ್ಷಣ ಅಗಲಲಾರ. ಅರ್ಧ್ರರ್ ಎಡ್ವರ್ಡ ಎಂದು ಮಗುವಿಗೆ ಅವನೇ ಹೆಸರು ಸೂಚಿಸುತ್ತಾನೆ. ಎಡ್ಗರ್ ಈಗ ಎಲಿಜಬೆತ್‌ಳಿಗಿಂತ ಮಗುವಿನ ಜೊತೆಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳುತ್ತಾ ಹೋಗುತ್ತಾನೆ. ಎಲಿಜಬೆತ್‌ಳಿಗೆ ತಾನು ಒಂಟಿ ಎನಿಸತೊಡಗುತ್ತದೆ. ಡೇವಿಡ್ ಮರಳಿ ಬರಲಾರ ಎನಿಸುತ್ತದೆ. ಸಾಯುಬೇಕು ಎಂಬ ಬಲವಾದ ಭಾವನೆ ಆಕೆಯಲ್ಲಿ ಮೂಡುತ್ತದೆ. ಆ ಸಮಯದಲ್ಲಿ ಮಾರ್ಥಾ ಹಾಗೂ ಜರಮಿ ಆಕೆಯನ್ನು ಸಮಾಧಾನ ಪಡಿಸುತ್ತಾರೆ. ಮಾರ್ಥಾ ಮಗುವಿಗಾದರೂ, ಅದರ ಭವಿಷ್ಯಕ್ಕಾದರೂ ಆಕೆ ಬದುಕಿ ಉಳಿಯಲೇ ಬೇಕೆಂದು ಆಗ್ರಹ ಪಡಿಸುತ್ತಾಳೆ. ಡೇವಿಡ್ ಒಂದಲ್ಲ ಒಂದು ದಿನ ಆಕೆಯನ್ನು ಹುಡುಕಿಕೊಂಡು ಬಂದೇ ಬರುತ್ತಾನೆಂದು ಭರವಸೆ ನೀಡುತ್ತಾಳೆ. ಹೀಗೆ ಮಾರ್ಥಾಳ ಸಹಾಯದಿಂದಾಗಿ ಎಲಿಜಬೆತ್ ಬದುಕಿ ಉಳಿಯುತ್ತಾಳೆ.

ಈ ಮಧ್ಯೆ ಎಡ್ಗರ್ ಹೆಂಡತಿಗೆ ಕಾಯಿಲೆ ಎಂದೂ, ಆಕೆ ಬಹಳ ದಿನ ಬದುಕಿ ಉಳಿಯಲಾರಳೆಂದೂ ಆತನಿಗೆ ತಿಳಿಯುತ್ತದೆ. ಆಕೆ ಸತ್ತ ಕೂಡಲೇ ಕಾನೂನಿನ ಪ್ರಕಾರ ಎಲಿಜಬೆತ್ ತನ್ನ ಹೆಂಡತಿಯಾಗ ಬಹುದೆಂದು ಎಡ್ಗರ್ ಆಶಿಸುತ್ತಾನೆ. ಎಡ್ಗರ್ ಆತನ ಹೆಂಡತಿಯ ಸಾವಿನ ಬಗ್ಗೆ ತೋರುವ ತಣ್ಣನೆಯ ಭಾವನೆಗಳನ್ನು ಕಂಡಾಗ ಎಲಿಜಬೆತ್‌ಗೆ ಬೆಚ್ಚುವಂತೆ ಆಗುತ್ತದೆ.

ಎಡ್ಗರ್‌ನ ರೆಜಿಮೆಂಟ್ ವೆಸ್ಟ್ ಇಂಡೀಸ್‌ಗೆ ಹೋಗಬೇಕಾಗಿ ಬಂದಾಗ ಆತ ಕೂಡಾ ಹೋಗಬೇಕಾಗುತ್ತದೆ. ಮನೆ ಮಾಡಿ ಮಗುವನ್ನೂ ಹಾಗೂ ಆಕೆಯನ್ನೂ ಕರೆಸಿಕೊಳ್ಳುತ್ತೇನೆ ಎಂದು ಎಲಿಜಬೆತ್‌ಗೆ ಹೇಳುತ್ತಾನೆ. ಮಗು ಆರ್ಧ್ರರ್ ಬಿಟ್ಟು ಹೋಗಲು ಅವನು ಕಷ್ಟ ಪಡುವುದನ್ನು ಕಂಡಾಗ ಈತ ಒಳ್ಳೆಯ ತಂದೆ ಲಕ್ಷಣಗಳನ್ನು ಹೊಂದಿದ್ದಾನೆ ಎಂದು ಎಲಿಜಬೆತ್‌ಗೆ ಭಾಸವಾಗುತ್ತದೆ. ಆತ ವೆಸ್ಟ್ ಇಂಡೀಸ್‌ಗೆ ಹೊರಟು ಹೋಗುತ್ತಾನೆ. ಸ್ವಲ್ಪ ದಿನಗಳಲ್ಲಿ ಆತನ ಹೆಂಡತಿ ಸತ್ತ ಸುದ್ದಿಯನ್ನೂ, ಆಕೆಯ ಎಲ್ಲಾ ಆಸ್ತಿ ತನಗೆ ಸೇರಿರುವ ವಿಚಾರವನ್ನು ಬರೆಯುತ್ತಾನೆ. ತಾನು ಬೇಗನೇ ಎಲಿಜಬೆತ್‌ಳನ್ನು ಮದುವೆಯಾಗುವುದಾಗಿಯೂ, ಮನೆ ಮಾಡಿ ಆಕೆ ಹಾಗೂ ಮಗುವನ್ನು ವೆಸ್ಟ್ ಇಂಡೀಸ್‌ಗೆ ಕರೆದುಕೊಂಡು ಹೋಗುವುದಾಗಿ ಪತ್ರ ಬರೆಯುತ್ತಾನೆ. ಎಲಿಜಬೆತ್‌ಗೆ ಏನು ಬರೆಯುವುದೆಂದೇ ಅರ್ಥವಾಗುವುದಿಲ್ಲ.

ಈ ಸಮಯದಲ್ಲಿ ಡೇವಿಡ್ ಮತ್ತೆ ಆಕೆಯನ್ನು ಹುಡುಕಿಕೊಂಡು ಬರುತ್ತಾನೆ. ತನ್ನ ಮಗುವನ್ನು ನೋಡಲು ಆಶಿಸುತ್ತಾನೆ. ತನ್ನ ಮೆಡಲ್ಸ್, ರಾಯಲ್ ಆರ್ಟಿಲರಿಯ ಗೋಲ್ಡ್ ಮೆಡಲ್ಸ್ ಮಗುವಿಗೆ ಉಡುಗೊರೆಯಾಗಿ ನೀಡುತ್ತಾನೆ. ತಾನು ಎಲಿಜಬತ್‌ಳಿಂದ ದೂರವಾಗುವುದಕ್ಕೆ ಮಾನಸಿಕವಾಗಿ ಸಾಧ್ಯವಾಗುತ್ತಿಲ್ಲ ಎನ್ನುತ್ತಾನೆ. ತಾನು ಬೇರೆ ದೇಶಕ್ಕೆ ಹೋಗಬೇಕು. ಹೋಗುವ ಮೊದಲು ಎಲಿಜಬೆತ್‌ಳನ್ನು ನೋಡದೇ ಹೋಗಲು ಸಾಧ್ಯವಾಗಲೇ ಇಲ್ಲ ಎನ್ನುವ ತನ್ನ ತೊಳಲಾಟವನ್ನು ತಿಳಿಸುತ್ತಾನೆ. ಎಲಿಜಬೆತ್ ಅವನ ಸನಿಹದಲ್ಲಿ ಎಲ್ಲವನ್ನು ಮರೆತು ಬಿಡುತ್ತಾಳೆ. ತನ್ನ ಆತ್ಮದ ಒಂದು ಅಂಶವಾದ ಡೇವಿಡ್‌ನ ಕ್ಷಮೆ ಯಾಚನೆಯಿಂದ ಸೋತ ಎಲಿಜಬೆತ್ ಆ ಕ್ಷಣದಲ್ಲಿ ಸ್ಪೈಹೌಸಳ ಮರೆತು ಡೇವಿಡ್‌ನ ಪ್ರೀತಿಯಲ್ಲಿ ಮುಳುಗಿ ಹೋಗುತ್ತಾಳೆ. ಡೇವಿಡ್ ಆಕೆ ಎಡ್ಗರ್ ಸ್ಪೈಹೌಸ್‌ನನ್ನು ಮದುವೆಯಾಗಬಾರದೆಂದು ಆಗ್ರಹ ಪಡಿಸುತ್ತಾನೆ. ಎಲಿಜಬೆತ್ ತನ್ನವಳೇ ಆಗಿರಬೇಕು ಎಂಬುದು ತನ್ನ ಆಸೆ ಎಂದು ಒತ್ತಾಯಿಸುತ್ತಾನೆ. ತನಗಾಗಿ ಆಕೆ ಕಾಯಲೇ ಬೇಕೆಂದು ಹೇಳಿ ಆತ ದೂರವಾದಾಗ ಎಲಿಜಬೆತ್‌ಗೆ ಯೋಚನೆಯಾಗುತ್ತದೆ. ಎಡ್ಗರ್ ಬಗ್ಗೆ ತಾನೇನು ಮಾಡಬೇಕು ಎಂಬ ಯೋಚನೆಯಲ್ಲಿರುವಾಗಲೇ ವೆಸ್ಟ್ ಇಂಡೀಸನಲ್ಲಿ ಮಲೇರಿಯಾಕ್ಕೆ ತುತ್ತಾಗಿ ಎಡ್ಗರ್ ಸತ್ತು ಹೋಗುತ್ತಾನೆ. ವಕೀಲರ ಪ್ರಕಾರ ಎಡ್ಗರನ ಇಡೀ ಆಸ್ತಿಗೆ ಆರ್ಧ್ರರ್ ಹಕ್ಕುದಾರನಾಗುತ್ತಾನೆ. ಅವನ 25 ವರುಷದವರೆಗೆ ಅವನಿಗೆ

ಗಾರ್ಡಿಯನ್ ಆಗಿ ಎಲಿಜಬೆತ್, ವಕೀಲರು, ಎಡ್ಗರ್‌ನ ಸಂಬಂಧಿಗಳು ಇರಬೇಕೆಂದು ಎಡ್ಗರ್‌ನ ಆಸೆಯಾದುದರಿಂದ, ಆರ್ಥ್‌ರನ ಭವಿಷ್ಯ ಭದ್ರವಾಗಿ ಉಳಿಯುತ್ತದೆ.

ಬಹಳ ದಿನಕಾಲ ಡೇವಿಡ್ ವಾಪಸ್ಸು ಬರುವುದಿಲ್ಲ. ಜರಮಿಯ ಒತ್ತಾಯಕ್ಕಾಗಿ ಎಲಿಜಬೆತ್ ರಿಚರ್ಡ್ ಎನ್ನುವ ವಿದುರನ ಜೊತೆ ಬದುಕಬೇಕಾಗುತ್ತದೆ. ಆತ ಕೂಡಾ ಆಕೆಗೆ ಮದುವೆಯಾಗು ಎಂದು ಕೇಳುತ್ತಾನೆ. ಡೇವಿಡ್ ಬರುವುದೇ ಇಲ್ಲ ಎಂದು ಜರಮಿ ಕೂಡಾ ಒತ್ತಾಯಿಸುತ್ತಾನೆ. ಡೇವಿಡ್ ಬರುವುದಿಲ್ಲವೇನೋ ಎಂಬ ಅನುಮಾನದಲ್ಲಿ ಹಲವಾರು ವರ್ಷಗಳ ಅಂತರದಲ್ಲಿ ರಿಚರ್ಡ್‌ನನ್ನು ಮದುವೆಯಾಗಲು ಒಪ್ಪುತ್ತಾಳೆ. ಅವರಿಗೆಲ್ಲ ಆಕೆ ಮಿಸೆಸ್ ಸ್ಪೈಹೌಸ್ ಎಂದೇ ಪರಿಚಯ. ವಿಧವೆಯನ್ನು ಮದುವೆಯಾಗುತ್ತಿದ್ದೇನೆ ಎಂದು ಆತ ತಿಳಿಯುತ್ತಾನೆ. ಮಗು ಆರ್ಥ್‌ರ್‌ನನ್ನು 25 ವರುಷದ ನಂತರ ಸ್ಪೈಹೌಸ್ ಆಸ್ತಿಗೆ ಕಳಿಸುವುದು ಎಂದಾಗುತ್ತದೆ. ಎಲಿಜಬೆತ್ ರಿಚರ್ಡ್‌ನನ್ನು ಮದುವೆಯಾಗುವ ದಿನವೇ ಎಲಿಜಬೆತ್‌ಳಿಗೆ ಡೇವಿಡ್ ಸಿಕ್ಕುತ್ತಾನೆ. ಆಕೆ ಮಗುವನ್ನೂ ಕೂಡಾ ಮಾರ್ಥಾ ರಿಚರ್ಡ್ ಬಳಿ ಬಿಟ್ಟು ಡೇವಿಡ್‌ಜೊತೆಗೆ ಓಡಿ ಹೋಗುತ್ತಾಳೆ. ಡೇವಿಡ್‌ನ ಹೆಂಡತಿ ತೀರಿ ಹೋದುದರಿಂದ ಅವರಿಬ್ಬರೂ ಮದುವೆಯಾಗುತ್ತಾರೆ. ನಂತರ ಮಾರ್ಥಾ ಮಗುವನ್ನು ಕರೆದುಕೊಂಡು ಬಂದು ಇವರನ್ನು ಸೇರುತ್ತಾಳೆ. ಜರಮಿಯ ನೆರವಿನಿಂದ ಡೇವಿಡ್ ಸ್ಪೈಹೌಸ್‌ನ ಮ್ಯಾನೇಜರ್ ಆಗಿ ನೇಮಕವಾಗುತ್ತಾನೆ. ಹೀಗೆ ಸ್ಪೈಹೌಸ್‌ನಲ್ಲಿ ಎಲಿಜಬೆತ್ ಶಾಂತವಾಗಿ ಬದುಕಲು ಪ್ರಾರಂಭಿಸುತ್ತಾಳೆ. ಆಕೆಗೆ ಕ್ಯಾರೋಲಿನ್ ಎಂಬ ಮಗಳೂ ಹುಟ್ಟುತ್ತಾಳೆ. 1815ರಲ್ಲಿ ನೆಪೋಲಿಯನ್ ಮತ್ತೆ ಫ್ರಾನ್ಸ್‌ಗೆ ಬಂದು ರಾಜನಾಗಿ ಇಂಗ್ಲೀಷ್ ಹಾಗೂ ಇತರ ರಾಷ್ಟ್ರಗಳ ಮೇಲೆ ಯುದ್ಧ ಸಾರುತ್ತಾನೆ. ಡೇವಿಡ್ ಪ್ರೆಸ್ ಕೋಟ್‌ಗೆ ರೆಜಿಮೆಂಟನಿಂದ ಕರೆ ಬರುತ್ತದೆ. ಎಲಿಜಬೆತ್ ಬೇಡ ಎಂದರೂ ದೇಶದ ಕರೆಗೆ ಓಗೊಡುವ ಡೇವಿಡ್ ಜೂನ್ 18ರಂದು ವಾಟರ್‌ಲೂ ಕದನದಲ್ಲಿ ಮರಣವಪ್ಪುತ್ತಾನೆ. ಹೀಗೆ ನೆಪೋಲಿಯನ್ ತನ್ನ ಜೀವನದಲ್ಲಿ ಆಟವಾಡಿದನೆಂದು ಎಲಿಜಬೆತ್ ಭಾವಿಸುತ್ತಾಳೆ. ಡೇವಿಡ್‌ನ ಮರಣ ಜೀವನದಲ್ಲಿ ಆಕೆಯನ್ನು ವಿಮುಖಳನ್ನಾಗಿ ಸುತ್ತದೆ ಮಗ, ಮಗಳೂ ಮದುವೆಯಾಗಿ ಸೆಟಲ್ ಆಗುತ್ತಾರೆ. ಕೊನೆಯ ದಿನಗಳಲ್ಲಿ ಡೇವಿಡ್ ಸತ್ತ ಸ್ಥಳ ಬೆಲ್ಜಿಯಂಗೆ ಕೂಡಾ ಹೋಗಿ ಬರುತ್ತಾಳೆ. ಕೊನೆಗೆ ಗರ್ಭಕೋಶದಲ್ಲಿ ಗಡ್ಡೆಯಾಗಿ ರೋಗದಿಂದ ಕೊನೆಯುಸಿರೆಳೆಯುತ್ತಾಳೆ. ಈ ಇಡೀ ಕತೆ ತಾಯಿಯ ಮರಣದ ನಂತರ ತನಗೆ ತಿಳಿದುದಾಗಿ, ಕೈ ಬರಹ 1837ರಲ್ಲಿ ತನಗೆ ಸಿಕ್ಕಿದುದಾಗಿ ಆಕೆಯ ಮಗ ಆರ್ಥರ್ ಬರೆಯುತ್ತಾನೆ.

ಹೀಗೆ 'ದಿ ಆಫೀಸರ್ಸ್ ವುಮನ್ 'ಕಾದಂಬರಿ ಕೊನೆಗೊಳ್ಳುತ್ತದೆ.

ಈ ಕಾದಂಬರಿ ಎಲಿಜಬೆತ್‌ಳಂತಹ ಸೂಕ್ಷ್ಮ ಮತಿಯ ಸೂಳೆಯ ಬದುಕಿನಿಂದ ಅನೇಕಾನೇಕ ಪ್ರಶ್ನೆಗಳನ್ನು ಎತ್ತುವುದಕ್ಕೆ ನಮಗೆ ಅಗತ್ಯವಾದ ಕಾದಂಬರಿಯಾಗಿ ಕಾಣುತ್ತದೆ. ಚಿಕ್ಕ ಹುಡುಗಿ ಎಲಿಜಬೆತ್ ಸೂಳೆಯಾಗುವುದಕ್ಕೆ ಇಷ್ಟಪಟ್ಟವಳಲ್ಲ. ಆಕೆಯ ಬಡತನ, ಕುಟುಂಬದ ಅರೆ ಹೊಟ್ಟೆ, ತಂದೆಯ ಅಸಹಾಯಕತನ ಆಕೆಯನ್ನು ಇಷ್ಟವಿಲ್ಲದ ಉದ್ಯೋಗಕ್ಕೆ ತಳ್ಳುತ್ತದೆ. ಪಿತೃ ಪ್ರಧಾನ ಹಾಗೂ ಬಂಡವಾಳ ಶಾಹಿ ಸಂಸ್ಕೃತಿ ಬಡತನದ ಬವಣೆಯಲ್ಲಿರುವವರಿಗೆ ತೆರೆಯುವ ಅವಕಾಶಗಳೆಂತಹುಗಳೆಂಬುದನ್ನು ಕಾದಂಬರಿಯು ಎಳೆ ಎಳೆಯಾಗಿ ಬಿಚ್ಚಿಡುತ್ತದೆ.

17 ಹಾಗೂ 18ನೆಯ ಶತಮಾನದ ಚಾರಿತ್ರಿಕ ಯುದ್ಧಗಳು ರಣರಂಗದಲ್ಲಿ ಹೋರಾಟ, ಶೂರತನದ ಕತೆಗಳನ್ನು, ಸೋಲು, ಗೆಲುವಿನ ಪ್ರಶ್ನೆಗಳನ್ನು ಬಿಚ್ಚಿ ಇಟ್ಟರೆ,'ದಿ ಆಫೀಸರ್ಸ್ ವುಮನ್' ಇಂತಹ ಹೋರಾಟಗಾರರೊಂದಿಗೆ ತಳಕು ಹಾಕಿಕೊಂಡ ಹೆಣ್ಣಿನ ಮನಸ್ಸಿನ ಭಾವನೆ, ಜೀವನ ಕ್ರಮಗಳನ್ನು ಬಿಚ್ಚಿ ಇಡುತ್ತದೆ. ಎಲಿಜಬೆತ್ ಬದುಕಲು ಇಷ್ಟಪಡುವ ಗಂಡಸರೆಲ್ಲ ಸಾಯುವುದು ಯುದ್ಧರಂಗದಲ್ಲಿಯೇ, ನೆಪೋಲಿಯನ್ ಕಾಲದಲ್ಲಿ ನಡೆದ ಯುದ್ಧಗಳಲ್ಲಿ-ಯಾರಿಗೆ ಯಶಸ್ಸು ಸಂದಿತೋ, ಬಿಟ್ಟಿತೋ, ಆದರೆ ತನ್ನ ಬದುಕು ಇದರಿಂದ ಚೂರು ಚೂರಾಗುತ್ತಾ ಹೋಗುವುದನ್ನು ಕಾದಂಬರಿಯ ನಾಯಕಿ ಎಲಿಜಬೆತ್ ಬಿಚ್ಚಿಡುತ್ತಾಳೆ. ವೈಯಕ್ತಿಕ ಬದುಕುಗಳನ್ನು ಯುದ್ಧ ನಾಶ ಮಾಡುವ ಚಿತ್ರಣವನ್ನು ಎಲಿಜಬೆತ್‌ಳ ಬದುಕಿನಿಂದ ಬಿಚ್ಚಿಡಲಾಗಿದೆ.

ಜೊತೆಗೆ ಎಲಿಜಬೆತ್‌ಳ ಬದುಕಿನ ಮೂಲಕ ಮಾನವ ಬದುಕಿನ ಹಾಗೂ ಗಂಡು, ಹೆಣ್ಣಿನ ನಡುವಿನ ಸಂಬಂಧಗಳ ಗೋಜಲಗಳನ್ನು ಸೂಕ್ಷ್ಮವಾಗಿ ಹಿಡಿಯಲಾಗಿದೆ. ಎಲಿಜಬೆತ್‌ಳ ಕಾಮದ ಬದುಕಿನಲ್ಲಿ ಲೈಂಗಿಕ ಮುಖಗಳನ್ನು ಶೋಧಿಸಲಾಗಿದೆ. 17 ಹಾಗೂ 18ನೆಯ ಶತಮಾನದಲ್ಲಿ ಕಾನೂನಿನ ಒಪ್ಪಂದದ ಮೂಲಕ ಎಲಿಜಬೆತ್ ಒಬ್ಬ ಡೆಮಿ-ಮಂಡೆ ಯಾಗಿ ಜೀವನ ನಡೆಸಿದುದು ಆಗಿನ ಸಾಮಾಜಿಕ ಚಿತ್ರಣವನ್ನೂ ಕೂಡಾ ಬಿಂಬಿಸುತ್ತದೆ. ಒಟ್ಟಾಗಿ ಎಲಿಜಬೆತ್‌ಳ ಮೂಲಕ ಹೆಣ್ಣಿನ ಮನಸ್ಸಿನ ಒಳಪದರುಗಳನ್ನು ಶೋಧಿಸಲಾಗಿದೆ ಎಂಬ ಕಾರಣದಿಂದ 'ದಿ ಆಫೀಸರ್ಸ್ ವುಮನ್' ಒಂದು ಸ್ಫೂರ್ತಿದಾಯಕ ಕಾದಂಬರಿಯಾಗಿದೆ ಎಂದು ಹೇಳಬಹುದಾಗಿದೆ.

ಚಂಪಾವತಿ ಎಚ್.ಎಸ್.

ಆತ್ಮ ಗೌರವದ ಕನಸು

ಪೋಲೀಸ್ ಅಧಿಕಾರಿಯೊಬ್ಬ ಬುಡಕಟ್ಟಿನ ಸ್ತ್ರೀಯ ಮೇಲೆ ಅತ್ಯಾಚಾರ ಮಾಡಿದರೆ ಪ್ರತಿಯೊಬ್ಬರೂ ಸಿಟ್ಟಿಗೇಳುತ್ತಾರೆ. ಆದರೆ ಇದೇ ಘಟನೆ ಒಬ್ಬ ವೇಶ್ಯೆಯ ಮೇಲೆ ನಡೆದರೆ ಇದನ್ನು ಯಾರೂ ಅತ್ಯಾಚಾರ ಎಂದು ಕರೆಯುವುದಿಲ್ಲ. ಒಬ್ಬ ದಲಿತ ಮಹಿಳೆಯನ್ನು ಕೊಲೆ ಮಾಡಿದರೆ. ಅದು ಕೊಲೆಯಂದಾಗುತ್ತದೆ. ಆದರೆ ಒಬ್ಬ ವೇಶ್ಯೆಯನ್ನು ಕೊಲೆ ಮಾಡಿದರೆ. ಅದು ಸಹಜವೆಂದಾಗುತ್ತದೆ. ಅದು ವೇಶ್ಯಾವೃತ್ತಿಯ ಒಂದು ಪರಿಣಾಮವೆಂದು ಪರಿಗಣಿಸಲಾಗುತ್ತದೆ. ನಮ್ಮ ಮುಂದಿರುವ ಪ್ರಶ್ನೆಯೆಂದರೆ ವೇಶ್ಯಾವೃತ್ತಿಯಲ್ಲಿ ಸ್ತ್ರೀಯರ ಮೇಲೆ ನಡೆಯುವ ಹಿಂಸೆಯನ್ನು ಏಕೆ ಹಿಂಸೆ ಎಂದು ನೋಡುವುದಿಲ್ಲ ? ಇದಕ್ಕೆ ಕಾರಣಗಳು ನಮ್ಮ ಸಮಾಜದ ರಚನೆಯಲ್ಲಿ ಆಳವಾಗಿ ಬೆರೆತು ಹೋಗಿರುವುದನ್ನು ನೋಡಬಹುದು. ಪುರುಷಪ್ರಧಾನ ಕಲ್ಪನೆಯು ಸ್ತ್ರೀಯರನ್ನು ಒಳ್ಳೆಯವರು, ಕೆಟ್ಟವರು ಎಂದು ವಿಭಜಿಸಿದೆ. ಇದು ವೇಶ್ಯೆಯರಾದ ಮಹಿಳೆಯರನ್ನು ಬೇರೆ ಮಹಿಳೆಯರಿಂದ ಬೇರ್ಪಡಿಸುತ್ತದೆ. ಹಿಂಸೆ ವೇಶ್ಯಾವೃತ್ತಿಯ ಅವಿಭಾಜ್ಯ ಅಂಗವೆಂದು ಭಾವಿಸಲಾಗುತ್ತದೆ. ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರು ಸಮಾಜದಲ್ಲಿ ಶಾಪಗ್ರಸ್ತ ಮಹಿಳೆಯರೆಂದು ಕರೆಯಲ್ಪಡುತ್ತಾರೆ.

ಪುರುಷ ಪ್ರಧಾನ ಪರಿಕಲ್ಪನೆಗಳನ್ನು ಅನುಸರಿಸುವ ಮಹಿಳೆಯರನ್ನು ಒಳ್ಳೆಯ ಹೆಂಗಸರೆಂದು ಕರೆಯಲಾಗುತ್ತದೆ. ಇದು ಅವರ ಸ್ಥಾನಮಾನವನ್ನೂ ಸೂಚಿಸುವ ರೀತಿಯಾಗಿದೆ. ಸಮಾಜದ ಕಣ್ಣಲ್ಲಿ ಅವರಿಗೆ ಕೆಲವು ಹಕ್ಕು ಭಾದ್ಯತೆಗಳು ದೊರೆಯುತ್ತವೆ. ಅತ್ಯಾಚಾರ ಪ್ರಕರಣಗಳಲ್ಲಿ, ಇಂದಿಗೂ, ಸ್ತ್ರೀಯರ ಪೂರ್ವ ಲೈಂಗಿಕ ಇತಿಹಾಸವನ್ನು ನ್ಯಾಯಾಲಯದಲ್ಲಿ ತಂದು ಅವಳ ವಿರುದ್ಧವೇ ಉಪಯೋಗಿಸಲಾಗುತ್ತದೆ. ಮದುವೆಯಾಗದ, ಲೆಸಿಬಿಯನ್, ವೇಶ್ಯೆ ಹಾಗೂ ಇತರ ಹೆಂಗಸರನ್ನು ಕೆಟ್ಟ ಹೆಂಗಸರೆಂದು ಪರಿಗಣಿಸಲಾಗುತ್ತದೆ. ಇವರು ಮದುವೆಯೆಂಬ ಚೌಕಟ್ಟಿನ ಹೊರಗೆ, ಅವರ ತೃಪ್ತಿಗೆ, ಅಥವಾ ಹಣಕ್ಕಾಗಿ, ಲೈಂಗಿಕ ಆಸೆಯನ್ನು ಪೂರೈಸಿಕೊಳ್ಳುತ್ತಾರೆ ಎಂಬುದೇ ಇವರನ್ನು ಕೆಟ್ಟ ಹೆಂಗಸರೆಂದು ಕರೆಯಲು ಕಾರಣ. ಇಂತಹ 'ಕೆಟ್ಟ ಹೆಂಗಸರ' ಮೇಲೆ ಅತ್ಯಾಚಾರ ನಡೆದಾಗ ಅಥವಾ ಹಿಂಸೆ ನಡೆದಾಗ, ಇದನ್ನು ಹಿಂಸೆಯೆಂದು ಕರೆಯುವುದಿಲ್ಲ. ಇದೊಂದು ಅಪರಾಧವಾಗುವುದಿಲ್ಲ.

ವೇಶ್ಯೆಯರ ಬದುಕನ್ನು ಸಮಾಜ ತನ್ನ ನೈತಿಕ ಕಣ್ಣಿನಿಂದ ನೋಡುತ್ತದೆ. ಜೀವನದುದ್ದಕ್ಕೂ ಅವಳಿಗಂಟಿದ ಶಾಪ ಅವರನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಅವರು ನೈತಿಕವಾಗಿ ಅದಃ ಪತನಕ್ಕೆ ಇಳಿದವರೆಂದು ಸಮಾಜ ನೋಡುತ್ತದೆ. ಉತ್ತಮ ಸಮಾಜದ ಮೇಲೆ ಕೆಟ್ಟ ಪರಿಣಾಮ ಇವರು ಬೀರುತ್ತಾರೆಂದು ಭಾವಿಸಲಾಗುತ್ತದೆ. ಸಮಾಜಕ್ಕೆ ಒಪ್ಪಿತವಾದ ಮೌಲ್ಯ, ನಂಬಿಕೆಗಳನ್ನು ಉಲ್ಲಂಘಿಸಿ ಇವರು ಬದುಕುತ್ತಿದ್ದಾರೆಂಬ ದೃಷ್ಟಿ ಕೋನ ನಮ್ಮಲ್ಲಿದೆ. ಹೀಗೆ ಕೆಳಗೆ ಬಿದ್ದ ದಾರಿ ತಪ್ಪಿರುವ, ಹೆಂಗಸರ ಬಗೆಗಿರುವ ಧೋರಣೆಗಳು ಸಾರ್ವಜನಿಕರ ಅಭಿಪ್ರಾಯ, ಕಾನೂನು, ಮುಂತಾದವುಗಳ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿಯೇ ಈ ಹೆಂಗಸರ ಮನೆಯ ಮೇಲೆ ದಾಳಿ ಮಾಡುವುದು, ಹಿಂಸಿಸುವುದು, ಒತ್ತಾಯ ಮಾಡುವುದು, ರಕ್ಷಿಸುವುದು, ಸುಧಾರಣೆ ಮಾಡುವುದು, ಅವರಿಗೆ ಪುನರ್‌ವಸತಿ ಒದಗಿಸುವುದು, ಸಮಾಜದ ಈ ಪ್ರಯತ್ನಗಳು ಅವರ ಜೀವನ ವಿಧಾನವನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿದೆ.

ಸಮಾಜದ ಈ ಧೋರಣೆಯಿಂದಾಗಿ ಅವರ ಮೇಲೆ ನಡೆಯುವ ಹಿಂಸೆ, ಹಲ್ಲೆಯನ್ನು ಹಿಂಸೆಯೆಂದೇ ಪರಿಗಣಿಸುವುದಿಲ್ಲ. ಕಥ್‌ಲೀನ್ ಬಾರಿ ಎಂಬವರು, ವೇಶ್ಯಾವೃತ್ತಿಯಲ್ಲಿ ಹಿಂಸಾ ಪ್ರವೃತ್ತಿ ಹೇಗೆ ಅವಿಭಾಜ್ಯ ಅಂಗವಾಗಿದೆಯೆಂಬುದನ್ನು ವಿವರವಾಗಿ ವಿವರಿಸುತ್ತಾ ಹೆಂಗಸಿನ ಅಪಹರಣ ಮಾರಾಟ,ವ್ಯವಹಾರ ಜಾಲ, ಪ್ರೀತಿಯ ನಾಟಕದ ಮೂಲಕ, ಯಾವುದೇ ಸ್ವರೂಪದದ್ದಾರೂ, ಅದರ ಹಿಂದೆ ಹಿಂಸೆ ಅಡಗಿರುತ್ತದೆಯೆಂದು ಹೇಳುತ್ತಾರೆ. ಈ ದೃಷ್ಟಿಕೋನದ ಹಿನ್ನಲೆಯಲ್ಲಿ ಈ ಸಮಸ್ಯೆಯನ್ನು ನೋಡಿದರೆ ವೇಶ್ಯಾವೃತ್ತಿಗೆ ಬರುವ ಮಹಿಳೆಯರು ಒತ್ತಾಯದಿಂದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎಂದರ್ಥವಾಗುತ್ತದೆ. ಹಣಕ್ಕಾಗಿ ಈ ವ್ಯಾಪಾರವನ್ನು ಮಾಡುತ್ತಿದ್ದಾರೆಂದರೆ, ಇದು ಖಂಡಿತ ಲೈಂಗಿಕ ಶೋಷಣೆಯಾಗುತ್ತದೆ. ಆದರೆ ಯಾವುದೇ ರೀತಿಯ 'ಒತ್ತಾಯ'ವೂ ಸಹ ಹಿಂಸೆಯೇ, ಅದು ಲೈಂಗಿಕ ಒತ್ತಾಯ ವಿರಬಹುದು ಅಥವಾ ಇನ್ಯಾವುದೇ ಸ್ವರೂಪದ ಒತ್ತಾಯವಿರಬಹುದು. ಆದರೆ ವೇಶ್ಯಾವೃತ್ತಿಯನ್ನೇ ಒಂದು ಬಲಾತ್ಕಾರದ, ಹಿಂಸೆಯಿಂದ ಕೂಡಿದ ವ್ಯವಸ್ಥೆಯೆಂದು ಪರಿಗಣಿಸಿದರೆ ಈ ವೃತ್ತಿಯಲ್ಲಿನ ಘಟನೆಗಳನ್ನು ಮಾತ್ರ ಹಿಂಸಾ ಸ್ವರೂಪವುಳ್ಳವು ಎಂದು ನೋಡಲಾಗುವುದಿಲ್ಲ. ಲೈಂಗಿಕ ಕಾರ್ಯಕರ್ತೆಯೊಬ್ಬಳು ಪ್ರತಿ ಗಂಡಸಿನ ಜೊತೆ ನಡೆಸುವ ಸಂಘರ್ಷವೂ ಅತ್ಯಾಚಾರ ಪ್ರಕರಣಗಳೇ ಆಗುತ್ತವೆ.

ಇಲ್ಲಿ ಇರುವ ಮುಖ್ಯ ಪ್ರಶ್ನೆಯೆಂದರೆ 'ಆಯ್ಕೆ' ಅಥವಾ 'ಒತ್ತಾಯ' ಕ್ಕೆ ಸಂಬಂಧಿಸಿದ್ದಲ್ಲ. ಮುಖ್ಯ ಪ್ರಶ್ನೆಯಿರುವುದು ಸಮಾಜೀಕರಣದ ಬಗ್ಗೆ. ಒಳ್ಳೆಯ ಹೆಂಗಸು, ಕೆಟ್ಟ ಹೆಂಗಸು

ಎಂಬುದರ ಬಗ್ಗೆ ಮುಖ್ಯವಾಹಿನಿಯಲ್ಲಿ ನೈತಿಕತೆಯ ವಿಷಯದ ಮೇಲೆ ನಡೆಯುತ್ತಿರುವ ಪ್ರಶ್ನೆಯ ಬಗ್ಗೆ. ಈ ವೃತ್ತಿಯಲ್ಲಿರುವ ಮಹಿಳೆಯರು ಒಳ್ಳೆಯ ಹೆಂಗಸಾಗಿರಬೇಕೆ ಅಥವಾ ಕೆಟ್ಟ ಹೆಂಗಸಾಗಿರಬೇಕೆ ಎಂಬುದನ್ನು ಒತ್ತಾಯ ಪೂರ್ವಕವಾಗಿ ಮಾಡಿಕೊಳ್ಳಬೇಕಾದ ಆಯ್ಕೆ ಇದಾಗಿದೆ.

ಒಂದು ಸಾರಿ ಅವರು ಈ ಆಯ್ಕೆಯನ್ನು ಮಾಡಿಕೊಂಡರೆ ವಾಪಸ್ಸು ಮರಳಿ ಹೋಗುವ ಪ್ರಶ್ನೆಯೇ ಇರುವುದಿಲ್ಲ. ಈ ನಿಲುವಿನಲ್ಲಿ ಸ್ವತಂತ್ರ ಪಡೆದ ಒಂದು ಹೊಳವೂ ಇವೆ. ಮುಖ್ಯವಾಹಿನಿಯು ಎತ್ತಿ ಹಿಡಿಯುವ ನೈತಿಕತೆಯನ್ನು ಇವರು ಬಹಿಷ್ಕರಿಸುತ್ತಾರೆ. ಆದುದರಿಂದ ಇವರು ಶಾಶ್ವತವಾದ ಹಣೆಪಟ್ಟಿಯನ್ನು ಪಡೆಯುವುದರ ಮೂಲಕ ಶಿಕ್ಷೆಗೆ ಒಳಗಾಗುತ್ತಾರೆ. ಈ ಕಳಂಕವನ್ನು ಹೊತ್ತು ಬದುಕುವ ಧೈರ್ಯ ಮಾಡಿದರೆ, ಆತ್ಮಗೌರವದ ಕನಸನ್ನು ಸಹ ಕಾಣಬಹುದು. "ನಮ್ಮನ್ನು ಯಾರೂ ಕೇಳಲ್ಲ" ವೇಶ್ಯಾವೃತ್ತಿ ನಡೆಸುತ್ತಿರುವ ಬಹಳಷ್ಟು ಮಹಿಳೆಯರು ಈ ಮಾತನ್ನು ಸದಾ ಆಡುತ್ತಾರೆ. ಪೋಲಿಸರು ನೀಡುವ ಕಿರುಕುಳ, ನ್ಯಾಯಾದೀಶರು ತೀರ್ಪು ನೀಡುವಾಗ, ಹಳ್ಳಿಯ ಜನ ಇವರಿಗೆ ಬಹಿಷ್ಕಾರ ಹಾಕುವಾಗ, ಪರ್ಯಾಯ ಜೀವನ ವ್ಯವಸ್ಥೆ ಮಾಡಲು ಪ್ರಯತ್ನಿಸುವ ಯಾರೂ ಇದರ ಧ್ವನಿಗೆ ಕಿವಿಗೊಡುವುದಿಲ್ಲ. ಇಂತಹ ಸ್ಥಿತಿಯಲ್ಲಿರುವ ಇವರು ಧ್ವನಿ ಎತ್ತುವುದೇ ಒಂದು ರಾಜಕೀಯ ಕ್ರಿಯೆ. ಅವರ ಧ್ವನಿಯನ್ನು ಆಲಿಸುವುದು ಒಂದು ರಾಜಕೀಯ ಕ್ರಿಯೆ. ಮಹಾರಾಷ್ಟ್ರದ ಸಾಂಗ್ಲಿಯ ಕಮಲಾ, ಭಿರುವಾ ಮಾರ್ಗವಾ ತಮ್ಮ ಮೇಲೆ ನಡೆಯುವ ಹಿಂಸೆಯನ್ನು ಕುರಿತು ಮಾತನಾಡಿದರೆ ಕೊಲ್ಕತ್ತಾದ ಉಮಾ ತಾನು ಹಿಂಸೆಯನ್ನು ಎದುರಿಸಲು ಕಂಡುಕೊಂಡ ಮಾರ್ಗದ ಬಗ್ಗೆ ಮಾತನಾಡುತ್ತಾಳೆ.

ಕಮಲಾ :-

ಈ ಪ್ರದೇಶದಲ್ಲಿ ತುಂಬಾ ಜನ ಗುಂಡಾಗಳಿದ್ದಾರೆ. ರಾತ್ರಿಯಾಗುತ್ತಲೇ ಚಾಕು ಹಿಡಿದು ಕೊಂಡು ಬರುತ್ತಾರೆ. ಹೆಣ್ಣು ಮಕ್ಕಳನ್ನು ಹೆದರಿಸಿ, ಬಲಾತ್ಕರಿಸಿ, ಅವರಲ್ಲಿ ಇರುವ ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಅವರಲ್ಲಿ ಒಬ್ಬ ಸಿದ್ದರಾಮ ಸಾಂಬ್ರೆ ಕಳೆದ ಹತ್ತು ವರ್ಷಗಳಿಂದ ಆತ ಒಬ್ಬ ಹೆಂಗಸಿನ ಜೊತೆಗೆ ವಾಸವಾಗಿದ್ದಾನೆ. ಆತ ಯಾವಾಗಲು ನಮ್ಮನ್ನು ಬೆದರಿಸುತ್ತಲೆ ಇರುತ್ತಾನೆ. ಅವನು ಹಾಕಿದ ಗೆರೆಯನ್ನು ಯಾರಾದರೂ ದಾಟುವ ಧೈರ್ಯ ಮಾಡಿದರೆ ಅವರನ್ನು ಅಮಾನವೀಯವಾಗಿ ಥಳಿಸುತ್ತಿದ್ದ.

ಒಂದು ದಿನ ನಾನು ಸಿದ್ದರಾಮನ ಹೆಂಗಸಿನ ಜೊತೆಗೆ ಸಣ್ಣ ಜಗಳ ಮಾಡಿದ್ದೆ. ಅವಳು ಈ ವಿಷಯವನ್ನು ಅವನಿಗೆ ತಿಳಿಸಿದ್ದಳು. ಅದೇ ದಿನ ರಾತ್ರಿ ಅವನು ಕುಡಿದು ಬಂದು ಅವಾಚ್ಯ ಶಬ್ದಗಳಿಂದ ನನ್ನನ್ನು ಬೈಯ ತೊಡಗಿದ. ನಾನು ಬಾಗಿಲು ಹಾಕಿಕೊಂಡೆ. ಹುಡಿಗಿಯರೆಲ್ಲಾ ಹೆದರಿಕೊಂಡು ಜೊತೆಯಲ್ಲಿ ಮುದುಡಿ ಕುಳಿತರು. ಅವನು ಅವಾಚ್ಯ ಶಬ್ದಗಳಿಂದ ಕೂಗುತ್ತಲೇ ಇದ್ದ. ಹುಡುಗಿಯರು ಹೆದರಿಕೊಂಡು ಕೂಗುತ್ತಿದ್ದರು. ಅವನು ಬಾಗಿಲು ಮುರಿದು ಒಳ ಬಂದು ನನ್ನನ್ನು ಒದೆಯ ತೊಡಗಿದ. ಒದೆಯುತ್ತಲೇ ನನ್ನನ್ನು ಹೊರಗೆ ಎಳೆದು ಕೊಂಡು ಬಂದ. ಹೊರಗೆ ಜನರ ಗುಂಪು ಸೇರುತ್ತಿತ್ತು. ಆದರೆ ನನ್ನ ರಕ್ಷಣೆಗೆ ಯಾರೂ ಬರಲಿಲ್ಲ.

ನನ್ನ ಬೈಯುತ್ತಲೇ ಅಲ್ಲಿ ಇರುವ ಒಂದು ಬಿದುರು ಬೊಂಬನ್ನು ಎತ್ತಿಕೊಂಡ, ಅದನ್ನು ನೋಡಿ ನಾನು ಹೆದರಿದೆ. ತಪ್ಪಿಸಿ ಕೊಳ್ಳಲು ಓಡ ತೊಡಗಿದೆ. ಆದರೆ ನನ್ನನ್ನು ಎಳೆದು ಬೊಂಬಿನಿಂದ ಹೊಡೆಯ ತೊಡಗಿದ. ನಾನು ಕೂಗುತ್ತಿದ್ದರೂ ಯಾರೂ ನನ್ನ ನೆರವಿಗೆ ಬರಲಿಲ್ಲ. ನನ್ನ ಮೈಯೆಲ್ಲಾ ಬರೆಯಿಂದ ಕೂಡಿತ್ತು. ನಾನು ಕೆಳಗೆ ಬಿದ್ದು ರೋಧಿಸ ತೊಡಗಿದೆ. ನನ್ನ ಸುತ್ತಲೂ ಜನ ನೆರೆದಿದ್ದರು. ಸಿದ್ಧರಾಮುನನ್ನು ಎದುರು ಹಾಕಿಕೊಂಡು ನನ್ನ ನೆರವಿಗೆ ಬರಲು ಯಾರೂ ತಯಾರಿರಲಿಲ್ಲ. ಅವನು ಅಲ್ಲಿದ್ದವರನ್ನೆಲ್ಲಾ ಹೆದರಿಸಿ ಹೊರಟು ಹೋದ. ಮರುದಿನ ನಾನು ದೂರು ನೀಡಲು ಪೊಲೀಸ್ ಠಾಣೆಗೆ ಹೋದೆ. ಆದರೆ ಅವನು ಮೊದಲೇ ಠಾಣೆಗೆ ಹೋಗಿ ಪೋಲೀಸರನ್ನು ಅಡ್ಜಸ್ಟ್ ಮಾಡಿದ್ದ. ಯಾರು ನನ್ನ ದೂರನ್ನು ಕೇಳಲಿಲ್ಲ. ನನ್ನ ದೂರನ್ನು ಕೇವಲ ಒಂದು ಸಣ್ಣ ಏಟೆಂದು ದಾಖಲಿಸಿ ಅವನನ್ನು ಬಿಟ್ಟು ಬಿಟ್ಟರು.

ಭೀಮವಾ :-

ಒಂದು ವರ್ಷದ ಹಿಂದೆ ಮಹೇಶ್ ಎಂಬ ರೌಡಿಯೊಬ್ಬ ನಮ್ಮ ಕಾಲೋನಿಗೆ ಬರುತ್ತಿದ್ದ. ಅವನು ನಮ್ಮ ಹುಡಿಗಿಯರನ್ನು ಹೆದರಿಸುತ್ತಿದ್ದನು. ಆ ಸಮಯದಲ್ಲಿ ನನ್ನ ಮಗ ಮನೆಯಲ್ಲಿದ್ದ. ಆ ರೌಡಿ ನನ್ನನ್ನು ಹೊಡೆಯುತ್ತಿದ್ದಾಗ, ನನ್ನ ಮಗ ತಡೆಯಲು ಬಂದ. ಅವನ ಸ್ನೇಹಿತರು ನನ್ನ ನೆರವಿಗೆ ಬಂದರು. ಮಹೇಶ್ ಮನೆಯಿಂದ ಓಡಿ ಹೋಗುವಾಗ ಒಂದು ಕಾರಿಗೆ ಡಿಕ್ಕಿ ಹೊಡೆದು ಗಾಯಗೊಂಡು, ನನ್ನ ಮಗ ಹಾಗೂ ಅತನ ಸ್ನೇಹಿತರ ಮೇಲೆ ಕಳ್ಳತನದ ಸುಳ್ಳು ಆರೋಪ ಹೊರಿಸಿ ದೂರು ನೀಡಿದ.

ನಂತರ ಪೊಲೀಸರು ನಮಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಮಹೇಶ್ ದೂರು ನೀಡಿದ್ದರಿಂದ ನನ್ನ ಮಗ ಹಾಗೂ ಅವನ ಸ್ನೇಹಿತರು ಬಚ್ಚಿಟ್ಟುಕೊಂಡರು. ಪೋಲಿಸ್ ಇನ್ಸ್‌ಪೆಕ್ಟರ್ ಹಾಗೂ ಐದು ಜನ ಹವಾಲ್ದಾರರು ನನ್ನ ಮಗನನ್ನು ಹುಡುಕಿಕೊಂಡು ಬಂದರು. ಅವನು ಸಿಗದಿದ್ದಾಗ, ನನ್ನನ್ನು ಠಾಣೆಗೆ ಕರೆದು ಕೊಂಡು ಬಂದರು. ನನ್ನ ಮಗ ಕಳ್ಳತನ ಮಾಡಿದನೆಂದು ಆರೋಪ ಮಾಡಿದ್ದ ವಾಚು ಹಾಗೂ ಬಂಗಾರದ ಉಂಗುರವನ್ನು ಕೊಡುವಂತೆ ಕೇಳಿದರು. ನನಗೆ ಗೊತ್ತಿಲ್ಲವೆಂದು ಉತ್ತರಿಸಿದೆ. ಸಬ್ ಇನ್ಸ್‌ಪೆಕ್ಟರ್ ತನ್ನ ಬೆಲ್ಟನ್ನು ಬಿಚ್ಚಿ ಕರುಣೆಯಿಲ್ಲದೆ ನನ್ನನ್ನು ಹೊಡೆಯ ತೊಡಗಿದ

ಅಮಾನವೀಯತೆಯಿಂದ ನನ್ನನ್ನು ಹೊಡೆಯಲಾಯಿತು. ನಾನು ಬೇಡಿಕೊಂಡೆ. ನನ್ನ ಮಗನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆಯೆಂದು ಹೇಳಿದೆ, ಆದರೆ ನನ್ನ ಮಾತನ್ನು ಕೇಳಲು ಯಾರೂ ತಯಾರಿರಲಿಲ್ಲ. ಅವನು ಬೆಲ್ಟನಿಂದ ನನ್ನ ಹೊಡೆಯುತ್ತಲೇ ಇದ್ದ. ನನ್ನ ಕೈಗಳೆಲ್ಲಾ ಗಾಯದಿಂದ ಕೆಂಪಾಗಿದ್ದವು. ತುಂಬಾ ಕತ್ತಲಾದ ಮೇಲೆ ನನ್ನನ್ನು ಬಿಡಲಾಯಿತು. ನನ್ನನ್ನು ರಕ್ಷಿಸ ಬೇಕಾಗಿದ್ದ ಜನರೇ ನನ್ನನ್ನು ಹೊಡೆಯುತ್ತಿದ್ದರು. ನಾವು ಯಾರ ಬಳಿ ಹೋಗಬೇಕು?

ಮಾರ್ಗವಾ :-

ನಾನು ಹುಟ್ಟಿದ ಊರಿನ ನನ್ನ ಜನರ ಕಥೆಯನ್ನು ನಿಮಗೆ ಹೇಳುತ್ತೇನೆ. ಬಾಗಲಕೋಟೆ ಜಿಲ್ಲೆಯ ಜಲದುಟ್ಟಿ ನನ್ನ ಊರು. ನಾವು ಹರಿಜನರು. ನನ್ನ ತಂದೆ ತಾಯಿಯರಿಗೆ ಗಂಡು ಮಕ್ಕಳಿಲ್ಲದ ಕಾರಣ ನನ್ನನ್ನು ದೇವದಾಸಿಯನ್ನಾಗಿ ಮಾಡಿದರು. ಆಗ ನಾನು ಸಾಂಗ್ಲಿಗೆ ಬಂದು, ವೇಶ್ಯೆಯಾಗಿ ಕೆಲಸ ಮಾಡುತ್ತಾ ದುಡಿದು ನನ್ನ ಕುಟುಂಬವನ್ನು ಸಾಕುತ್ತಿದ್ದೆ. ನನಗೊಬ್ಬ ಮಗಳಿದ್ದಾಳೆ. ನನ್ನ ಸ್ಥಿತಿ ಹಾಗೆಯೇ ಇದೆ. ನನಗೆ ಬೇರೆಯಾವ ರೀತಿಯ ಬೆಂಬಲವೂ ಇಲ್ಲ. ನಾನು ನನ್ನ ಮಗಳನ್ನು ಮದುವೆ ಮಾಡಿಕೊಡಬೇಕೆಂದು ಕೊಂಡಿದ್ದೇನೆ. ಆದರೆ ದೇವದಾಸಿಯ ಮಗಳನ್ನು ಯಾರು ಮದುವೆಯಾಗುತ್ತಾರೆ. ಕೊನೆಗೆ ನಾನು ನನ್ನ ಮಗಳನ್ನು ದೇವದಾಸಿಯನ್ನಾಗಿ ಮಾಡಿದೆ. ಮೊದಲು ಇದಕ್ಕೆ ಸಂಬಂಧಪಟ್ಟ ಯಾವುದೇ ಕಾನೂನು ಇರಲಿಲ್ಲ. ಆದರೆ ಇಂದು ಅಂತಹ ಕಾನೂನು ಇದೆ. ನನಗೆ ಯಾವುದೇ ಬೆಂಬಲವಿರದ ಕಾರಣ ನನ್ನ ಮಗಳನ್ನು ದೇವದಾಸಿಯನ್ನಾಗಿ ಮಾಡಬೇಕಾಯಿತು.

ಎಲ್ಲರಿಗೂ ಈ ವಿಷಯ ತಿಳಿಯಿತು. ಹಳ್ಳಿಯಲ್ಲಿ ಈ ಕುರಿತು ಸಭೆಯನ್ನು ಮಾಡಿ, ನನ್ನನ್ನು ಊರಿನಿಂದ ಬಹಿಷ್ಕರಿಸಬೇಕೆಂದು ತೀರ್ಮಾನಿಸಿದರು. ಪೋಲಿಸರು ಬಂದು ನನ್ನನ್ನು ಕರೆದುಕೊಂಡು ಹೋದರು. ಕೇಸನ್ನು ವಾಪಸ್ಸು ತೆಗೆದು ಕೊಳ್ಳಲು 40,000/- ರೂ.ಗಳನ್ನು ಕೇಳಿದರು. ನನ್ನ ಬಳಿ ಅಷ್ಟು ಹಣವಿಲ್ಲವೆಂದು ತಿಳಿಸಿದೆ. ನನ್ನ ಮಗಳನ್ನು ದೇವದಾಸಿ ಮಾಡಲು ಬಿಡಿರೆಂದು ಗ್ರಾಮದ ಜನರನ್ನು ಕೇಳಿಕೊಂಡೆ. ಎಲ್ಲರೂ ನಮ್ಮಿಂದ ಹಣ ಕೇಳುತ್ತಿದ್ದರು. ನಾವು ಹೆದರಿಕೆಯಿಂದ ದಿನ ನೂಕುತ್ತಿದ್ದೆವು. ಕೊನೆಗೊಂದು ದಿನ ಊರಿನ ಸರಪಂಚನ ನೆರವಿನಿಂದ ಊರು ಬಿಟ್ಟು ಸಾಂಗ್ಲಿಗೆ ಬಂದೆ.

ಉಮಾ :-

ನಾನು ಬೀಗದ ಕೈ ಗೊಂಚಲನ್ನು ತೆಗೆದುಕೊಂಡು ನನ್ನ ಸೀರೆಯ ಕೊನೆಯಲ್ಲಿ ಕಟ್ಟಿಕೊಳ್ಳುತ್ತಿದ್ದೆ. ನನ್ನನ್ನು ಗದರಿಸುವ ಜನರ ದಂಡು ಎದುರು ಬೀದಿಯಲ್ಲಿ ಕುಳಿತಿರುತ್ತಿತ್ತು. ನಾನು ನಡೆಯುವಾಗ. ಆ ಬೀಗದ ಗೊಂಚಲನ್ನು ತೂಗುತ್ತಾ ಹೋಗುತ್ತಿದ್ದೆ. ನೋಡಪ್ಪಾ ಬಂದ್ಲು ಎಂದು ಅವರು ಎದ್ದು ನಿಲ್ಲುತ್ತಿದ್ದರು. ಕೆಲವರು ಒಂದೆರೆಡು ಹೆಜ್ಜೆ ಮುಂದೆ ಬರುತ್ತಿದ್ದರು. ಅವರನ್ನು ನೋಡುತ್ತಲೇ ನಾನು ನನ್ನ ಸೀರೆಯ ಸೆರಗನ್ನು ಉದ್ದ ಮಾಡಿ ಗಿರಿ ಗಿರಿ ತಿರುಗಿಸುತ್ತಿದ್ದೆ. ಭಾರವಾಗಿದ್ದ ಕೀಗಳು ಗಿರಗಿಟ್ಟಿಯ ಹಾಗೆ ತಿರುಗುತ್ತಿದ್ದವು. ಯಾರಾದರೂ ನನ್ನನ್ನು ಹೆದರಿಸಲು ಮುಂದೆ ಬಂದರೆ ಭಾರವಾಗಿದ್ದ ಕೀಗಳ ಏಟು ಮುಖಕ್ಕೆ ರಪ್ಪೆಂದು ಬೀಳುತ್ತಿತ್ತು. ಆ ಕ್ಷಣದಲ್ಲಿ ನಾನು ತಪ್ಪಿಸಿಕೊಳ್ಳುತ್ತಿದ್ದೆ. ನನ್ನನ್ನು 'ರಿಂಗಬಾಬ್' ಎಂದು ಕರೆಯ ತೊಡಗಿದರು. ಕ್ರಮೇಣ ನನಗೆ ಆ ಹೆಸರೇ ಅಂಟಿಕೊಂಡಿತು. ನಾ ನಡೆದುಕೊಂಡು ಬರುವಾಗಲೆಲ್ಲ 'ಎ ನೋಡು ಬರುತ್ತಿದ್ದಾಳೆ' ಎಂದು ಪಿಸುಗುಟ್ಟುತ್ತಿದ್ದರು. ನಾನು ಕೀ ಗೊಂಚಲನ್ನು ತಿರುಗಿಸುತ್ತಾ ಜೋರಾಗಿ ನಡೆದು ಹೋಗುತ್ತಿದ್ದೆ.

ನಿಪ್ಪಾಣಿಯಲ್ಲಿ ನಡೆದದ್ದೇನು ?

ಫೆಬ್ರವರಿ 18, 2002 ರಂದು ನಿಪ್ಪಾಣಿಯಲ್ಲಿ ಹಲವು ಗುಂಡಾಗಳು ವೇಶ್ಯೆಯನ್ನು ಮನೆಯಿಂದ ಈಚೆ ಎಳೆದು ಥಳಿಸಿದ್ದರು. ಏಡ್ಸ್ ರೋಗವನ್ನು ತಡೆಗಟ್ಟುವ ಉದ್ದೇಶದಿಂದ ವೇಶ್ಯೆಯರು ಸಭೆ ನಡೆಸಲು ಒಂದು ಚಿಕ್ಕ ಜಾಗವನ್ನು ಪಡೆದಿದ್ದರು. ಎರಡನೆಯ ಸಭೆ ನಡೆದ ನಂತರ ಅಲ್ಲಿಯ ನಗರ ಸಭಾ ಸದಸ್ಯರು ಈ ಸಭೆಗಳನ್ನು ತಡೆಯಲು ಪ್ರಯತ್ನಿಸಿದರು. ಆದರೆ ಈ ಮಹಿಳೆಯರು ನಗರ ಸಭಾ ಸದಸ್ಯರ ಒತ್ತಾಯಕ್ಕೆ ಮಣಿಯಲಿಲ್ಲ. ಅವರು ಸಭೆ ನಡೆಸುವುದನ್ನು ಮುಂದುವರಿಸಿದರು. ಇದರ ಪರಿಣಾಮವಾಗಿ ಇವರನ್ನು ಅಮಾನೀಯವಾಗಿ ಹಿಂಸಿಸಲಾಯಿತು. ಶಬಾನಾ ಬಾಜಿ ಎಂಬ ಮಹಿಳೆ ಪೋಲಿಸರಿಗೆ ದೂರು ನೀಡಿ ರಕ್ಷಣೆ ಕೋರಿದ್ದಳು. ಆದರೆ ಸರ್ಕಲ್ ಇನ್ಸ್‌ಪೆಕ್ಟರ್ ಅವಳ ದೂರನ್ನು ದಾಖಲಿಸಲು ನಿರಾಕರಿಸಿದರು. ಅವಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಮಾತ್ರವಲ್ಲದೆ, ಅವಳ ಮೇಲೆ ಅತ್ಯಾಚಾರ ಮಾಡುವುದಾಗಿ ಹೆದರಿಸಿದ್ದ. ಜೀವಭಯದಿಂದ ಹೆದರಿದ ಹೆಂಗಸರು ಪಕ್ಕದ ಗ್ರಾಮಗಳಿಗೆ ಓಡಿ ಹೋದರು.

ವೇಶ್ಯೆಯರ ಪರವಾಗಿ ಕಾರ್ಯನಿರತವಾಗಿರುವ ಸಂಘಟನೆಗಳು ಈ ಘಟನೆಯನ್ನು ಪ್ರತಿಭಟಿಸಲು ನಿರ್ಧರಿಸಿದವು. ಕರ್ನಾಟಕ ಮುಖ್ಯಮಂತ್ರಿ ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಗೆ ಮನವಿ ನೀಡಿ ಸರ್ಕಲ್ ಇನ್ಸ್‌ಪೆಕ್ಟರ್ ವಿರುದ್ಧ ಕ್ರಮ ತೆಗೆದು -ಕೊಳ್ಳುವಂತೆ ಒತ್ತಾಯಿಸಲಾಯಿತು. ರಾಷ್ಟ್ರೀಯ ಮಹಿಳಾ ಆಯೋಗ ಘಟನೆಯನ್ನು ಕುರಿತು ತನಿಖೆಯನ್ನು ನಡೆಸಿತು. ಇದರ ಪರಿಣಾಮವಾಗಿ ಪೋಲಿಸ್ ಇಲಾಖೆಯ ಅಧಿಕಾರಿಗಳು ಸರ್ಕಲ್ ಇನ್ಸ್‌ಪೆಕ್ಟರ್ ವಿರುದ್ಧ ಕ್ರಮ ಜರುಗಿಸುವ ಭರವಸೆಯನ್ನು ನೀಡಿದರು ಹಾಗೂ ವೇಶ್ಯೆಯರಿಗೆ ರಕ್ಷಣೆ

ನೀಡುವುದಾಗಿ ಭರವಸೆ ನೀಡಿದ್ದರು. ಮಾರ್ಚ್- 9ರಂದು ಸಾವಿರಾರು ವೇಶ್ಯೆಯರು ಬೀದಿಗಿಳಿದು ತಮಗೆ ನ್ಯಾಯ ಬೇಕೆಂದು ಸಾಂಗ್ಲಿಯ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಮರುದಿನ ಸುಮಾರು 200 ಜನ ಮಹಿಳಾ ಕಾರ್ಯಕರ್ತೆಯರು, ಪೋಲಿಸ್ ಇಲಾಖೆಯ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಸರ್ಕಲ್ ಇನ್ಸ್‌ಪೆಕ್ಟರ್ ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸಿದರು.

ಆಗಸ್ಟ 3 ರಂದು ಕರ್ನಾಟಕದ ಮುಖ್ಯಮಂತ್ರಿ S.M.ಕೃಷ್ಣ ರವರನ್ನು ಭೇಟಿಮಾಡಿ ವೇಶ್ಯೆಯರ ಮೇಲೆ ನಡೆಯುವ ಹಿಂಸಾ ಪ್ರಕರಣಗಳನ್ನು ಅವರ ಗಮನಕ್ಕೆ ತರಲಾಯಿತು. ಆಗಸ್ಟ 12ರಂದು ಸಂಸತ್ ಸದಸ್ಯ ವೀರ್‌ಕುಮಾರ್ ಪಾಟೀಲ್ ರವರನ್ನು ಭೇಟಿ ಮಾಡಲಾಯಿತು. ಅವರು ಮಹಾರಾಷ್ಟ್ರ ಸರ್ಕಾರದ ಪರವಾಗಿ ಕ್ಷಮೆಯನ್ನು ಯಾಚಿಸಿ ಯಾವ ಆತಂಕವಿಲ್ಲದೆ ಅವರು ಮನೆಗೆ ಮರಳಬಹುದೆಂಬ ಭರವಸೆಯನ್ನು ನೀಡಿದರು. ಸರ್ಕಲ್ ಇನ್ಸ್‌ಪೆಕ್ಟರ್ ಸಹ ಕ್ಷಮೆ ಯಾಚಿಸುವಂತೆ ಸೂಚನೆ ನೀಡಿದ್ದರು, ಸಂಸತ್ ಸದಸ್ಯರ ಮುಂದೆ ಕಣ್ಣೊರೆಸುವ ನಾಟಕ ಮಾಡಿದ್ದ ಸರ್ಕಲ್ ಇನ್ಸ್‌ಪೆಕ್ಟರ್, "ಇವರಿಗೆ ಸರಿಯಾಗಿ ಪಾಠ ಕಲಿಸುತ್ತೇನೆಂದು ನಿರ್ಧರಿಸಿದ್ದ". ಈ ಮಹಿಳೆಯರು ಮನೆಗಳಿಗೆ ವಾಪಸ್ಸು ಬರುವ ದಿನ, ದಾರಿಯುದ್ದಕ್ಕೂ ಪೋಲಿಸರು ಗಸ್ತು ತಿರುಗುತ್ತಿದ್ದರು. ಇವರ ನಡುವೆ ಗುಂಡಾಗಳು ಸಹ ಸೇರಿಕೊಂಡಿದ್ದರು. ಪೋಲಿಸರ ಎದುರಿಗೆ ಗುಂಡಾಗಳು ಹೆಂಗಸರನ್ನು ಹೊಡೆದು ಹಿಂಸಿಸತೊಡಗಿದರು. ರೇಶ್ಮಾ ಎಂಬ ಮಹಿಳೆಯನ್ನು ಗುಂಡಾಗಳು ಅಮಾನೀಯವಾಗಿ ಥಳಿಸುತ್ತಿದ್ದರೂ, ಪೋಲಿಸರು ಕುರುಡಾಗಿದ್ದರು. ಈ ಕುರಿತು ದೂರು ನೀಡಲಾದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ನಂತರ ಸಂಸತ್ ಸದಸ್ಯರ ಮೂಲಕ ಸ್ಥಳೀಯ ಮುಖ್ಯಸ್ಥರ ಸಭೆಯನ್ನು ಕರೆಯಲಾಯಿತು. ಈ ಸಭೆಯಲ್ಲಿ ದೀರ್ಘವಾದ ಮಾತುಕತೆಯ ನಂತರ ಸಭೆ ನಡೆಸಲು ಬೇರೆ ಜಾಗವನ್ನು ನೀಡುವ ಭರವಸೆಯನ್ನು ನಗರ ಸಭಾ ಸದಸ್ಯರು ನೀಡಿದರು.

ಆದರೂ ಮಹಿಳೆಯರು ಜೀವ ಭಯದಿಂದಲೇ ಜೀವನ ನಡೆಸುತ್ತಿದ್ದಾರೆ. ಅವರ ದೈನಂದಿನ ಬದುಕಿನ ಬವಣೆಗಳು ಅವರನ್ನು ಕಾಡುತ್ತಲೇ ಇವೆ. ರಾಜ್ಯಸರ್ಕಾರಗಳು ತಮ್ಮ ರಾಜಕೀಯ ಸಮಸ್ಯೆಗಳಲ್ಲಿ ಮುಳುಗಿವೆ.

ಮೂಲ :- ಅಪ್ ವೇಶ್ಯಾಸ್
ವ್ಯಾಂಪ್ಸ್ ವ್ಹೋರ್ಸ್, ವುಮೆನ್.
ಕನ್ನಡಕ್ಕೆ : ರಾಜೇಶ್ವರಿ H.S.

"ನಿಮಗೆ ತಿಳಿದಿರಲಿ"

ನಾರ್ವೆಯ ಹೋರಾಟಗಾರ್ತಿ-ಲೇಖಕಿ ಕೆಸ್ಟಿನ್ ಎರಿಕ್‌ಸನ್ ಹೇಳುತ್ತಾಳೆ :

ಅವಮಾನ ಅಂಟಿಕೊಳ್ಳುತ್ತದೆ ನೊಂದವರನ್ನೇ.

ಹೊಡೆತ ತಿಂದವರೇ ಅಪರಾಧಿಗಳಾಗುತ್ತಾರೆ.

ಗಾಯದಿಂದ ತೊಟ್ಟಿಕ್ಕುವ ನೆತ್ತರು ಅಪವಿತ್ರವಾಗುತ್ತದೆ

ಬಲಿಯಾದ ದೇಹವೆ ಪಾಪ ಪ್ರಜ್ಞೆಯಿಂದ ನರಳುತ್ತದೆ

ಅವಮಾನ ಅಂಟಿಕೊಳ್ಳುತ್ತದೆ

ನೊಂದವರನ್ನೇ.

ದಶಮಾನದ ಮೇಲೆ ಶತಮಾನ

ಶತಮಾನದ ಮೇಲೆ ಸಹಸ್ರಮಾನ

ಇದು ಕೊನೆಗೊಳ್ಳುವುದೇ ಇಲ್ಲವೆ ?

ಸೋದರಿಯರೆ, ಸಂಗಾತಿಗಳೆ, ಮಹಿಳೆಯರೆ ನಮ್ಮ ಸಿಟ್ಟು ಈಗ ಸಿಡಿಯುತ್ತದೆ.

ನಮ್ಮ ಹಾದಿಯಲ್ಲಿ ನಿಲ್ಲದಿರಿ,

ನಾಳೆಯ ಮಾಲೀಕರು ನಾವೇ ಆಗಿದ್ದೇವೆ.

ಹೌದು ಇದು ಆಶಾವಾದ, ಕನಸು.

ಇರಲಿ ಇಂಥ ಬಹಳಷ್ಟು ಕನಸುಗಳು....

❖❖❖❖

ನಿಮ್ಮ ಪುಟ

ಈ ಪುಟ ನಿಮಗಾಗಿ, ಇದೊಂದು ನೈಜ ಘಟನೆ. ಇದನ್ನು ವಿವರವಾಗಿ ಬರೆಯಲಾಗಿದೆ. ಇದರಲ್ಲಿ ಬಳಸಿರುವ ಹೆಸರು ನೈಜವಾದುದಲ್ಲ. ಈ ಘಟನೆಯ ಹಿಂದೆ ಹಲವಾರು ಸಂಕೀರ್ಣ ಪ್ರಶ್ನೆಗಳಿವೆ. ಈ ಪ್ರಶ್ನೆಗಳಿಗೆ ನಿಮ್ಮ ಅನಿಸಿಕೆಯನ್ನು ಬರೆದು ಕಳಿಸಿ. ನಿಮ್ಮ ಅನಿಸಿಕೆಯ ಎಳೆಗಳು ಚರ್ಚೆ, ಸಂವಾದಕ್ಕೆ ಸೇತುವೆಯಾಗಲಿದೆ.

ಸಂ.ಮಂಡಳಿ

ಬುರ್ಕಾ ಹಾಕಿಕೊಂಡ ಸಲೀಮಾ ಬಸ್ಸು ಹತ್ತುತ್ತಾಳೆ ಕಂಕುಳಲ್ಲಿ ಒಂದು ಮಗು ಕೈಯಲ್ಲಿ ಎಳೆ ಮಗು. ಇನ್ನೊಬ್ಬಳು ದೊಡ್ಡ ಮಗಳು ಜೊತೆಗೆ ವಯಸ್ಸಾದ ಗಂಡಸರೊಬ್ಬರು. ಎಲ್ಲರೂ ದಡಾ ದಡಾ ಬಸ್ಸು ಹತ್ತುತ್ತಾರೆ. ಸೀಟು ಇಲ್ಲದುದರಿಂದ ಎಲ್ಲರೂ ನಿಂತುಕೊಳ್ಳುತ್ತಾರೆ. ಪಕ್ಕದಲ್ಲಿ ಇಬ್ಬರು ಹೆಂಗಸರು ಕುಳಿತಿರುತ್ತಾರೆ. ಅವರಲ್ಲಿ ಒಬ್ಬಳು ಕಮಲ. ಅವರಿಬ್ಬರ ಪಕ್ಕದಲ್ಲಿ ಒಬ್ಬ ಹೆಂಗಸು ನಿಂತಿರುತ್ತಾಳೆ. ಕಮಲ ಇವರು ಬರುತ್ತಿರುವುದನ್ನು ನೋಡಿ ಮುಖ ಸಿಂಡರಿಸಿ ಕೊಳ್ಳುತ್ತಾಳೆ. ತಾನು ಸ್ವಲ್ಪ ಮುಂದೆ ಸರಿದು ನಿಂತಿರುವ ಹೆಂಗಸನ್ನು ಕುಳಿತು ಕೊಳ್ಳುವಂತೆ ಹೇಳುತ್ತಾಳೆ. ಸಲೀಮಾ ಮಗುವನ್ನೆತ್ತಿ ಕೊಂಡು, ಸಾವರಿಸಿ ಕೊಂಡು ನಿಲ್ಲಲು ಪ್ರಯತ್ನಿಸುತ್ತಾಳೆ ಪಕ್ಕದ ಸೀಟಿನಲ್ಲಿ ಇನ್ನಿಬ್ಬರು ಹೆಂಗಸರು ಕುಳಿತಿರುತ್ತಾರೆ. ಅವರಲ್ಲಿ ಒಬ್ಬಳು ಸುನಂದ. ಸೀಟಿನ ಹತ್ತಿರವಿದ್ದ ಕಂಬಕ್ಕೆ ಒರಗಿ ವಯಸ್ಸಾದ ಹೆಂಗಸು ವಿಜಯಮ್ಮ ನಿಂತಿದ್ದಾರೆ. ಇನ್ನೊಂದು ಸ್ಟಾಪ್ ಬರುತ್ತಿದ್ದ ಹಾಗೆ ಸುನಂದಳ ಪಕ್ಕ ಕುಳಿತ್ತಿದ್ದ ಹೆಂಗಸು ಇಳಿಯುತ್ತಾರೆ. ಸುನಂದ ಸಲೀಮಾಳನ್ನು ಕರೆದು ಜಾಗ ಕರೆದು ಸೀಟುಕೊಡುತ್ತಾಳೆ. ವಿಜಯಮ್ಮ ಪಕ್ಕಕ್ಕೆ ನಿಂತಿದ್ದರು ಆ ಸೀಟಿನಲ್ಲಿ ಕೂರದೆ, ದೂರದಿಂದ ಬರುತ್ತಿದ್ದ ಸಲೀಮಳಿಗೆ ಜಾಗ ಮಾಡಿಕೊಡುತ್ತಾಳೆ. ಸಲೀಮಾ ಕೂಡುತ್ತಿದ್ದ ಹಾಗೆ ಮಕ್ಕಳನ್ನು ಕರೆದು ಅದೇ ಸೀಟಿನಲ್ಲಿ ಅಡ್ಜಸ್ಟ್ ಮಾಡಿ ಕೂಡಿಸುತ್ತಾಳೆ. ಮುಂದಿನ ಸ್ಟಾಪ್‌ನಲ್ಲಿ ಸುನಂದ ಸಹ ಇಳಿಯುತ್ತಾಳೆ. ಪಕ್ಕಕ್ಕೆ ನಿಂತಿದ್ದ ವಿಜಯಮ್ಮ ಕುಳಿತುಕೊಳ್ಳಲು ಹೋಗುತ್ತಾಳೆ. ಆದರೆ ಸಲೀಮಾ ಸೀಟು ಬಿಡದೆ, ತನ್ನ ಜೊತೆಗೆ ಹತ್ತಿದ್ದ ಗಂಡಸನ್ನು ಕರೆದು ಕೂಡಿಸಿಕೊಳುತ್ತಾಳೆ. ವಿಜಯಮ್ಮ "ನಾನು ಮೊದಲೇ ಕುಳಿತುಕೊಳ್ಳಬಹುದಿತ್ತು. ಮಗುವನ್ನು ಎತ್ತಿ ಕೊಂಡು ನಿಂತಿದ್ದೀಯಾ ಅಂತ ಸೀಟು ಬಿಟ್ಟೆ. ಆದರೆ ನೀನು ನನಗೆ ಸೀಟು ಬಿಡದೆ ಆತನನ್ನು ಕರೆದು ಜಾಗ ಕೊಟ್ಟಿದ್ದು ಸರೀನಾ? ಎಂದು ಕೇಳಿದಳು. ಸಲೀಮಾ ಮಾತನಾಡದೆ, ಮುಖ ಆಕಡೆ ತಿರುಗಿಸುತ್ತಾಳೆ. ಕಮಲಳ ಪಕ್ಕದ ಸೀಟು ಖಾಲಿಯಾದದ್ದು ನೋಡಿ ಅಲ್ಲಿ ಹೋಗಿ ವಿಜಯಮ್ಮ ಕುಳಿತು ಕೊಳ್ಳುತ್ತಾಳೆ. ಕಮಲ "ಅದಕ್ಕೇ ರೀ ಇವರಿಗೆ ಸೀಟು ಬಿಡಬಾರ್ದು ಅವರದೇ ಅಡ್ಜಸ್ಟ್ ಮಾಡಿ ಕೊಂಡು ಬಿಡ್ತಾರೆ " ಎಂದು ಹೇಳುತ್ತಾ ಇಳಿಯಲು ಹೊರಡುತ್ತಾಳೆ. ವಿಜಯಮ್ಮ 'ಹಾಗಲ್ಲ' ಎನ್ನುತ್ತಾಳೆ.

1) ಕಮಲ ಮುಖ ಸಿಂಡರಿಸಿಕೊಳ್ಳಲು ಕಾರಣವೇನು ?
2) ಆಕೆಯ ಪಕ್ಕ ನಿಂತಿರುವ ಹೆಂಗಸನ್ನು ಕರೆದು ಕೂಡಿಸಿ ಕೊಂಡದ್ದು ಏಕೆ ?
3) ಆಕೆ ಹಾಗೆ ಮಾಡಲು ಕಾರಣವೇನು ?
4) ಸುನಂದ ಮಾಡಿದ್ದು ಸರಿಯೇ ? ಆಕೆ ಹಾಗೆ ಮಾಡಲು ಕಾರಣವೇನು ?
5) ಆಕೆ ಕಮಲಳಿಗಿಂತ ಹೇಗೆ ಭಿನ್ನ ?
6) ಸಲೀಮಾ ತನ್ನ ಪಕ್ಕದ ಸೀಟು ಖಾಲಿಯಾದಾಗ ವಿಜಯಮ್ಮನಿಗೆ ಬಿಡದಿರಲು ಕಾರಣವೇನು ? ಆಕೆ ಮಾಡಿದ್ದು ಸರಿಯೇ ?
7). ವಿಜಯಮ್ಮ ಹೇಳಿದ್ದು ಸರಿಯೇ ? ನೀವಾಗಿದ್ದರೆ ಏನು ಹೇಳುತ್ತಿದ್ದಿರಿ
8) ಕಮಲಳ ಪ್ರತಿಕ್ರಿಯೆ ಸರಿಯೇ ?
9) ವಿಜಯಮ್ಮ ಹಾಗಲ್ಲ ಎನ್ನುತ್ತಾರೆ? ಕಾರಣವೇನು?
10) ಕಮಲ ಹಾಗೂ ವಿಜಯಮ್ಮ ನವರ ಪ್ರತಿಕ್ರಿಯೆ ಬೇರೆ ಯಾಗೆದೆಯೆ ? ಹೇಗೆ
11) ವಿಜಯಮ್ಮ ನೀವಾಗಿದ್ದರೆ ಏನು ಹೇಳುತ್ತಿದ್ದಿರಿ

ಬಹುರಾಷ್ಟ್ರೀಯ ಕಂಪನಿಗಳಲ್ಲಿ ಮಹಿಳೆಯರು.

ಮಲೇಶೀಯಾದ ಪೆನಾಂಗ್‌ನ ಒಂದು ಕೊಠಡಿಯಲ್ಲಿ ಜೂಲಿ ಇನ್ನೂ ಮೂವರು ಯುವತಿಯರೊಂದಿಗೆ ವಾಸಮಾಡುತ್ತಾಳೆ. ಇವಳು ಬೆಳಿಗ್ಗೆ ಎಲ್ಲರಿಗಿಂತ ಮೊದಲು ಏಳುತ್ತಾಳೆ. ರಾತ್ರಿಯ ಅಡಿಗೆಯನ್ನು ಬಿಸಿಮಾಡುತ್ತಾಳೆ. ತಾನು ಉದ್ಯೋಗದಲ್ಲಿರುವ ಕಂಪನಿಯ ನೀಟಾದ, ಹಸಿರು ಯೂನಿಫಾರಂನಲ್ಲಿ ಸುಂದರವಾಗಿ ಕಾಣುತ್ತಾಳೆ. ಅಮೆರಿಕದ ಒಡೆತನವಿರುವ ಕಾರ್ಖಾನೆ-ಯೊಂದರಲ್ಲಿ ತಾನು ದುಡಿಯುತ್ತಿರುವುದು ಅವಳಿಗೆ ಹೆಮ್ಮೆಯ ವಿಷಯ. ಬಾಗಿಲ ಹೊರಗೆ ಓಡಾಡುವ ಮಹಿಳೆಯರನ್ನು ಓರೆಗಣ್ಣಿನಿಂದ ಗಮನಿಸುತ್ತಾಳೆ. ಮೂರು ವರ್ಷಗಳ ಹಿಂದೆ ತಾನು ಹೆಮ್ಮೆಯಿಂದ ಬೀಗಿದಷ್ಟು ಈಗಿಲ್ಲ ಎಂದಂದು ಕೊಳ್ಳುತ್ತಾಳೆ. ದಿನವಿಡೀ ಪಾಕೆಟ್ ಕ್ಯಾಲ್ಕುಲೇಟರುಗಳೊಳಗಿನ ಸಿಲಿಕನ್ ಚೂರುಗಳಿಗೆ ಕೂದಲೆಳೆಯ ತಂತಿಗಳನ್ನು ಮೈಕ್ರೊಸ್ಕೋಪಿನಲ್ಲಿ ತನಗೆ ಯಾವುದೂ ಸ್ಪಷ್ಟವಾಗಿ ಕಾಣುತ್ತಿಲ್ಲವೆಂದು ಗಾಬರಿಗೊಳ್ಳುತ್ತಾಳೆ.

"ಈ ಬಹುರಾಷ್ಟ್ರೀಯರು ತಾವು ಅಭಿವೃದ್ಧಿಗೆ ತಮ್ಮ ದೇಣಿಗೆಯನ್ನು ನೀಡುತ್ತಿದ್ದೇವೆಂದು ಹೇಳುತ್ತಾರೆ. ಆದರೆ ನಮ್ಮ ದೇಶಕ್ಕೆ ಅವರು ಒಂದೇ ಕಾರಣಕ್ಕಾಗಿ ಬರುತ್ತಾರೆ. ಅದೆಂದರೆ ಅಗ್ಗದ ಶ್ರಮ. ಅದೊಂದಿಲ್ಲದಿದ್ದರೆ ಅವರು ಬೇರೆಡೆಗೆ ಹೋಗಬಹುದು ಅಂದಮೇಲೆ, ಅದನ್ನು ಅಭಿವೃದ್ಧಿ ಎಂದು ಹೇಗೆ ಕರೆಯುವುದು ? ಅದು ಬಡಜನರು ಬಡವರಾಗಿಯೇ ಉಳಿಯುವುದನ್ನು ಅವಲಂಬಿಸಿರುತ್ತದೆ " ಎನ್ನುವುದು ವಿಶ್ವಸಂಸ್ಥೆಯಲ್ಲಿ ಉನ್ನತ ಸ್ಥಾನಗಳಲ್ಲಿರುವ ಮೂರನೆಯ ಜಗತ್ತಿನ ಮಹಿಳೆಯರು ಅಭಿಪ್ರಾಯ.

"ನಮಗೆ ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. 17 ವರ್ಷಕ್ಕಿಂತ ಹೆಚ್ಚು, 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ಅವಿವಾಹಿತರು,ಮಕ್ಕಳಿಲ್ಲದವರು, ಕನಿಷ್ಠವೆಂದರೆ ಪ್ರಾಥಮಿಕ ಶಿಕ್ಷಣ, ಗರಿಷ್ಠವೆಂದರೆ ಪ್ರೌಢ ಶಾಲೆಯ ಒಂದು ವರ್ಷದ ಶಿಕ್ಷಣವನ್ನು ಪಡೆದಿರಬೇಕು ; ಅವರು ಎಲ್ಲಾ ಪಾಳಿಗಳ ಕೆಲಸಕ್ಕೂ ಸಿದ್ಧರಿರಬೇಕು.

-ಮೆಕ್ಸಿಕೊ ಪತ್ರಿಕೆಯೊಂದರ ಜಾಹಿರಾತು

ದರ್ಜಿ ಕೆಲಸ ಮಾಡುವ ಚುರುಕಿನ ಹುಡುಗಿ ಅಲ್ಟಗ್ರೇಸಿಯ. ಇವಳು ದಿನಕ್ಕೆ ಸುಮಾರು 5.75 ಡಾಲರುಗಳಷ್ಟು ಸಂಪಾದಿಸತೊಡಗಿದಳು. ಇದು ತುಂಡು ಕೆಲಸಕ್ಕೆ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚಾಗಿತ್ತು. ಕ್ಯೂಬಾದಿಂದ ವಲಸೆ ಬಂದಿದ್ದ ಕಾರ್ಖಾನೆಯ ಮೇಲ್ವಿಚಾರಕ ಇವಳನ್ನು ತನ್ನ ಕಛೇರಿಗೆ ಕರೆಸಿಕೊಂಡ.

" ನಾನು ಚೆನ್ನಾಗಿ ಕೆಲಸಮಾಡುತ್ತಿದ್ದೇನೆಂದು ಹೇಳಿದ. ಆದರೆ ನನ್ನ ಹಾಗೇ ಅತ್ಯಂತ ಹೆಚ್ಚು ಸಂಪಾದಿಸುವ ಇನ್ನೂ ಕೆಲವರಿದ್ದ ಕಾರಣ ನಾವು ಹೊಲಿಯುವ ಪ್ರತಿ ತುಂಡಿಗೂ ಕೊಡುವ ಹಣವನ್ನು ಕಡಿತ ಗೊಳಿಸಲು ಒತ್ತಡ ತರಲಾಗಿದೆಯೆಂದು ತಿಳಿಸಿದ".

ಅವಳೀಗ ಅತಿ ಹೆಚ್ಚು ದುಡಿದ ದಿನಗಳಲ್ಲಿ ಕೇವಲ 3 ಡಾಲರುಗಳನ್ನು ಮಾತ್ರ ಸಂಪಾದಿಸಬಹುದಿತ್ತು.

"ನಾನು ಕಡಿಮೆ ಸಂಪಾದಿಸುತ್ತಿದ್ದೆ. ವಾರದಲ್ಲಿ ಆರು ಅಥವಾ ಏಳು ದಿನಗಳೂ ದುಡಿಯುತ್ತಿದೆ ; ದುಡಿದು ದಣಿದಿದೆ. ಮೊದಲಿನಂತೆ ಚುರುಕಾಗಿ ದುಡಿಯಲು ಆಗುತ್ತಿರಲಿಲ್ಲ".

ಕೆಲವೇ ತಿಂಗಳಲ್ಲಿ ಅವಳು ದುಡಿಯಲಾಗದಷ್ಟು ರೋಗಿಷ್ಟೆಯಾದಳು. ಇದು 23 ವರ್ಷ ವಯಸ್ಸಿನ ಬ್ಯಾಸಿಲಿಯಂ ಆಲ್ಟಾಗ್ರೇಸಿಯಳ ಕಥೆ. ಇವಳು ಎಎಫ್‌ಎಲ್ - ಸಿಐಓ ಅಮೆರಿಕ ಒಕ್ಕೂಟದ ಡಾಮಿನಿಕನ್ ರಿಪಬ್ಲಿಕ್‌ನಲ್ಲಿ ಲಾರೋಮನ್ ಮುಕ್ತ ವ್ಯಾಪಾರ ವಲಯದಲ್ಲಿ ದರ್ಜಿಯಾಗಿದ್ದಾಳೆ (Michael Flannery : 1978).

"ಯುವಕಾರ್ಮಿಕರು ಅಶಾಂತರಾಗಿರುತ್ತಾರೆ; ವೃತ್ತಿಮೌಲ್ಯ ವಿರದ ಯಾಂತ್ರಿಕ ಕೆಲಸಗಳೆಂದರೆ ಅಸಹನೆ ತೋರುತ್ತಾರೆ; ಅವರು ಅಸಂತುಷ್ಟರಾದರೆಂದರೆ ಯಂತ್ರಗಳನ್ನು ವಶಪಡಿಸಿಕೊಳ್ಳುತ್ತಾರೆ ; ಮೇಲ್ವಿಚಾರಕರನ್ನು ಬೆದರಿಸಿಯೂ ಬಿಡುತ್ತಾರೆ. ಆದರೆ ಹುಡುಗಿಯರು ಹೆಚ್ಚು ಎಂದರೆ ಸ್ವಲ್ಪ ಅಳುತ್ತಾರೆ ". ಎಂದು ಟೈವಾನಿನ ಜೋಡಣಾ ಕಾರ್ಖಾನೆಯ ಕಾರ್ಯನಿರ್ವಾಹಕರು ಹೇಳುತ್ತಾರೆ. (Becky Cantwell Don Luce and Leonard Weinglass : 1978).

"ಅ ವಿವಾಹಿತ ಮಹಿಳೆಯರನ್ನು ನೇಮಕ ಮಾಡಿಕೊಳ್ಳುತ್ತಾರೆ. ಆದರೂ ಸಂತಾನಹರಣ ಶಸ್ತ್ರಚಿಕಿತ್ಸೆ-ಗೊಳಗಾದವರನ್ನೇ ಆಯ್ಕೆ ಮಾಡಿಕೊಳ್ಳ ಬಯಸುತ್ತಾರೆ.

-ಭಾರತದ ಒಬ್ಬ ಒಟ್ಟಿಗಿರಣಿ ಕಾರ್ಮಿಕಳು

(Amrita Chhachi : 1981)

"ಪೌರಾತ್ಯ ದೇಶಗಳ ಹೆಣ್ಣಿನ ಪ್ರಕೃತಿದತ್ತವಾದ ಚಾತುರ್ಯ ವಿಶ್ವದ ಎಲ್ಲೆಡೆ ಪ್ರಸಿದ್ಧ. ಅವಳ ಕೈಗಳು ಪುಟ್ಟದಾಗಿರುತ್ತವೆ. ಅವಳು ಅತ್ಯಂತ ಜಾಗರೂಕತೆಯಿಂದ

ಚುರುಕಾಗಿ ಕೆಲಸ ಮಾಡುತ್ತಾಳೆ. ಅಂದ ಮೇಲೆ ವ್ಯವಸ್ಥಿತವಾದೊಂದು ಜೋಡಣಾ ಉತ್ಪನ್ನದ ಸಾಮರ್ಥ್ಯವನ್ನು ಪ್ರಕೃತಿ ದತ್ತವಾಗಿ ಮತ್ತು ಪಾರಂಪರಿಕವಾಗಿ ಅರ್ಹರಾದ ಪೂರ್ವದೇಶಗಳ ಬಾಲೆಯರಿಗಲ್ಲದೆ ಮತ್ತಾರಿಗೆ ಹೆಚ್ಚಿಸಲು ಸಾಧ್ಯ ?

- ಮಲೇಶಿಯಾದ ಸರಕಾರೀ ಬಂಡವಾಳ

ಹೂಡಿಕೆ ಕೈಪಿಡಿ

"ಈ ಕಂಪೆನಿಗೆ ನನ್ನ ತಾರುಣ್ಯದ ಐದು ವರ್ಷಗಳನ್ನು ಮಾರಿಕೊಂಡಿದ್ದೇನೆ. ಮೆದುಳನ್ನು ನಿಷ್ಕ್ರಿಯಗೊಳಿಸುವ ಈ ಕೆಲಸದಿಂದ ಎರಡು ಅಥವಾ ಮೂರು ವಾರಗಳ ವಿಶ್ರಾಂತಿಯ ಅಗತ್ಯ ನನಗಿದೆ. ಆದರೆ ಕೆಲಸವನ್ನು ಬಿಡದ ಹೊರತು ಅಥವಾ ಭಾರೀ ನಷ್ಟವನ್ನು ಹೊಂದದ ಹೊರತು ರಜೆ ಪಡೆಯುವ ಬೇರೆ ದಾರಿಯೇ ನನಗಿಲ್ಲ. ಇಲ್ಲಿ ಹಲವಾರು ನಿಯಮಗಳಿವೆ. ನೀವು ಒಂದಿಂಚೂ ಅಲ್ಲಾಡಲು ಸಾಧ್ಯವಿಲ್ಲದಂತೆ ನಿಮ್ಮನ್ನು ಹಗ್ಗಗಳಿಂದ ಕಟ್ಟಿಹಾಕಿದ ಅನುಭವ ಉಂಟಾಗುತ್ತದೆ.

- ಟೈವಾನಿನ ಕಾರ್ಖಾನೆ ಕಾರ್ಮಿಕಳು

(ಲಿಂಡ್‌ಗೈಲ್ ಅರ್ರಿಗೊ : 1980)

"ತರಬೇತಿ ಪಡೆಯುತ್ತಿರುವ ಕಾರ್ಮಿಕರು ಅನುಪಯುಕ್ತವಾದ ದಾರಗಳನ್ನು ಉಡುಪುಗಳಿಂದ ತೆಗೆಯಲು ಅಲ್ಲಾಡಿಸಿದಾಗ ಕೊಠಡಿಯ ತುಂಬಾ ಧೂಳು ಹರಡಿಕೊಂಡು ಉಸಿರಾಡುವುದೇ ಕಷ್ಟವಾಗುತ್ತದೆ. ಅಂಥ ಧೂಳು ತುಂಬಿದ ಪರಿಸರದಲ್ಲಿ ನಾವು ದುಡಿಯುತ್ತಿದ್ದೇವೆ. ಆದರಿಂದಾಗಿ, ಕ್ಷಯ, ಶ್ವಾಸಕೋಶದ ಖಾಯಿಲೆ ಮತ್ತು ಕಣ್ಣಿನ ರೋಗಗಳಿಂದ ನರಳುವವರ ಸಂಖ್ಯೆ ನಮ್ಮಲ್ಲಿ ಹೆಚ್ಚುತ್ತಿದೆ..... ಒಣಗಿದ ಬಸಳೆ ಸೊಪ್ಪಿನಂತೆ ಬಿಳಿಚಿದ, ಅನಾರೋಗ್ಯಕರ, ನಿರಿಗೆಗಟ್ಟಿದ ನಮ್ಮ ಮುಖಗಳನ್ನು ಕಂಡಾಗ ನಮಗೆ ದುಃಖವಾಗುತ್ತದೆ.... ನಮ್ಮ ನಿಟ್ಟುಸಿರು ಮತ್ತು ದುಃಖಗಳೊಂದಿಗೆ ನಮ್ಮ ರಕ್ತ ದಾರ ಮತ್ತು ಹೊಲಿಗೆಯ ರೇಖೆಗಳಲ್ಲಿ ಕರಗಿಹೋಗುವುದು ಯಾರಿಗೂ ತಿಳಿದಿಲ್ಲವೇನೋ ಎಂದು ನನಗನ್ನಿಸುತ್ತದೆ.

- ಕುಮಾರಿ ಮಿನ್ ಚೊರಿಗ್ ಸುಕ್

ಉಡುಪು ಕಾರ್ಖಾನೆಯೊಂದರ ಕಾರ್ಮಿಕಳು

ದಕ್ಷಿಣ ಕೊರಿಯಾ.

"ನಾವು ನಮ್ಮ ಕಂಪನಿಯನ್ನು ಬೀದಿಬದಿಯ ಹೋಟೆಲ್ ಎಂದು ಕರೆಯುತ್ತೇವೆ. ಏಕೆಂದರೆ ನಮಗೆ ಶರಣಾಗತರಾಗಲು ಹೇಳಲಾಗುತ್ತದೆ. ಇಲ್ಲವೇ ಕೆಲಸದಿಂದ ವಜಾ ಆಗಬೇಕಾಗುತ್ತದೆ. ಆಗ ನಮಗೇನು ಮಾಡಬೇಕೆಂದೇ ತಿಳಿಯುವುದಿಲ್ಲ. ನಾವು ನಮ್ಮ ನೌಕರಿಯನ್ನು ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿರುವುದಿಲ್ಲ."

- ಫಿಲಿಪೈನ್ಸಿನ ಬಟಾನ್ ಎಕ್ಸ್‌ಪೋರ್ಟ್ ಪ್ರಾಸೆಸಿಂಗ್ ಜೋನ್‌ನ ಕಾರ್ಮಿಕಳು - ಲೈಂಗಿಕ ಕಿರುಕುಳವನ್ನು ಕುರಿತಂತೆ (ಫಿಲಿಪೈನ್ ಸಾಲಿಡಾರಿಟಿ ನೆಟ್‌ವರ್ಕ್ ಸ್ಲೈಡ್ ಶೊ)

"ಬ್ಯಾಟರಿ ಕಾರ್ಖಾನೆಯ ದುಡಿಮೆಯಿಂದ ನನಗೆ ದಿನಕ್ಕೆ 25 ಬಹ್ತ್ ಸಿಗುತ್ತದೆ (1.50 ಡಾಲರಿಗಿಂತ ಕಡಿಮೆ). ಇದು ನನ್ನ ಖರ್ಚುವೆಚ್ಚಕ್ಕೆ ಸಾಲುವುದಿಲ್ಲ. ನನ್ನ ಊಟ, ಬಸ್‌ಟಿಕೆಟ್ ಮತ್ತಿತರ ಖರ್ಚುಗಳಿಗೆ ಅದು ಹೇಗೆ ಸಾಕಾಗುತ್ತಿತ್ತು ? ನನ್ನದು ಖರ್ಚು ಮಾಡುವ ಸ್ವಭಾವ. ನನ್ನ ತಂದೆತಾಯಿಗಳಿಗೆ ಹಣ ಕಳುಹಿಸಲು ಸಾಧ್ಯವಾಗುವಂತೆ ರಾತ್ರಿಯ ಉದ್ಯೋಗವೊಂದನ್ನು ನಾನು ಕಂಡುಕೊಳ್ಳಬೇಕು.

- ಥಾಯ್ಲೆಂಡಿನ 20 ವರ್ಷದ ನೋಯ್ (ಓಂಜ್ ವೆರೆಲ್ಡ್ : 1979)

ಅನೇಕ ಮಹಿಳೆಯರಿಗೆ ತಾವು ಶೋಷಣೆಗೊಳಗಾಗುತ್ತಿರು-ವುದರ ಅರಿವಿರುವುದಿಲ್ಲ. "ಏಕೆಂದರೆ ನಮ್ಮ ಮೇಲೆ ವಿದೇಶೀಯರು ಮೇಲುಗೈ ಹೊಂದಿರುತ್ತಾರೆ. ವಿದೇಶೀ ಕಂಪನಿಗಳಲ್ಲಿ ಉದ್ಯೋಗದಲ್ಲಿರುವ ಮಹಿಳೆಯರು ಫಿಲಿಪೈನ್ ವ್ಯಾಪಾರಿಯೊಬ್ಬನ ಒಡೆತನದ ಸ್ಥಳೀಯ ಕಾರ್ಖಾನೆಗಳಲ್ಲಿ ನೇಮಕಗೊಂಡವರಿಗಿಂತ ತಾವು ಶ್ರೇಷ್ಠರು, ಎಂದು ಭಾವಿಸುತ್ತಾರೆ. ಆದರೆ ಕೆಲವರಿಗೆ ತಮ್ಮ ಪರಿಸ್ಥಿತಿಯ ಅರಿವಿದೆ; ಅವರು ಸಂಘಟಿಸುತ್ತಿದ್ದಾರೆ ; ಉತ್ತಮ ಪರಿಸ್ಥಿತಿಗಾಗಿ ಹೋರಾಟದಲ್ಲಿ ತೊಡಗಿದ್ದಾರೆ. ಸರಕಾರ ಅಂಥವರನ್ನು ಬಂಧಿಸುತ್ತಿರುವಾಗಲೂ ಅವರ ಸಂಖ್ಯೆ ಹೆಚ್ಚುತ್ತಿದೆ. ಎಲ್ಲವನ್ನೂ ಕೇವಲ ಕಾಲವೇ ನಿರ್ಣಯಿಸಬೇಕು. ಬದಲಾವಣೆಯ ಪೆಂಡ್ಯುಲಂನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ."

- ಚಾರಿಟೊ ಪ್ಲನಾಸ್

ಫಿಲಿಪೈನ್ ಚೇಂಬರ್ ಆಫ್‌ಕಾಮರ್ಸ್‌ನ

ಮಾಜಿ ನಿರ್ದೇಶಕಿ

ಸಂಗ್ರಹ : ವೆಂ. ವನಜ

ಆಧಾರ : ವಿಮೆನ್ ಇನ್ ದಿ ಗ್ಲೋಬಲ್ ಫ್ಯಾಕ್ಟರಿ:
ಆನ್ನೆಟ್ ಫ್ಯೂಯೆನ್ಟ್
ಬಾರ್ಬರಾ ಎರಿನ್‌ರಿಕ್

ಬೇಬಿ ಹಲ್ದಾರಳ ಡೈರಿ......

ಆಗ ಆ್ಯನ್ ಫ್ರಾಂಕ್‌ಳ ಡೈರಿ ಜಗತ್ತನ್ನು ಬೆಚ್ಚಿಬೀಳಿಸಿದರೆ, ಈಗ ಬೇಬಿ ಹಲ್ದಾರಳ ಡೈರಿ ಅಂಥದ್ದೇ ಪರಿಣಾಮ ಮಾಡುತಿದೆ.

ತನ್ನ ಮನೆಯಲ್ಲಿ ಕೆಲಸ ಮಾಡುವ ಆ ಹೆಂಗಸು ಪ್ರೊಫೆಸರ್ ಪ್ರಬೋಧ್ ಕುಮಾರ್‌ಗೆ ಪ್ರಶ್ನೆಯಾಗಿ ಕಾಡುತ್ತಿದ್ದಳು. ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು..., ಅಡಿಗೆ ಮಾಡುವುದು ಎಲ್ಲದರಲ್ಲಿಯೂ ಅವಳು ಚುರುಕು. ಕಷ್ಟ ಪಟ್ಟು ಕೆಲಸ ಮಾಡುವುದು ಆಕೆಯ ಜಾಯಮಾನ. ಆದರೆ ಪ್ರಬೋಧ್ ಕುಮಾರ್‌ರ ಪುಸ್ತಕದ ಕಪಾಟಿನ ಬಳಿಗೆ ಬಂದಾಗ ಮಾತ್ರ ಆಕೆಯದು ಮಂದಗತಿ. ಪ್ರತಿ ಪುಸ್ತಕವನ್ನೂ ದೂರಕ್ಕೆ ತೆಗೆದು, ಪುಟ ಪುಟವನ್ನೂ ಆಸಕ್ತಿಯಿಂದ ತಿರುವಿ ಮತ್ತೆ ಸ್ವಸ್ಥಾನದಲ್ಲಿ ಸೇರಿಸುತ್ತಿದ್ದ ಆ ನಾಜೂಕು ಪ್ರಬೋಧ್ ಕುಮಾರ್‌ಗೆ ಆಶ್ಚರ್ಯ ಹುಟ್ಟಿಸುತ್ತಿತ್ತು.

ನೀವು ಸಾಹಿತ್ಯಾಸಕ್ತರಾಗಿದ್ದರೆ ನಿಮಗೆ ಬಂಗಾಳಿ ಸಾಹಿತಿ ಮುನ್ಷಿ ಪ್ರೇಮ್ ಚಂದ್ ಅವರ ಪರಿಚಯ ಖಂಡಿತಾ ಇದ್ದೆ ಇರುತ್ತದೆ. ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಮಾನವ ಶಾಸ್ತ್ರ ಬೋಧಿಸಿ, ನಿವೃತ್ತರಾದ ಪ್ರೊಫೆಸರ್ ಪ್ರಬೋದ್ ಕುಮಾರ್ ಅವರು ಮುನ್ಷಿ ಪ್ರೇಮ್ ಚಂದ್ ಅವರ ಮೊಮ್ಮಗ. ದೆಹಲಿಯ ಸಾಹಿತ್ಯಿಕ ವಲಯದಲ್ಲಿ ಇವರದು ದೊಡ್ಡ ಹೆಸರು.

ಪ್ರಬೋದ್‌ಗೆ ಪ್ರಶ್ನೆಯಾಗಿದ್ದ ಈ ಹೆಂಗಸು ಬೇಬಿ ಹಲ್ದಾರ್. ಇಪ್ಪತ್ತೊಂಬತ್ತು ವರ್ಷದ, ಮೂರು ಮಕ್ಕಳ ಈ ತಾಯಿಯನ್ನು ಪ್ರಬೋದ್ ಮನೆಗೆ ಕೆಲಸಕ್ಕೆ ತಂದಿಟ್ಟವನು ಅವರ ಮನೆಗೆ ಹಾಲು ಕೊಡುವ ಹುಡುಗ.

ಒಂದು ದಿನ ಆಕೆ ಪುಸ್ತಕಗಳನ್ನು ತನ್ನ ಎಂದಿನ ಶೈಲಿಯಲ್ಲಿ ಒರೆಸುತ್ತಿದ್ದಾಗ, ಆಕೆಯ ಚರ್ಯೆಯನ್ನು ತಮ್ಮ ಕನ್ನಡಕದ ಮೂಲೆಯಾದಲೇ ಗಮನಿಸುತ್ತಿದ್ದ ಪ್ರಬೋದ್ ಕೇಳಿದರು. "ನೀನು... ಓದ್ತಿಯಾ ?" ಮಗುವೊಂದು ಬಿಸ್ಕತ್ ಡಬ್ಬಿಯಲ್ಲಿ ಕೈ ಇಳಿ ಬಿಟ್ಟಿರುವಾಗಲೇ ಸಿಕ್ಕಿ ಹಾಕಿಕೊಂಡ ಸ್ಥಿತಿ ಆಕೆಯದಾಗಿತ್ತು.

ತಾನು ತನಗಿಂತ ಹದಿನಾಲ್ಕು ವರ್ಷ ದೊಡ್ಡವನನ್ನು ಮದುವೆಯಾಗುವವರೆಗೂ ಶಾಲೆಗೆ ಹೋಗುತ್ತಲೇ ಇದ್ದ ಬೇಬಿ ಹಲ್ದಾರ್‌ಗೆ ಪ್ರೊಫೆಸರ್ ಪ್ರಬೋದ್ ಪುಸ್ತಕ ಓದಿದಾಗ ಆಕೆಗೆ ಅದು ತನ್ನ ಬಾಲ್ಯದ್ದೇ ಕಥೆ ಎನ್ನಿಸಿತು. ಅನಂತರ ಪ್ರಬೋದ್ ಕುಮಾರ್ ಪುಸ್ತಕದ ಕಪಾಟನಿಂದ ಒಂದೊಂದೇ ಪುಸ್ತಕಗಳು ಹೊರಬಂದವು. ಆಶಾಪೂರ್ಣಾ ದೇವಿ, ಮಹಾಶ್ವೇತಾ ದೇವಿ, ಬುದ್ಧ ದೇವ್ ಗುಹಾ ಎಲ್ಲರ ಪುಸ್ತಕಗಳನ್ನೂ ಆಕೆ, ಹಸಿದ ಹುಡುಗನೊಬ್ಬ ಸಿಕ್ಕ ಅನ್ನವನ್ನು ಕಬಳಿಸುವ ವೇಗದಲ್ಲಿಯೇ ಓದಿ ಪಕ್ಕಕಿಟ್ಟಳು.

ಈ ಹೆಂಗಸು ಓದುವ ವೇಗವನ್ನು ಗಮನಿಸಿದ ಪ್ರಬೋದ್‌ಗೆ ಏನನ್ನಿಸಿತೋ ! ಒಂದು ದಿನ ಆಕೆಗೊಂದು ಪೆನ್ನು ಹಾಗೂ ಕಾಪಿ ಪುಸ್ತಕಕೊಟ್ಟು 'ಬರಿ' ಎಂದರು. ಇದು ಸೂಚನೆಯೋ..... ಆಜ್ಞೆಯೋ..... ಎಂಬುದು ಬೇಬಿ ಹಲ್ದಾರ್‌ಗೆ ಅರ್ಥವಾಗಲಿಲ್ಲ. ಅಸಹಾಯಕತೆಯಿಂದ ಆಕೆಯ ದುಃಖದ ಕಟ್ಟೆ ಒಡೆದು ಬಂತು. ಹಾಗೆ ಆಕೆಗೆ ಬರೆಯಲಿಕ್ಕಾದರೂ ಏನಿತ್ತು ?

ಆಕೆಯದು ಗುರಿ ಇಲ್ಲದ ಬದುಕು. ಡ್ರೈವರ್ ಆಗಿದ್ದ ತಂದೆ ಒಬ್ಬ ಮಾಜಿಸೈನಿಕ. ತಾಯಿ ಇಲ್ಲದ ತನ್ನ ಮಕ್ಕಳನ್ನು ಅವನು ಕಾಶ್ಮೀರದಿಂದ ಮುಷಿರಾಬಾದ್‌ಗೆ, ಅಲ್ಲಿಂದ ದುರ್ಗಾಪುರ್‌ಗೆ ಕರೆದು ತಂದಿದ್ದ. ಚಿಕ್ಕಂದಿನಲ್ಲಿ ಅಪ್ಪನ ದೌರ್ಜನ್ಯ ಸಹಿಸಿದ ಹಲ್ದಾರ್‌ಗೆ ನಂತರ ಮಲತಾಯಿ ಕಾಟ. ಆ ಮೇಲೆ ಕಟ್ಟಿಕೊಂಡ ತನಗಿಂತ ಬಹಳ ವಯಸ್ಸಾದ ಗಂಡನ ಹಿಂಸೆ. ಒಂದು ದಿನ ತೀರಾ ಬೇಸತ್ತ ಅವಳು ತನ್ನ ಮೂರು ಮಕ್ಕಳನ್ನು ಕಟ್ಟಿಕೊಂಡು ತಾನು ಕಂಡು ಕೇಳರಿಯದ ದೆಹಲಿಗೆ ರೈಲು ಹತ್ತಿದಳು. ಬಡತನ, ಕುಡುಕ ಗಂಡನ ಕಾಟದಿಂದ ಬೇಸತ್ತು ಓಡಿ ಬಂದ ತನ್ನಂಥ ಸಾವಿರಾರು ಹೆಣ್ಣು ಮಕ್ಕಳ ಹಾದಿಯನ್ನೇ ಹಿಡಿದಳು. ತುತ್ತು ತುತ್ತಿಗೂ ಹೆಣಗಾಡಿದಳು. ಕೊರೆಯುವ ಚಳಿಯ ರಾತ್ರಿಗಳನ್ನು ದೆಹಲಿಯ ಬೀದಿಗಳಲ್ಲಿ ತನ್ನ ಕಂದಮ್ಮಗಳನ್ನು ಅವುಚಿಕೊಂಡೇ ಕಳೆದಳು.

ಕತ್ತಲೆ ತುಂಬಿದ್ದ ಲೋಕದಲ್ಲಿ ಹೀಗೆಲ್ಲ ಬದುಕಿದ ಹೆಣ್ಣು ಮಗಳನ್ನು, ಮನುಷ್ಯಳಂತೆ ನಡೆಸಿಕೊಂಡ ವ್ಯಕ್ತಿ ಪೆನ್ನೊಂದನ್ನು ಕೊಟ್ಟು ಆಕೆಯ ಬದುಕಿನ ಬಗ್ಗೆ ಬರೆಯುವಂತೆ ಕೇಳಿದರೆ ಹೋಗಾಗ ಬೇಡ...! ಆದರೆ ಬೇಬಿ ಹಲ್ದಾರ್ ಒಳಗೊಳಗೇ ಕಾಡುವ ಆತಂಕ, ಅಧೈರ್ಯಗಳ ಮಧ್ಯೆ ಎಂಥದ್ದೋ ಒಂದು ವಿಚಿತ್ರ ಸೆಳೆತದಿಂದ, ತಾನು ಕಾಪಿ ಬರೆದ ಇಪ್ಪತ್ತು ವರ್ಷಗಳ ನಂತರ ಮತ್ತೆ ಪೆನ್ನು ಕೈಗೆತ್ತಿಕೊಂಡಳು, ಮೊದಲ ಕೆಲವು ಪುಟಗಳನ್ನು ಮನೆಯ ಇತರ ಕೆಲಸಗಳಂತೆಯೇ ಕಷ್ಟದಿಂದ ಬರೆದಳು. ಆಕೆಗೆ ಅಕ್ಷರಗಳೇ ಮರೆತು ಹೋದಂತೆ ಅನ್ನಿಸುತ್ತಿತ್ತು. ಇದರಿಂದ ಅವಳಿಗೆ ಸಾಕಷ್ಟು ಮುಜುಗರವಾಗುತ್ತಿತ್ತು. ನಾವು ಬರೆಯುವ ಕಾಪಿ ಪುಸ್ತಕದಲ್ಲಿ ಅಮ್ಮ ಏಕೆ ? ಏನನ್ನು ಬರೆಯುತ್ತಿದ್ದಾಳೆ ; ಇದು ಅವಳ ಕಂದಮ್ಮಗಳ ಪ್ರಶ್ನೆ.

ಮೊದಲ ಕೆಲವು ಪುಟಗಳ ನಂತರ ಆಕೆಯ ಬರವಣಿಗೆ ಸರಾಗವಾಯಿತು. ಅವಳ ಗತ ಬದುಕಿನ ಕೋಣೆಯ ಬಾಗಿಲನ್ನು ತೆರೆದು ನೆನಪುಗಳು ನಾಮುಂದು, ತಾಮುಂದು ಎಂದು ನುಗ್ಗಿ ಬಂದವು. ಮಕ್ಕಳನ್ನು ಅನಾಥರನ್ನಾಗಿಸಿದ ತಾಯಿ, ಮದುವೆಯಾದ.ತನ್ನ ಗಂಡ ಮೊದಲ ರಾತ್ರಿ ತನ್ನ ಮೇಲೆ ನಡೆಸಿದ ಅತ್ಯಾಚಾರ, ಗಂಡನೇ ನೇಣುಹಾಕಿಕೊಂದ ತನ್ನ ತಂಗಿ, ಹದಿಮೂರು ವರ್ಷಕ್ಕೆ ಮೊದಲ ಮಗುವನ್ನು ಹೆರುವಾಗ ಅನುಭವಿಸಿದ ಯಮಯಾತನೆ..... ಯಾರಲ್ಲಿಯೂ ಹಂಚಿಕೊಳ್ಳಲಾಗದ ಇಂಥ ಎಷ್ಟೋ ಗತ ಬದುಕಿನ ರಹಸ್ಯಗಳು ಕಾಪಿ ಪುಸ್ತಕದ ಸಾಲುಗಳ ನಡುವೆ ಜೀವಂತಗೊಳ್ಳಲು ತೊಡಗಿದಂತೆ ಆಕೆಯ ಬರವಣಿಗೆ ಇನ್ನಿಲ್ಲದ ವೇಗ ಪಡೆದುಕೊಂಡಿತ್ತು. ಅವಳಲ್ಲಿ ಬರೆಯುವ ತುಡಿತ ಎಷ್ಟಿತ್ತೆಂದರೆ, ಅಡಿಗೆ ಮನೆಯಲ್ಲಿ ತರಕಾರಿ ಹೆಚ್ಚುವಲ್ಲಿ, ಮಕ್ಕಳು ಮಲಗಿದ ನಂತರದ ನೀರವ ರಾತ್ರಿಗಳಲ್ಲಿ, ಸೀಮೆ ಎಣ್ಣೆ ದೀಪದ ಬೆಳಕಿನಲ್ಲಿ..... ಹೀಗೆ ಎಲ್ಲೆಂದರಲ್ಲಿ ಆಕೆಯ ತಡೆರಹಿತ ಬರವಣಿಗೆ ಸಾಗಿತ್ತು.

ಆಕೆ ಬರೆಯುವುದನ್ನು ಕಂಡಾಗ ಪ್ರಬೋದ್‌ಗೆ ಅನ್ನಿಸಿದ್ದು : 'ಅರೆ, ನಾನು ಬರೆಯುವ ಮೊದಲು ಏನೆಲ್ಲ ಸಿದ್ಧತೆ ಮಾಡ್ತೇನೆ ! ಎಷ್ಟೆಲ್ಲ ಅಗತ್ಯಗಳು ! ಕುರ್ಚಿ, ಅದರ ಮುಂದೊಂದು ಮೇಜು, ಬರೆಯುವ ಕಾಗದ ! ಆದರೆ ಈಕೆ ತರಕಾರಿ ಕತ್ತರಿಸುವ ವೇಗ, ಲಾಲಿತ್ಯ, ತಲ್ಲೀನತೆ, ಖಚಿತತೆಯಲ್ಲಿ ಬರೆಯುತ್ತಿದ್ದಾಳೆ!

ಪ್ರಬೋದ್ ಹೇಳಿದ್ದು ; "ಆಕೆಯ ಬರಹದ ಫಲತಾಂಶ ಕೂಡ ಅನಿರೀಕ್ಷಿತ. ನಾನು ಆಕೆಯನ್ನು ಬರೆಯುವಂತೆ ಒತ್ತಾಯಿಸಿದಾಗ, ನನ್ನ ಮನಸ್ಸಿನಲ್ಲಿ ಇದ್ದದ್ದು ತನ್ನ ಒಳಕುದಿಯಿಂದ ಆಕೆ ಹೊರಬರಲಿ ಎಂದಷ್ಟೇ. ಆದರೆ ಆಕೆ ತನ್ನೆಲ್ಲ ನೋವನ್ನು ಅಕ್ಷರಗಳಲ್ಲಿ ಮೂಡಿಸಿ, ಪುಟ ಪುಟಗಳನ್ನು ತುಂಬಿಸಿದಾಗ ಅದು ತನ್ನದೇ ಆದ ವಿಶಿಷ್ಟ ಶೈಲಿ ಪಡೆದುಕೊಂಡಿತ್ತು."

ಅದನ್ನು ಓದಿದ ನಂತರ ಪ್ರಬೋದ್‌ರಲ್ಲಿ ಒಂದು ರೀತಿ ಸಂಭ್ರಮ. ಆದರೆ ಅವರಿಗೆ ಅವರ ತೀರ್ಮಾನದಲ್ಲಿ ನಂಬಿಕೆ ಇರಲಿಲ್ಲ. ತಮ್ಮಂತೆಯೇ ಸಾಹಿತ್ಯದಲ್ಲಿ ಆಸಕ್ತಿ ಇರುವ ಗೆಳೆಯರಾದ ಅಶೋಕ್ ಶೇಕ್ಸಾರಿಯಾ, ಹಾಗೂ ರಮೇಶ್ ಗೋಸ್ವಾಮಿ ಮುಂದೆ ಅವರು 'ಕಾಪಿ' ಪುಸ್ತಕಗಳನ್ನಿಟ್ಟರು. ಬೇಬಿ ಹಲ್ದಾರಳ ಹಸ್ತ (ಕಾಪಿ) ಪ್ರತಿಯನ್ನೂ ಓದಿದ ಆ ಇಬ್ಬರಿಗೂ ಆಶ್ಚರ್ಯ. ಅದು ಅವರಿಗೆ ಮತ್ತೊಂದು ಆ್ಯನ್‌ಫ್ರಾಂಕ್ ಡೈರಿಯ ದರ್ಶನ ಮಾಡಿಸಿತ್ತು. ಆಕೆಯ ಬಂಗಾಳಿ ಬರಹವನ್ನು ಹಿಂದಿಗೆ ಅನುವಾದ ಮಾಡುವಂತೆ ಅವರು ಪ್ರಬೋದ್‌ಗೆ ಸೂಚಿಸಿದರು. ಆಗ ಸಿದ್ಧವಾದದ್ದು; 'ಆಲೋ ಆಂಧಾರಿ'. (ಕತ್ತಲು ಬೆಳಕು) ಕತ್ತಲ ಕಥೆಯೊಂದು ಬೆಳಕಿಗೆ ಬಂದದ್ದು ಹೀಗೆ!

ಇಂಥ 'ಅಸಹಜ' ಬರಹವನ್ನು ಪ್ರಕಟಿಸಲು ಮುಂದೆ ಬರುವವರ ಸಂಖ್ಯೆ ತೀರಾ ಕಡಿಮೆ. ಇಂದಿನ ಸಂದರ್ಭದಲ್ಲಿ ಇಂಥ ತೀರಾ 'ಅರುಚಿ' ಬರವಣಿಗೆಯಲ್ಲಿ ರುಚಿ ಕಾಣುವವರು ಯಾರು? ಇಂಥ ಸಂಧರ್ಭದಲ್ಲಿ ಪ್ರಕಟಣೆಗೆ ಮುಂದಾದವರು 'ರೋಹಿಣಿ ಪಬ್ಲಿಷರ್ಸ್'ನ ಸಂಜಯ್ ಭಾರತಿ. ಹಣ ನಷ್ಟವಾದರೂ ಚಿಂತೆಯಿಲ್ಲ ಪ್ರಕಟಿಸಿ, ಪ್ರಯತ್ನಿಸೋಣ ಎಂಬುದು ಅವರ ನಿಲುವು. 'ಆಲೋ ಆಂಧಾರಿ' ಪ್ರಕಟವಾದ ನಂತರ ಈ ನಾಲ್ಕು ಗೆಳೆಯರಿಗೆ ಅಚ್ಚರಿ ಕಾದಿತ್ತು. ಪ್ರಯತ್ನಕ್ಕೆ ಫಲ ಸಿಕ್ಕಿತ್ತು. ಪ್ರಕಟವಾದ ದಿನದಿಂದಲೇ ಪುಸ್ತಕ ಮಾರಾಟವಾಗ ತೊಡಗಿತು. ಕಸ ಗುಡಿಸುವ ಹೆಂಗಸಿನಿಂದ, ಶಾಲೆಯ ಮಾಸ್ತರರ ವರೆಗೆ ಎಲ್ಲರಿಗೂ ಅದನ್ನು ಓದುವ ಆತುರ. ಮೊದಲ ಮುದ್ರಣದ ಪ್ರತಿಗಳು ಖರ್ಚಾಗಿದ್ದು. ಈಗ ಎರಡನೇ ಮುದ್ರಣ ಸಿದ್ಧವಾಗುತ್ತಿದೆ. ಈಕೆಯ ಕಥೆಯನ್ನು ಸಿನಿಮಾ ಮಾಡಲು ಖ್ಯಾತ ನಿರ್ದೇಶಕ ಪ್ರಕಾಶ್ ಝಾ ಮುಂದೆ ಬಂದಿದ್ದಾರೆ. ಮತ್ತೊಬ್ಬರು ಇದನ್ನು ರಂಗಭೂಮಿಗೆ ಅಳವಡಿಸಲು ಸಿದ್ಧತೆ ನಡೆಸಿದ್ದಾರೆ, ತಮಿಳು, ಒರಿಯಾ, ಇಂಗ್ಲಿಷ್, ತೆಲುಗು ಭಾಷೆಯ ಅನುವಾದಕ್ಕೂ ಕೆಲವರು ಮುಂದಾಗಿದ್ದಾರೆ. 'ಭಾಷಾಬಂಧನ್' ಎಂಬ ಕಲ್ಕತ್ತೆಯ ಸಾಹಿತ್ಯಿಕ ಪತ್ರಿಕೆ ಇದನ್ನು ಮೂಲ ಬಂಗಾಳಿಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಲು ಸಜ್ಜಾಗಿದೆ.

ಇದೆಲ್ಲವನ್ನೂ ಬೆರಗಿನಿಂದ ನೋಡುತ್ತಿರುವ ಬೇಬಿ ಹಲ್ದಾರ್‌ಗೆ ತನ್ನ ಪುನರ್ಜನ್ಮದ ಬಗ್ಗೆ ಅನ್ನಿಸುತ್ತಿರುವುದಾದರೂ ಏನು?

"ನನ್ನ ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ನನ್ನ ಕಥೆ ನನ್ನ ಮಾತುಗಳಲ್ಲಿ ಅರ್ಹವಾಗಿದೆ ಎಂಬ ನಂಬಿಕೆ ನನಗೂ ಬಂದಿದೆ."

ಕೊನೆ ಮಾತು : "ಆಲೋ ಆಂಧಾರಿ" ಕನ್ನಡಕ್ಕೂ ಬಂದರೆ.....!

ಕೃಪೆ : ಔಟ್‌ಲುಕ್ ಪತ್ರಿಕೆ

ಕನ್ನಡ ಅನುವಾದ : ಮುರಳೀಧರ ಖಜಾನೆ.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

BOOK-POST
PRINTED MATTER

REGD No. : CPMG/KA/BGE/289/2003 - 05



ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067

B.N. Sumithra Bai,
509, 16th Main,
Banashankari 1st Stage,
Srinagar, Bangalore – 560 050.